ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಒಂದು ಬಹಳ ಮಹತ್ವವಾದಂಥ ವಿಚಾರವನ್ನು ಹೇಳುವುದಾದರೆ, ಅಬ್ಕಾರಿ ಖಾತೆ. ಇತ್ತೀಚೆಗೆ ಅಬ್ಕಾರಿ ಖಾತೆಯಲ್ಲಿ ಬಹಳ ಉತ್ಪನ್ನ ಬಂದಿದೆ. ನಮ್ಮ ರಾಜ್ಯದಲ್ಲಿ ೧೯೭೭–೭೮ರಲ್ಲಿ ೫೬.೫೨ ಕೋಟಿ ರೂ. ೧೯೭೮–೭೯ರಲ್ಲಿ ೬೨ ಕೋಟಿ ರೂ., ೧೯೭೯–೮೦ರಲ್ಲಿ ೭೪ ಕೋಟಿ, ೧೯೮೦–೮೧ರಲ್ಲಿ ೯೪.೧೩ ಕೋಟಿ ರೂ. ಬಂದಿದೆ. ೧೯೮೧–೮೨ರಲ್ಲಿ ೧೩೩ ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದೆ. ಇದನ್ನು ನೋಡಿದರೆ ನಮ್ಮ ಎಕ್ಸೈಸ್ ಕಮಿಷನರ್‌ರವರು ಬಹಳ ಪ್ರಾಮಾಣಿಕವಾದ ರೀತಿಯಲ್ಲಿ ಕೆಲಸ ಮಾಡಿ ತೋರಿಸಿದ್ದಾರೆ. ಶ್ರೀಮಾನ್ ಭಟ್ಟಾಚಾರ್ಯರವರು ಬೆಳಗಾಂನಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿದ್ದಾಗ ಬಹಳ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಕಳ್ಳ ಭಟ್ಟಿ, ಸಾರಾಯಿ, ಡೀ ನೇಚರ್ಡ್ ಸ್ಪಿರಿಟನ್ನು ಕುಡಿದರೆ ಅದು ಶರೀರಕ್ಕೆ ಬಹಳ ಅಪಾಯ. ಅದು ಶರೀರದೊಳಗೆ ಹೋಗಿ ಗಾಯಗಳನ್ನು ಉಂಟುಮಾಡುತ್ತದೆ; ಕೆಲವು ಸಂದರ್ಭದಲ್ಲಿ ಕುರುಡುತನವನ್ನೂ ತರುತ್ತದೆ. ಇಷ್ಟೇ ಅಲ್ಲ ಅದು ಸ್ವಲ್ಪ ಹೆಚ್ಚಿಗೆ ಆಯಿತೆಂದರೆ ಮನುಷ್ಯನಿಗೆ ಮರಣವನೂ ಕೂಡ ತರುತ್ತದೆ.

೩–೩೦ ಪಿ.ಎಂ.

† ಈ ಡಿ ನೇಚರ್ಡ್ ಸ್ಪಿರಿಟ್ ಫ್ರೆಂಚ್ ಫಾಲೀಷ್, ರೆಕ್ಟಿಫೈಡ್ ಸ್ಪಿರಿಟ್ ಇದು ಮೂರು ೧೯೭೮–೭೯, ೧೯೭೯–೮೦, ೧೯೮೦–೮೧ ರಲ್ಲಿ ೩೪ ಲಕ್ಷ ಮಾರಾಟವಾಗಿತ್ತು. ಈವತ್ತು ಮಾರಿದ್ದು ೨೪ ಲಕ್ಷ ಲೀಟರ್ಸ್ ಮಾರಿದ್ದು ಸಂಪೂರ್ಣವಾಗಿ ಜೀರೋ ಮಾಡಿಬಿಟ್ಟಿದ್ದಾರೆ, ಈವತ್ತು ಕಳ್ಳಬಟ್ಟಿಸಾರಾಯಿಯಿಂದ ೧೩೦ ಕೋಟಿ ರೂಪಾಯಿಗಳು ಉತ್ಪನ್ನವಾಗಬೇಕಿದ್ದರೆ ೧೯೭೯–೮೦ ರೊಳಗೆ ಇದು ೨ ರೂಪಾಯಿಗೆ ಸಿಕ್ಕುತ್ತಿತ್ತು. ೧೯೭೮–೭೯ ರಲ್ಲಿ ಒಂದೂವರೆ ರೂಪಾಯಿಗೆ ಸಿಕ್ಕುತ್ತಿತ್ತು. ಈವತ್ತು ಇದು ೩–೨೦ ಪೈಸೆಯಾಗಿರುತ್ತದೆ. ಹೆಚ್ಚಿನ ದುಡ್ಡು ಕೊಡುತ್ತಿರುವುದರಿಂದ ಹೆಚ್ಚಿನ ಆದಾಯ ಬರುತ್ತಿದೆ. ಅದೇ ರೀತಿ ಡಿಸ್ಟಿಲರಿಯಿಂದ ಎಷ್ಟೋ ಹಣ ಸೋರಿ ಹೋಗುತ್ತಿದೆ. ಇದನ್ನು ಕಂಡು ಹಿಡಿಯಬೇಕೆಂದು ಪ್ರಾಮಾಣಿಕತನದಿಂದ ಕೆಲಸ ಮಾಡುತ್ತೇವೆಂದು ಹೇಳಿ ಕಳ್ಳಬಟ್ಟಿ ಸಾರಾಯಿಯನ್ನು ಹಿಡಿಯಲಿಕ್ಕೆ ಈ ಖಾತೆಗೆ ಎಷ್ಟು ಜನ ಕೊಟ್ಟಿರುತ್ತೀರಿ ಎಂದರೆ ೨೪೨ ಇನ್‌ಸ್ಪೆಕ್ಟರ್ಸ್. ಸಬ್‌ಇನ್‌ಸ್ಪೆಕ್ಟರ್ಸ್ ೪೮೭, ಎಕ್ಸೈಸ್ ಗಾರ್ಡ್ಸ್, ಇವರು ಕಾನ್‌ಸ್ಟೇಬಲ್ಸ್ ಅಲ್ಲ, ಇವರು ೨.೦೭೦೧. ೧೩೦

ಕೋಟಿ ರೂಪಾಯಿಗಳ ಉತ್ಪನ್ನ ಕೊಡುವಂಥ ಈ ಖಾತೆಗೆ ಇಷ್ಟು ಜನ ಸಿಬ್ಬಂದಿಯನ್ನು ಕೊಟ್ಟಿರುತ್ತೀರಿ. ಈ ಕಳ್ಳಬಟ್ಟಿ ಸಾರಾಯಿ ಮತ್ತು ಅದರೊಳಗೆ ಮೂರು ವಿಧಗಳು ಇರುತ್ತವೆ. ಸರ್ಕಾರಿ ಸಾರಾಯಿ ಅರಕ್, ಈ ಅರಕ್‌ನಿಂದ ೧೩೦ ಕೋಟಿ ರೂಪಾಯಿ ಆದಾಯ ಸರ್ಕಾರಕ್ಕೆ ಬರುತ್ತಿದೆ. ಆದರೆ ಕಳ್ಳಬಟ್ಟಿಸಾರಾಯಿ, ಕಲಕುಲ, ಕರವಾಡ್ ತಣ್ಣಿ ಇವೆಲ್ಲ ಕೂಡಿ ಬೇರೆ ಬೇರೆ ರೀತಿಯ ಕಳ್ಳಬಟ್ಟಿಸಾರಾಯಿ. ಇದನ್ನು ಯಾವುದರಿಂದ ಮಾಡುತ್ತಾರೆಂದರೆ ಡಿ ನೇಚರ್ಡ್ ಸ್ಪಿರಿಟ್, ರೆಕ್ಟಿಫೈಡ್ ಮತ್ತು ಫ್ರೆಂಚ್ ಪಾಲಿಷ್‌ನಿಂದ ತಯಾರು ಮಾಡುತ್ತಾರೆ. ಮತ್ತು ಇದಕ್ಕೆ ಅಫೀಮ್‌ನ ಅಂಶವನ್ನು ಜಾಸ್ತಿ ಬೆರೆಸಿರುತ್ತಾರೆ. ಇದನ್ನು ಮಾಡುವವರು ಯಾರು ಎಂದರೆ ಅಮಾಲಿಯಾದಂಥ ಜನ, ಸುಲ್ತಾನನಂಥ ಜನರು ಮಾಡುವುದಿಲ್ಲ. ಅವರು ಇದನ್ನು ಮಾಡಿಸುತ್ತಾರೆ. ಅವರು ಈ ವಿಜ್ಞಾನದಲ್ಲಿ ಎಕ್ಸ್‌ಪರ್ಟ್‌ಗಳು ಇರುತ್ತಾರೆ. ಇವರಿಂದ ತಯಾರಿಸಲ್ಪಟ್ಟ ಕಳ್ಳಬಟ್ಟಿಯಿಂದಲೇ ಬೆಂಗಳೂರಿನಲ್ಲಿ ಮುನ್ನೂರು ಜನರು ಸತ್ತರು. ನಮ್ಮ ರಾಜ್ಯದಲ್ಲಿ ಸರಿಯಾದ ರೀತಿಯಲ್ಲಿ ಈವತ್ತು ಕಳ್ಳಬಟ್ಟಿ ಸಾರಾಯಿ ಮಾಡುವವರಿಂದಲೇ ಹಣ ಸೋರಿಹೋಗುತ್ತಿರುತ್ತದೆ. ನಮ್ಮ ರಾಜ್ಯದಲ್ಲಿ ಸರಿಯಾದ ರೀತಿಯಲ್ಲಿ ಡಿಸ್ಟಿಲರಿಯನ್ನು ತಯಾರು ಮಾಡಿದರೆ ಯಶಸ್ವಿಯಾದ ರೀತಿಯಲ್ಲಿ ಹಣವನ್ನು ಗಳಿಸಬಹುದಾಗಿತ್ತು. ಆ ರೀತಿಯಾದ ವ್ಯವಸ್ಥೆ ಇಲ್ಲದ್ದರಿಂದ ಬೇರೆ ಬೇರೆ ರೀತಿಯ ಕಳ್ಳಬಟ್ಟಿಸಾರಾಯಿ ಮಾಡಲಿಕ್ಕೆ ಸಾಧ್ಯವಾಗಿರುತ್ತದೆ. ಇದನ್ನು ತಡೆಗಟ್ಟಲು ಕಾನೂನು ಮುಖಾಂತರ ಎಷ್ಟು ರಕ್ಷಣೆ ಕೊಟ್ಟಿರುತ್ತೀರಿ ಎಂದರೆ ಇದಕ್ಕೆ ಬಹಳ ಕಡಿಮೆ. ಅಧಿಕಾರಿಗಳಿಗೆ ಯಾವ ರೀತಿಯಾದ ರಕ್ಷಣೆ ಇಲ್ಲ. ಫಾರೆಸ್ಟ್ ಗಾರ್ಡ್ಸ್ ಇರುತ್ತಾರೆ ಅವರಿಗೆ ಯಾವ ರೀತಿಯಾದ ರಕ್ಷಣೆ ಇಲ್ಲ. ಎಕ್ಸೈಸ್ ಡಿಪಾರ್ಟ್‌ಮೆಂಟ್ ಎಂದು ಏನು ಇರುತ್ತದೆ ಇದನ್ನು ಬಹಳ ಯಶಸ್ವಿಯಾದ ಡಿಪಾರ್ಟ್‌ಮೆಂಟ್ ಮಾಡಬೇಕು. ಪೋಲೀಸ್. ಗೃಹಖಾತೆ ಎಂದು ಯಾವ ರೀತಿ ಒಂದೇ ಖಾತೆ ಇರುತ್ತದೆ ಅದರಂತೆ ಎಕ್ಸೈಸ್ ಮತ್ತು ಪೋಲೀಸ್ ಖಾತೆ ಎಂದು ಬೇರೆ ಬೇರೆ ಮಾಡಬೇಡಿ. ಐ.ಪಿ.ಸಿ. ಮತ್ತು ಸಿ.ಆರ್.ಪಿ.ಸಿ. ಹೊಣೆಯನ್ನು ಹೊತ್ತಂತ ಪೋಲೀಸ್ ಡಿಪಾರ್ಟ್‌ಮೆಂಟ್ ಬಹಳ ಪ್ರಾಮುಖ್ಯವಾದಂಥ ಡಿಪಾರ್ಟ್‌ಮೆಂಟ್. ಜನರ ಆಸ್ತಿ ಜೀವವನ್ನು ಯಾವರೀತಿ ರಕ್ಷಣೆ ಮಾಡುತ್ತದೆಯೋ ಅದೇ ರೀತಿ ಯಾರು ವಿಷಾಹಾರ ವಸ್ತುಗಳನ್ನು ಜನರಿಗೆ ಕುಡಿಸಿ ಜನರ ಪ್ರಾಣವನ್ನು ತೆಗೆಯುತ್ತಾರೋ ಅಂಥ ಜನರನ್ನು ಕಂಡುಹಿಡಿಯಲಿಕ್ಕೆ, ಕಳ್ಳಬಟ್ಟಿಸಾರಾಯಿಯನ್ನು ಜನರಿಗೆ ಕುಡಿಸಿ ಕೊಲ್ಲತಕ್ಕಂಥ ಜನರು ಯಾರು ಇರುತ್ತಾರೋ ಅಂಥವರನ್ನು ಹಿಡಿಯಲಿಕ್ಕೆ ನಿಮ್ಮ ಪೋಲೀಸ್ ಅಧಿಕಾರಿಗಳು ಮುಂದಾಗಬೇಕು. ಅವರಿಗೆ ಹೆಚ್ಚಿನ ಹೊಣೆಯನ್ನು ಹೊರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ವಿನಯಪೂರ್ವಕವಾಗಿ ವಿನಂತಿ ಮಾಡಿಕೊಂಡು ಕೇಳಿಕೊಳ್ಳುತ್ತೇನೆ.

ಇನ್ನು ಈ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾವುದೇ ರೀತಿಯಾದ ಟ್ರೈನಿಂಗ್ ಇಲ್ಲ. ಅವರಿಗೆ ಯಾವರೀತಿಯಾಗಿ ಬಂದೂಕ್ ಹಿಡಿಯಬೇಕೆನ್ನುವುದು ಗೊತ್ತಿಲ್ಲ. ಅವರಿಗೆ ಚಾರ್ಜ್‌ಶೀಟ್ ಹಾಕಲಿಕ್ಕೆ ಬರುವುದಿಲ್ಲ. ಕಾನೂನು ಗೊತ್ತಿಲ್ಲ, ಕಾಯಿದೆ ಜ್ಞಾನವಿಲ್ಲ, ಅವರಿಗೆ ಯಾವ ರೀತಿ ಕೋರ್ಟಿಗೆ ಕೇಸ್ ತೆಗೆದುಕೊಂಡು ಹೋಗಬೇಕೆನ್ನುವುದು ಗೊತ್ತಿಲ್ಲ. ಇಂಥ ೨,೭೦೧ ಜನರು ಇದ್ದಾರೆ. ಕಳ್ಳಬಟ್ಟಿ ತಯಾರು ಮಾಡತಕ್ಕಂಥ ಜನರನ್ನು ಡಕಾಯಿತರನ್ನು, ಮೃಗಗಳಿಗಿಂತಲೂ ಹೆಚ್ಚಿನ ಕ್ರೂರಜನರನ್ನು ಇವರು ಯಾವ ರೀತಿ ಹಿಡಿಯಬೇಕು. ೧೩೭ ಕೋಟಿ ರೂಪಾಯಿಗಳಷ್ಟು ಉತ್ಪಾದನೆಯನ್ನು ಕೊಡತಕ್ಕಂಥ ಈ ಒಂದು ಖಾತೆಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಯಾವುದೇ ವಿಧವಾದ ಟ್ರೈನಿಂಗ್ ಇಲ್ಲ, ಯಾವ ರೀತಿಯಾದ ಸಾಧನಗಳೂ ಇಲ್ಲ, ಅವರಿಗೆ ರಿವಾಲವಾರ್ ಕೊಟ್ಟಿಲ್ಲ, ಹೀಗಿರಬೇಕಾದರೆ ಅವರು ಯಾವರೀತಿ ಹಿಡಿಯಲು ಸಾಧ್ಯವಾಗುತ್ತದೆ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇವರಿಗೆ ಸರಿಯಾದ ರೀತಿಯಲ್ಲಿ ಟ್ರೈನಿಂಗ್ ಕೊಡಬೇಕು, ಇದನ್ನು ಬೇರೆ ಖಾತೆ ಮಾಡಬಾರದು ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಸಂಪೂರ್ಣವಾದ ಹೊಣೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಮಾತನ್ನು ಹೇಳದಿದ್ದರೆ ಬಹಳ ತಪ್ಪಾದೀತು ಎಂದು ಭಾವಿಸುತ್ತೇನೆ. ಈವತ್ತು ಟ್ಯಾಡಿ ಸೇಂದಿಯನ್ನು ಕಳ್ಳರು ರಾತ್ರೋರಾತ್ರಿ ತಯಾರು ಮಾಡುವಂಥ ಜನರು ಇರುತ್ತಾರೆ. ನಮ್ಮ ರಾಜ್ಯದಲ್ಲಿ ಈಚಲ ಮರಗಳು ಇಲ್ಲ. ತೆಂಗಿನ ಮರಗಳು ಇಲ್ಲ. ನನ್ನ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಂಡರೆ ಸ್ವಾಮಿ ಬೆಳಗಾವ್‌ನಲ್ಲಿ ೫ ಸಾವಿರ ಮರಗಳು ಇರುತ್ತವೆ ಖಾನಾಪುರದಲ್ಲಿ ಬರೇ ೬೦ ಮರಗಳು ಇವೆ, ಚಿಕ್ಕೋಡಿಯಲ್ಲಿ ೧೪ ನೂರು ಮರಗಳಿವೆ, ಬೈಲ ಹೊಂಗಲದಲ್ಲಿ ಎರಡು ಸಾವಿರ ಮರಗಳು ಇವೆ, ರಾಮದುರ್ಗದಲ್ಲಿ ೩೦೦ ಮರಗಳು ಇವೆ, ಹುಕ್ಕೇರಿಯಲ್ಲಿ ೩೮೦ ಮರಗಳು ಇವೆ, ಗೋಕಾಕ್‌ದಲ್ಲಿ ೬ ಸಾವಿರ ಮರಗಳು ಇರುತ್ತವೆ, ಇಲ್ಲಿ ಮಾತ್ರ ಜಾಸ್ತಿ ಇರತಕ್ಕಂಥದ್ದು ರಾಯಬಾಗ್‌ದಲ್ಲಿ ಒಂದು ಸಾವಿರ

ಮರಗಳು ಇವೆ. ಚಿಕ್ಕೋಡಿಯಲ್ಲಿ ಒಂದುಸಾವಿರ. ಅತಣಿಯಲ್ಲಿ ಎರಡುಸಾವಿರ. ಎಲ್ಲ ಒಟ್ಟು ೨೦ ಸಾವಿರ ಗಿಡಗಳಿರುತ್ತವೆ. ಈ ಇಪತ್ತು ಸಾವಿರ ಗಿಡಗಳನ್ನು ಹಿಂದಿನ ಸರ್ಕಾರವಿದ್ದಾಗಲೇ ಟ್ಯಾಪ್ ಮಾಡಿರುತ್ತಾರೆ. ೨೦ ಸಾವಿರ ಗಿಡಗಳಿಗೆ ೨೪೪ ಅಂಗಡಿಗಳು ಇರುತ್ತವೆ. ಸ್ವಾಮಿ ಇವರೆಲ್ಲರೂ ಏನು ಹಾಕಿ ಮಾಡುತ್ತಾರೆಂದು ಕ್ಲೋರಲ್ ಹೈಡ್ರೇಡ್‌ನ್ನು ಮಿಕ್ಸ್‌ಮಾಡಿ ತಯಾರು ಮಾಡಿದ ಸಾರಾಯಿಯನ್ನೆ ಜನರಿಗೆ ಕುಡಿಸುತ್ತಿರುತ್ತಾರೆ. ಮೊನ್ನೆ ದಿವಸ ಬೆಂಗಳೂರಿನಲ್ಲಿ ಸತ್ತವರು ಇದನ್ನೇ ಕುಡಿದು ಸತ್ತಿರುತ್ತಾರೆ. ತಾವು ಲೈಸೆನ್ಸನ್ನು ಕೊಟ್ಟು ಇಂಥ ವಿಷಾಹಾರಿಗಳನ್ನು ಇಟ್ಟುಕೊಳ್ಳತಕ್ಕಂಥ. ಪಾಪದ ಕೆಲಸವನ್ನು ಮಾಡಬೇಡಿ. ಬಡವರಿಗೆ ಮನೆಗಳನ್ನು ಕೊಡಬೇಡಿ. ಬಡವರ ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಡಿ, ಆದರೆ ಸೇಂದಿಯನ್ನು ಸರ್ವನಾಶಮಾಡಿ. ನಮ್ಮಕಡೆಯ ಜನರು ಹೇಳುತ್ತಾರೆ, ನೀವೇನಾದರೂ ಮಾಡಿ ನಾವು ಇಂಥ ಕ್ಲೋರಲ್ ಹೈಡ್ರೇಡನ್ನು ಹಾಕಿ ತಯಾರು ಮಾಡುವವರೇ ಇದ್ದೇವೆ, ಪೋಲೀಸ್‌ಗೆ ಹಿಡಿಸುತ್ತೀರಿ ಹಿಡಿಸಿರಿ ನಾವು ಅವರಿಗೆ ಮಾಮೂಲಿಕೊಟ್ಟು ಬಿಡಿಸಿಕೊಳ್ಳುತ್ತೇವೆ. ಎಂ.ಎಲ್.ಎ.ಗಳು ನಿಮಗೂ ಕೊಡುತ್ತೇವೆ ಬನ್ನಿ ಎಂದು ಹೇಳುತ್ತಾರೆ. ಆದ್ದರಿಂದ ನಾನು ಪಾರ್ಟಿ ಮೀಟಿಂಗ್‌ನಲ್ಲಿ ಮಾತನಾಡುವಾಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಂಡಿರುತ್ತೇನೆ. ಬಡವರು ಅದರಲ್ಲೂ ಕಡುಬಡವರು ಒಂದು ರೂಪಾಯಿ ಎರಡು ರೂಪಾಯಿಕೊಟ್ಟು ಸೇಂದಿಯನ್ನು ಕುಡಿಯುತ್ತಾರೆ. ಶ್ರೀಮಂತರು ರಮ್ ಜಿನ್ ಕುಡಿದು ಆರಾಮವಾಗಿ ಮನೆಯ ಮಹಡಿಯಲ್ಲಿ ಮಲಗಿ ನಿದ್ರೆ ಮಾಡುತ್ತಾರೆ ಅಂಥವರನ್ನು ಹಿಡಿಯಿರಿ. ಆದರೆ ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಈ ರಾಜ್ಯದಲ್ಲಿ ಸಂಪೂರ್ಣವಾಗಿ ಸೇಂದಿ ಅಂಗಡಿಗಳನ್ನು ಬಂದ್‌ಮಾಡಿ, ಇಲ್ಲದಿದ್ದರೆ ಇದರಿಂದ ಬಹಳ ತೊಂದರೆ ಬರುತ್ತದೆ. ಕೊಡಗಿನಲ್ಲಿ ಇದರ ಮಾರಾಟವಿಲ್ಲ ಕಾರವಾರದಲ್ಲಿ ಇಲ್ಲ. ಬೇರೆ ಬೇರೆ ಬಾಗಗಳಲ್ಲಿ ಈವತ್ತು ಇಲ್ಲ. ಅದರಂತೆ ನನ್ನ ಕ್ಷೇತ್ರವಾದ ಪರಸಗಡದಲ್ಲಿ ಈ ಸೇಂದಿ ಅಂಗಡಿಯನ್ನು ದಯವಿಟ್ಟು ತರಬೇಡಿ ನಿಮ್ಮನ್ನು ಪುಣ್ಯಪುರುಷರೆಂದು ಹಾಡಿ ಹಾರೈಸುತ್ತಾರೆ. ಈ ಸೇಂದಿಯನ್ನು ಬಂದ್ ಮಾಡಿದರೆ ಎಲ್ಲ ಬಡವರ ಕಲ್ಯಾಣವಾಗುತ್ತದೆಂದು ಹೇಳಿಕೊಂಡು ಬೆಳಗಾಮ್ ಮತ್ತು ರಾಯಬಾಗ್, ಸವದತ್ತಿ ಖಾನಾಪುರ ಈ ಭಾಗದಲ್ಲಿ ಎಲ್ಲೂ ಕೂಡ ಒಂದು ಗಿಡ ಇರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಭಾಗಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಬಹಳಷ್ಟು ನೀರಾವರಿ ಕೆಲಸಗಳನ್ನು ಕೈಗೊಂಡಿದ್ದಾರೆ. ಮಲಪ್ರಭಾ ಯೋಜನೆಗೆ ೬ ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ರೈತರಿಗೆ ಬೇಕಾದ ಸಾಲ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುತ್ತಾರೆ, ರೈತರ ಸರ್ವಾಂಗೀಣ ಉನ್ನತಿಗಾಗಿ ಬಹಳಷ್ಟು ಸಹಾಯವನ್ನು ಮಾಡಿದ್ದಾರೆ. ಮನೆಗಳನ್ನು ಕಟ್ಟಿಸಿಕೊಟ್ಟಿರುತ್ತಾರೆ. ಅವರ ಫೋಟೋವನ್ನು ಮನೆ ಮನೆಯಲ್ಲೂ ಇಟ್ಟುಕೊಂಡಿರುತ್ತಾರೆ. ಮಾನ್ಯ ಮುಖ್ಯಮಂತ್ರಿಯವರೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಟ್ಟು ಅವರ ಖಾತೆಗಳಿಗೆ ಬೇಡಿದಂಥ ಹಣ ಯೋಗ್ಯ ರೀತಿಯ ದಿದ್ದು ಇದು ಯೋಗ್ಯ ರೀತಿಯಲ್ಲಿ ಸದ್‌ವಿನಿಯೋಗವಾಗಲೆಂದು ಹೇಳಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಸಮಯ ಮಾತನಾಡಲು ಅವಕಾಶಕೊಟ್ಟಿದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ ವಿ. ರಾಜಶೇಖರನ್ (ಉತ್ತರಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ನಾನು ಈಗ ಕೆಲವು ತಿಂಗಳುಗಳಿಂದ ಈ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಇಲ್ಲ. ಕಾರಣ, ಸರ್ಕಾರ ನಡೆಸತಕ್ಕ ಕೆಲಸಕಾರ್ಯಗಳ ವಿಚಾರದಲ್ಲಿ ಮತ್ತು ನಾನೂ ಸೇರಿ ಏನು ಪ್ರತಿಪಕ್ಷಗಳು ಇವೆ ಅವು ಈ ದೇಶದ ಸಮಸ್ಯೆಗಳ ವಿಚಾರದಲ್ಲಿ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಎಷ್ಟರಮಟ್ಟಿಗೆ ವಿಫಲರಾಗಿದ್ದೇವೆನ್ನುವ ವಿಚಾರದಲ್ಲಿ ನನ್ನ ಮನಸ್ಸಿಗೆ ಅತೀವ ನೋವಾಗಿ, ಕಾರ್ಯಕಲಾಪದಲ್ಲಿ ಭಾಗವಹಿಸುತ್ತಿಲ್ಲವೆಂದರೆ ತಪ್ಪಾಗಲಾರದು. ಆದರೆ ಈ ದಿನ ಈ ಒಂದು ವಿಷಯದ ಮೇಲೆ ಏಕೆ ಮಾತನಾಡಬೇಕೆಂದು ನಿರ್ಧಾರ ಮಾಡಿದ್ದೇವೆಂದರೆ, ಈ ನಮ್ಮ ರಾಷ್ಟ್ರದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಜನತೆ ಸುಭಿಕ್ಷವಾಗಿ ಇರಬೇಕಾದರೆ ಸರ್ಕಾರ ನಡೆಸತಕ್ಕ ಪಕ್ಷಗಳು ಏನಿವೆ ಅವು ಮತ್ತು ಪ್ರತಿಪಕ್ಷಗಳು ಏನಿವೆ ಇವೆರಡೂ ಸೇರಿ ಜೊತೆಯಾಗಿ ಕೆಲಸ ಮಾಡಬೇಕಾಗುತ್ತದೆ. ಇದನ್ನು ಮನದಟ್ಟು ಮಾಡಿಕೊಡುವುದಕ್ಕೆ ನಾನು ಮಾತನಾಡುವುದಕ್ಕೆ ನಿಂತಿದ್ದೇನೆಂದು ಹೇಳಿದರೆ ತಪ್ಪಾಗಲಾರದು. ದುರಾದೃಷ್ಟವಶಾತ್ ರಾಜಕೀಯದಲ್ಲಿ ಇವತ್ತು ಮೌಲ್ಯಗಳಿಗೆ ಅಷ್ಟಾಗಿ ಬೆಲೆಯನ್ನು ಕೊಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇತ್ತೀಚೆಗೆ ಇವಕ್ಕೆ ತಿಲಾಂಜಲಿಯನ್ನು ಕೊಟ್ಟಿದ್ದಾರೆಂದು ಇಲ್ಲಿ ವ್ಯಸನದಿಂದ ಹೇಳಬೇಕಾಗಿದೆ. ನನ್ನ ಪರಮ ಮಿತ್ರರಾದಂತಹ, ಈ ಸದನದ ನಾಯಕರಾದಂತಹ, ಮಾನ್ಯ ಮುಖ್ಯಮಂತ್ರಿಯಾದಂತಹ ಶ್ರೀಮಾನ್ ಗುಂಡೂರಾವ್ ಅವರು ಏನಿದ್ದಾರೆ ಅವರು ಈ ಒಂದು ರಾಜ್ಯದ ಮುಖ್ಯಮಂತ್ರಿಯಾದಾಗ

ನಾನು ಬಹಳ ಸಂತೋಷಪಟ್ಟೆ. ಇದಕ್ಕೆ ಕಾರಣವೇನೆಂದರೆ, ಈ ರಾಷ್ಟ್ರದ, ಈ ರಾಷ್ಟ್ರದ ಜನತೆಯು ಕಷ್ಟ, ಬಡಜನತೆಯು ಕಷ್ಟ ದೂರವಾಗಬೇಕಾದರೆ ಈ ರಾಷ್ಟ್ರದ ಹಾಗೂ ಈ ರಾಜ್ಯದ ಆಡಳಿತದ ಕಡಿವಾಣ ಯುವಕರ ಕೈಯಲ್ಲಿ ಹೋಗಬೇಕು ಎಂದು ನಾನು ತಿಳಿದುಕೊಂಡಿದ್ದೆ. ಆದ್ದರಿಂದ, ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾದಾಗ ನಾನು ಸಂತೋಷಪಟ್ಟೆ. ಆದರೆ ದುರಾದೃಷ್ಟವಶಾತ್ ಇವತ್ತು ಏನಾಗಿದೆ ? ಇವತ್ತಿನ ದಿವಸ ಶ್ರೀಮಾನ್ ಗುಂಡೂರಾವ್ ಅವರಿಗೆ ಕೆಲಸ ಮಾಡಬೇಕೆಂದು ಹುಮ್ಮಸ್ಸು ಇದೆ. ಮಾನ್ಯ ಮುಖ್ಯಮಂತ್ರಿಗಳ ಒಂದು ಅಭಿಲಾಶೆ ಏನಿದೆ ಅದು ಒಂದು ಸರಿಯಾದ ಸಫಲತೆಯನ್ನು ಕೊಡುತ್ತಾ ಇಲ್ಲ ಎಂದು ನಾನು ಹೇಳುತ್ತೇನೆ. ಅದಕ್ಕೆ ನಾನಾ ಕಾರಣಗಳು ಇವೆ. ಇವತ್ತಿನ ದಿವಸ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದೇನೆಂದು ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕ ವೇದಿಕೆಗಳಲ್ಲಿ ಹೇಳಿದ್ದಾರೆ. ಹಾಗೂ ಈ ಸದನದಲ್ಲಿ ಹಲವಾರು ಬಾರಿ ಹೇಳಿದ್ದಾರೆ ಪ್ರತಿಪಕ್ಷಗಳನ್ನು ಜಡಿದು ಅವು ಸಡಿಲಗೊಳ್ಳುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿದ್ದಾರೆ. ಆದರೆ ಆಡಳಿತ ವಿಚಾರದಲ್ಲಿ ಎಷ್ಟರಮಟ್ಟಿಗೆ ಅವರು ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಪ್ರಯತ್ನಪಟ್ಟಿದ್ದಾರೆನ್ನುವುದನ್ನು ವಿಮರ್ಶೆ ಮಾಡುವುದಾದರೆ, ಆ ಬಗ್ಗೆ ಹೇಳುವುದಕ್ಕೆ ನನ್ನ ಮನಸ್ಸಿಗೆ ಅತೀವ ದುಃಖವಾಗುತ್ತದೆ. ರಾಜ್ಯದಲ್ಲಿ ಯುವಕ ಮುಖ್ಯಮಂತ್ರಿಗಳು ಇರಬೇಕು, ಈ ರಾಜ್ಯದಲ್ಲಿ ಯುವಕರಾದ ಅವರು ಇರಬೇಕು ಎಂದು ಹೇಳುವವರಲ್ಲಿ ನಾನೂ ಸಹ ಒಬ್ಬ. ಆದರೆ ವಿಧಿ ಅವರನ್ನು ಬೇರೆ ಕಡೆಗೆ ಕರೆದೊಯ್ಯುತ್ತಿದೆಯೆಂದರೆ ತಪ್ಪಾಗಲಾರದು. ಇವತ್ತು ಅವರ ಸಾಮಾನ್ಯ ಆಡಳಿತದ ಬೆಲೆ ಜನತೆಗೆ ಎಷ್ಟರಮಟ್ಟಿಗೆ ದೊರಕಿದೆಯೆಂಬುದನ್ನು ತುಲನೆ ಮಾಡೋಣ. ನಿಜವಾದ, ಒಳ್ಳೆಯ ಆಡಳಿತವನ್ನು ಕೊಟ್ಟಿದ್ದರೆ ಈ ದಿನ ಈ ರಾಜ್ಯದ ಜನ ಬಹಳವಾಗಿ ಸಂತೋಷಪಡುತ್ತಿದ್ದರು. ಈ ಸರ್ಕಾರ ಇನ್ನೂ ಹತ್ತಾರು ವರ್ಷ ಇರಬೇಕೆಂದು ಬಯಸುತ್ತಿದ್ದರು. ಈ ರೀತಿಯ ಒಂದು ಪರಿಸ್ಥಿತಿಯನ್ನು ಇವರು ಉದ್ಭವ ಮಾಡಿದ್ದಾರೆಯೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಈ ವಿಷಯವನ್ನು ನಾನು ವ್ಯಯುಕ್ತಿಕವಾಗಿ ಹೇಳುತ್ತಾ ಇಲ್ಲ. ದುರ್ದೈವ, ಪ್ರತಿಪಕ್ಷದಲ್ಲಿ ಈ ವಿಚಾರವನ್ನು ಕಡ್ಡಾಯವಾಗಿ ಹೇಳಬೇಕಾಗಿದೆ. ಇವತ್ತಿನ ದಿವಸ ಇವರು ಎಲ್ಲಾ ವಿಚಾರದಲ್ಲಿಯೂ ವಿಫಲರಾಗಿದ್ದಾರೆಂಬುವ ವಿಷಯವನ್ನು ಹೇಳುವುದಕ್ಕೆ ಒಂದು ಹೆಮ್ಮೆಯೆನಿಸುತ್ತದೆ ಇವರು ಯುವಕರಿದ್ದಾರೆ, ಇವರಲ್ಲಿ ಕೆಲಸ ಮಾಡಬೇಕೆಂಬ ಹುಮ್ಮನಸ್ಸು ಇದೆ. ಅವರು ತಮ್ಮ 'ಇಂಟೆನ್‌ಷನ್ಸ್ ವಿಚಾರದಲ್ಲಿ ಯೋಚನೆ ಮಾಡಬೇಕಾಗಿದೆ. ಅವರು ಕೆಲಸ ಮಾಡುವುದಕ್ಕೆ ಏಕೆ ಆಗುತ್ತಾ ಇಲ್ಲ ? ಇವತ್ತು ರಾಜ್ಯದ ಪರಿಸ್ಥಿತಿ ಏನಾಗಿದೆ ? ಇವತ್ತು ಇವರು ಏನು ಒಳ್ಳೆಯ ಸರ್ಕಾರವನ್ನು, ಒಳ್ಳೆಯ ಆಡಳಿತವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ ಇದರ ಒಂದು ಸಿಂಟಮ್ಸ್ ಏನಿದೆ ? ಈ ಬಗ್ಗೆ ತುಲನೆ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿ ಮಾನ್ಯ ಗುಂಡೂರಾವ್ ಅವರು ಸರ್ಕಾರವನ್ನು ವಹಿಸಿಕೊಂಡ ಮೇಲೆ ೫೯ ಜನರು ಗೋಲಿಬಾರ್‌ನಿಂದ ಸತ್ತಿದ್ದಾರೆ. ನರಗುಂದ ಹಾಗೂ ನವಲಗುಂದದಲ್ಲಿ ಗೋಲಿಬಾರ್ ಆಗಿ ಕೆಲವಾರು ಜನರು ಸತ್ತರು. ಆದರೆ ಈಗ ಒಂದು ತಿಂಗಳ ಹಿಂದೆ ಆ ಭಾಗದ ಜನರು ಪೋಲೀಸ್ ವೆಲ್‌ಫೇರ್ ಬೆನವಲೆಂಟ್ ಫಂಡ್‌ಗೆ ೧೮ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಕೊಟ್ಟಿದ್ದಾರೆ ಎಂದರೆ ಆ ಜನರಿಗೆ ಪೋಲೀಸ್ ಇಲಾಖೆ ವಿಚಾರದಲ್ಲಿ ಒಂದು ರೀತಿಯ ಅಭಿಮಾನ ಇತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಆದರೆ, ಅಲ್ಲಿ ಫೈರಿಂಗ್ ಯಾತಕ್ಕೋಸ್ಕರ ಮಾಡಿದರು ? ಆ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ ಆದರೆ ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ೫೯ ಜನರು ಈ ರಾಜ್ಯದಲ್ಲಿ ಪೋಲೀಸ್ ಗೋಲೀಬಾರಿನಿಂದ ಸತ್ತಿದ್ದಾರೆ. ಇಡೀ ವಿಶ್ವದಲ್ಲೇ ಆಗದೇ ಇರತಕ್ಕಂತಹ ಎರಡು ದುರಂತಗಳನ್ನು ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಆಗಿವೆ, ಸರ್ಕಸ್ ದುರಂತದಲ್ಲಿ ಸುಮಾರು ೧೬೦ ಜನ ಹಿರಿಯರು ಹಾಗೂ ಮಕ್ಕಳು ಸತ್ತಿದ್ದಾರೆ. ಕಳ್ಳಭಟ್ಟಿ ದುರಂತದಲ್ಲಿ ಸುಮಾರು ೩೫೦ ಜನರು ಸತ್ತಿದ್ದಾರೆ, ಈ ಒಂದು ಕಳ್ಳಭಟ್ಟಿ ದುರಂತ ನಡೆದಾಗ ನಾನು ದೆಹಲಿಯಲ್ಲಿ ಇದ್ದೆ. ಅಲ್ಲಿ ನಾನು ಒಬ್ಬ ಸ್ನೇಹಿತರ ಜೊತೆಯಲ್ಲಿ ಮಧ್ಯಾಹ್ನ ಊಟಕ್ಕೆ ಹೋಗುತ್ತಾ ಇದ್ದೆ. ಆ ಸ್ನೇಹಿತರು ಕೆನಡಾ ದೇಶದವರು. ಆಗ ಈ ಕಳ್ಳಭಟ್ಟಿ ದುರಂತದ ಬಗ್ಗೆ ಪ್ರಸ್ತಾಪ ಮಾಡುತ್ತಾ ಅವರಿಗೆ ಒಂದು ಮಾತನ್ನು ಕೇಳಿದೆ. ಈ ರೀತಿ ಒಂದು ದುರಂತ ನಿಮ್ಮ ದೇಶದಲ್ಲಿ ಏನಾಗುತ್ತಿತ್ತು ಎಂದು. ಅದಕ್ಕೆ ಅವರು ಹೇಳಿದರು, ನಮ್ಮ ದೇಶದಲ್ಲಿ ಈ ರೀತಿ ದುರಂತ ನಡೆದ ೧೫ ನಿಮಿಷದೊಳಗೆ ಅಲ್ಲಿನ ಜನತೆ ಆ ದೇಶದ ಆಡಳಿತ ಪಕ್ಷದವರು ಅಧಿಕಾರದಲ್ಲಿ ಇರುವುದಕ್ಕೆ ಬಿಡುತ್ತಿರಲಿಲ್ಲ ಎಂದು ನನಗೆ ದೆಹಲಿಯಲ್ಲಿ ಹೇಳಿದರು. ಆದರೆ ಇಲ್ಲಿ ಕಳ್ಳಭಟ್ಟಿ ದುರಂತದಲ್ಲಿ ಸತ್ತ ಜನರ ಬಗ್ಗೆ ಮಾತನಾಡುತ್ತಾ ನಮ್ಮ ಮುಖ್ಯಮಂತ್ರಿಗಳು, ಏನು ಮಾಡುವುದು ಇದ್ದಕ್ಕಿದ್ದ ಹಾಗೆ

ಹಾರುತ್ತಿದ್ದ ವಿಮಾನ ಕೆಳಕ್ಕೆ ಬಿದ್ದು ನೂರಾರು ಜನ ಸಾಯುತ್ತಾರೆ, ಇದಕ್ಕೆಲ್ಲಾ ನಾವೇನು ಮಾಡುವುದಕ್ಕಾಗುತ್ತದೆ ಎಂದು ಹೇಳಿದರು. ಆದರೆ, ಇವರಿಗೆ ನಾನು ಅರಿವು ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ನೀವು ಪ್ರಜಾಪ್ರಭುತ್ವದ ಮುಖಾಂತರ ಈ ಸ್ಥಾನದಲ್ಲಿ ಕುಳಿತಿದ್ದೀರಿ. ಇವತ್ತಿನ ದಿವಸ ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕಾದರೆ, ಜನಗಳ ಮನಸ್ಸಿನಲ್ಲಿರತಕ್ಕ ವೇದನೆಯನ್ನು ತಿಳಿದು ನಡೆಯಬೇಕಾಗುತ್ತದೆ. ೩೫೦ ಜನ ಸರ್ಕಾರದ ಒಂದು ದೋಷದಿಂದ ಸತ್ತರು ಎಂದರೆ, ಇವತ್ತಿನದಿವಸ ಏನು ಮಾಡುವುದಕ್ಕಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುವುದಾದರೆ, ಸಾಮಾನ್ಯ ಜನತೆಯ ಮನಸ್ಸಿನ ಮೇಲೆ ಆಗತಕ್ಕ ಪರಿಣಾಮ ಏನು ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಇಡೀ ವಿಶ್ವದಲ್ಲಿಯೇ ನಡೆಯದಂತಹ ಈ ಎರಡು ದುರಂತಗಳು ನಮ್ಮ ರಾಜ್ಯದಲ್ಲಿ ಸಂಭವಿಸಿವೆ. ಆದರೆ ಇದರ ಪರಿಣಾಮ ಸರ್ಕಾರದ ಮೇಲೆ ಏನೂ ಆಗಿಲ್ಲ. ವೈಯುಕ್ತಿಕವಾಗಿ ಅವರ ಮೇಲೆ ಪರಿಣಾಮ ಆಗಿರಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸರ್ಕಾರದ ಮೇಲೆ ಈ ಬಗ್ಗೆ ಏನೂ ಪರಿಣಾಮ ಆಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಕಳ್ಳಭಟ್ಟಿ ದುರಂತದ ಬಗ್ಗೆ ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಇಲ್ಲಿಯವರೆಗೆ ನ್ಯಾಯಾಂಗ ತನಿಖೆ ಮಾಡುವ ದಿಸೆಯಲ್ಲಿ ಇವರು ಏನೇನು ಕೆಲಸಗಳನ್ನು ಹಾಕಿಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕಾಗಿದೆ. Delay destroys Justice. Delay destroys evidences ಇವತ್ತಿನದಿವಸ ಇಂತಹ ಘಟನೆ ನಡೆದಿದ್ದು ಇದರ ತನಿಖೆಗೆ ನಿಧಾನ ಮಾಡಿದರೆ ಸಾರ್ವಜನಿಕರಲ್ಲಿ ಇರತಕ್ಕ ಎಲ್ಲಾ ಎವಿಡೆನ್ಸ್ ಮಾಯವಾಗುತ್ತವೆ. ಕಡೆಗೆ ನಿಮ್ಮ ಕೈಗೆ ಸಿಕ್ಕುವುದು ಏನು? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಒಂದು ಗಮನವನ್ನು ಕೊಡಬೇಕು. ಈ ಒಂದು ಆಡಳಿತದ ಬಗ್ಗೆ ಹೇಳುವುದಾದರೆ, ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಇವತ್ತು ಬೆಳಿಗ್ಗೆ ನಾನು ಬರುತ್ತಾ ಇರುವಾಗ ನನ್ನ ಮುಂದೆ ಒಂದು ಕಾರು ಹೋಯಿತು. ಅದರ ಮೇಲೆ ಕೆಂಪು ಲೈಟು ಇದ್ದುದರಿಂದ ಅದು ಮಾನ್ಯ ಮಂತ್ರಿಗಳೊಬ್ಬರ ಕಾರು ಎಂದು ತಿಳಿಯಿತು. ಅದರ ಹಿಂದೆ ಒಂದು ಟ್ಯಾಕ್ಸಿಯಲ್ಲಿ ನಾಲ್ಕು ಜನ ಪೋಲೀಸಿನವರು ಹಾಗೂ ಇತರೆ ಸಿಬ್ಬಂದಿಯವರು ಹೋದರು. ಆ ಬಗ್ಗೆ ನನಗೆ ಆಶ್ಚರ್ಯವಾಗಿ ನನ್ನ ಸ್ನೇಹಿತರಿಗೆ ಆ ಬಗ್ಗೆ ಕೇಳಿದೆ. ಆಗ ಅವರು ನಿಮಗೆ ಗೊತ್ತಿಲ್ಲವೇ, ಈಗ ಪ್ರತಿಯೊಬ್ಬ ಮಂತ್ರಿಗೂ ರಕ್ಷಣಾ ವ್ಯವಸ್ಥೆ ಕೊಟ್ಟಿದ್ದಾರೆ ಎಂದು ಹೇಳಿದರು. ಅನಂತರ ಆ ಬಗ್ಗೆ ನಾನು ಕೆಲವು ವಿಷಯಗಳನ್ನು ತಿಳಿದುಕೊಂಡೆ.

ಇವತ್ತಿನದಿವಸ ಈ ಸರ್ಕಾರದವರು ೩೫ ಜನ ಮಂತ್ರಿಗಳಿಗೆ ೩೫ ಕಾರುಗಳ ಜೊತೆಗೆ ಒಬ್ಬೊಬ್ಬ ಮಂತ್ರಿಗೆ ೪ ಜನ ಪೋಲೀಸ್‌ಕಾನ್‌ಸ್ಟೇಬಲ್‌ಗಳು ೩೫,೪ ಪೋಲಿಸ್‌ಕಾನ್‌ಸ್ಟೇಬಲ್‌ಗಳು ಈ ಮಂತ್ರಿಗಳನ್ನು ಗಾರ್ಡ್‌ಮಾಡಲಿಕ್ಕೆ ಜೊತೆಗೆ ಒಬ್ಬ ದಫೇದಾರ್ ಗ್ರೇಡ್‌ನವನು ಡ್ರೈವರ್. ೩೫ ಕಾರುಗಳು ತಕ್ಷಣ ಸಿಗಲಿಲ್ಲವೆಂದು ಬಾಡಿಗೆಗೆ ಕಾರುಗಳನ್ನು ತೆಗೆದುಕೊಂಡಿದ್ದಾರೆ. ಇವರು ನಿಜವಾಗಿಯೂ ಸರ್ಕಾರ ನಡೆಸಲಿಕ್ಕೆ ಶಕ್ತಿ ಇದೆಯೆ? ಮಂತ್ರಿಗಳ ರಕ್ಷಣೆ ಮಾಡುವುದಕ್ಕೆ ಪೋಲೀಸ್‌ನವರು ಏತಕ್ಕೋಸ್ಕರ ಬೇಕು? ಮಂತ್ರಿಗಳನ್ನು ಉಳಿಸುವುದಕ್ಕೋಸ್ಕರ ಪೋಲೀಸವರು ಪ್ರಯತ್ನಪಡಬೇಕು. ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲವೆಂದು ಕಾಣುತ್ತದೆ ಇರಾನ್‌ನ ಷಾ ರವರು ವಿಪ್ಲವ ಉದ್ಭವವಾದಾಗ ತಮಗೆ ಗೊತ್ತಿದೆ He was responsible for modernising Iran. He had one of the best armies in the world ಆದರೆ ಜನಗಳು ಅವನಿಂದ ತೊಂದರೆಯಾದಾಗ ಆತನ ವಿರುದ್ಧ ಎದಾಗ ಏನನ್ನೂ ಉಳಿಸಿ ಕೊಳ್ಳುವುದಕ್ಕೆ ಆಗಲಿಲ್ಲ. ಸಾಕಷ್ಟು ಮಿಲಿಟರಿ ಮತ್ತು ಸಿಕ್ರೇಟ್ ಪೋಲೀಸ್ ಆತನ ಪರವಾಗಿತ್ತು. ಆ ಸಮಯದಲ್ಲಿ ಒಂದು ಘಟನೆ ನಡೆಯುತ್ತದೆ ಥೆಹರಾನ್‌ನಲ್ಲಿ ಅವರ ತಂದೆಯ ಸ್ಟ್ಯಾಚ್ಯುವನ್ನು ಕಿತ್ತುಹಾಕುತ್ತಿದ್ದಾರೆ ಏನು ಮಾಡಬೇಕೆಂದು ಮಿಲಿಟರಿ ಮತ್ತು ಪೋಲೀಸಿನವರು ಷಾ ರವರನ್ನು ಕೇಳಿದಾಗ, ಷಾ ರವರು ಹೇಳಿದರಂತೆ, ಏನು ಮಾಡುವುದಕ್ಕಾಗುವುದಿಲ್ಲ ಬಿಡಿ ಅಂದರಂತೆ. ಆದೇರೀತಿ ನೀವು ಕೂಡ ಜನಗಳಿಗೆ ಒಳ್ಳೆಯ ಆಡಳಿತವನ್ನು ಕೊಡದೆ ಪೋಲೀಸಿನವರನ್ನು ಕಟ್ಟಿಕೊಂಡು ಇಡೀ ರಾಜ್ಯದಲ್ಲೆಲ್ಲಾ ಓಡಾಡುತ್ತೇವೆ ಅಂದರೆ, ತಾವೇನಾದರೂ ಉಳಿದುಕೊಳ್ಳುತ್ತೇವೆ ಅಂದುಕೊಂಡಿದ್ದರೆ ಆ ರೀತಿ ನೀವು ಮನಸ್ಸು ಮಾಡಿದ್ದರೆ ಅದು ಹುಂಬುತನವಾಗುತ್ತದೆ. ಪೋಲೀಸಿನವರ ಮುಖಾಂತರ ರಾಜ್ಯವನ್ನು ಆಳುವುದಕ್ಕೆ ಪ್ರಯತ್ನ ಮಾಡುತ್ತೇವೆ, ಪೋಲೀಸಿನವರ ಹತ್ತಿರ ಎಲ್ಲಾ ವಿಧವಾದ ಎಲ್ಲಾ ಅಸ್ತ್ರಗಳಿವೆ ಅವುಗಳನ್ನು ಉಪಯೋಗಿಸಿಕೊಂಡು ಏನಾದರೂ ಮಾಡುತ್ತೇವೆಂದು ತಿಳಿದು ಕೊಂಡಿದ್ದರೆ ಅದು ತಪ್ಪಾಗುತ್ತದೆ. ಬಹಳ ವ್ಯಸನದಿಂದ ಈ ಮಾತನ್ನು ಹೇಳಬೇಕಾಗುತ್ತದೆ, ಪತ್ರಿಕೆಯಲ್ಲಿ ಬಂದಿದೆ

ಐ.ಜಿ.ಪಿ. ಯವರು ಪೋಲೀಸಿನವರ ವಿಚಾರದಲ್ಲಿ. ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ ಮುಂದೆ ತಿಳಿಸುತ್ತೇನೆ. ಈ ಪ್ರಕಾರವಾಗಿ ರಾಜ್ಯವನ್ನು ನಡೆಸುತ್ತೇವೆಂದು ತಿಳಿದುಕೊಂಡಿದ್ದರೆ, ಮುಖ್ಯಮಂತ್ರಿಗಳ ಸಿಕ್ರೇಟ್ ಸರ್ವೀಸ್ ಚೀಫ್ ಆ ರೀತಿ ತಿಳಿದುಕೊಂಡಿದ್ದರೆ ಅದು ಅಸಾಧ್ಯವಾದ ವಿಚಾರವೆಂದು ಹೇಳಿ ಮನದಟ್ಟು ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಮುಖ್ಯಮಂತ್ರಿಗಳು ಬಹಳವಾಗಿ ಹೇಳುತ್ತಿದ್ದಾರೆ, ಆದಷ್ಟು ಶೀಘ್ರವಾಗಿ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ಹೇಳಿದ್ದಾರೆ ಪತ್ರಿಕೆಗಳಲ್ಲಿ ಸಹ ಬಂದಿದೆ. ಎಲ್ಲಾ ವಿಚಾರಗಳನ್ನು ಬೇಗ ಬಗೆಹರಿಸಬೇಕು ಮತ್ತು ಯಾರು ಕಾಗದ ಬರೆದರೂ ಅವರಿಗೆ ಶೀಘ್ರವಾಗಿ ಉತ್ತರವನ್ನು ಬರೆಯುಬೇಕೆಂದು ಹೇಳಿದ್ದಾರೆ. ಆದರೆ ವಿಧಾನಸೌಧದಲ್ಲಿ ಸಂಬಂಧಪಟ್ಟ ಆಫೀಸರುಗಳ ಸಭೆಯನ್ನು ಕರೆದಿದ್ದರೂ ಆಗ ಅವರು ಹೇಳಿದಂತಹ ಮಾತುಗಳನ್ನು ಇಲ್ಲಿ ಉದ್ಧಾರ ಮಾಡುವುದಕ್ಕೆ ಇಷ್ಟಪಡುತ್ತೇನೆ It has appeared in the Deccan Herald dated 19-5-1981. "The Chief Minister finds lack of work zeal among the officials''. ತಾವು ಹೇಳಿರತಕ್ಕ ಎಲ್ಲಾ ಮಾತುಗಳು ಇಲ್ಲಿ ಇವೆ. ತಾವು ಏನನ್ನು ಪ್ರತಿಪಾದನೆ ಮಾಡುತ್ತೀರಿ ಅದು ನಡೆಯುತ್ತಿದೆಯೇ ಎಂಬುದರ ಬಗ್ಗೆ ಯೋಚನೆ ಮಾಡಬೇಕು, ಅದು ನಡೆಯುತ್ತಿಲ್ಲ. ಇನ್ನೊಂದು ವಿಚಾರ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಅವರು ಏತಕ್ಕೆ ಯಾವ ಕಾರಣಕ್ಕೆ ಹೇಳಿದರೋ ಗೊತ್ತಿಲ್ಲ. I do not want to go into the details. He has taken a confrontation line with the Press and also with the Opposition. ಮೊನ್ನೆಯಿಂದ ಸ್ವಲ್ಪ ಬದಲಾವಣೆಯಾದಂತಹ ರೀತಿಯಲ್ಲಿ ಕಾಣುತ್ತದೆ, ಆದಕ್ಕೆ ಮುಂದೆ ಬರುತ್ತೇನೆ ಪ್ರೆಸ್‌ನ ವಿಚಾರದಲ್ಲಿ ಯಾವ ಕಾರಣಕ್ಕಾಗಿಯೋ ಯಾತಕ್ಕೋಸ್ಕರವಾಗಿಯೋ. He has taken a definite stand against the whole Press.. ಮತ್ತೊಂದು ವಿಚಾರವನ್ನು ಮನದಟ್ಟು ಮಾಡಿಕೊಡಲಿಕ್ಕೆ ಇಷ್ಟಪಡುತ್ತೇನೆ. ರಾಷ್ಟ್ರದಲ್ಲಿ ಎಲ್ಲರಿಗೂ ಪ್ರಜಾಪ್ರಭುತ್ವ ಇರುತ್ತದೆ. ಪ್ರೆಸ್‌ನವರು ತಮ್ಮ ಕಾರ್ಯವನ್ನು ಸರಿಯಾಗಿ ಮಾಡುತ್ತಾರೆ, ಯಾರ ಹೆದರಿಕೆಗೂ ಯಾವ ಸರ್ಕಾರ ಇದೆ ಎನ್ನತಕ್ಕ ಭಯಂಕ್ಕೂ ಕೆಲಸ ಮಾಡುವುದಿಲ್ಲ. ಅವರ ಅರಿವಿನಿಂದ ಅವರು ತಮ್ಮ ಕೆಲಸ ಮಾಡುತ್ತಾರೆ. ಈ ವಿಚಾರ ದಲ್ಲಿ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಗಮನಕ್ಕೆತರುವುದಕ್ಕೆ ಇಷ್ಟಪಡುತ್ತೇನೆ The relation between the Parliament and the Press as narrated in the Practice and Procedure of Parliament. ನಾನು ಹೆಚ್ಚಾಗಿ ಓದುವುದಕ್ಕೆ ಇಷ್ಟಪಡುವುದಿಲ್ಲ, ಫಸ್ಟ್ ಪ್ಯಾರಾ ಮಾತ್ರ ಓದುತ್ತೇನೆ.

> " The Press plays an important role in the Parliamentary democracy. The Press is still the chief means giving the people some notion of what is going on. The main vehicle alike to public information, public opinion and public criticism. A free and responsible Press puts forth the facts''.

ಸ್ವಾಮಿ ಮಾನ್ಯ ಮಂತ್ರಿಗಳು ನೀತಿ ಮತ್ತು ತತ್ವಗಳಿಂದ ಕೆಲಸ ಮಾಡುತ್ತಿದ್ದಾರೆಯೇ? ಯಾವ ರೀತಿಯಿಂದ ಮಾಡುತ್ತಿದ್ದಾರೋ ಗೊತ್ತಿಲ್ಲ? A free and responsible Press puts forth the facts and also the standards of right or wrong not only in the field of politics but also as regards many aspects of human activity. That is what the Press is doing. ನೀವು ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಈ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡಬೇಕೆಂದು ಮನಸ್ಸು ಮಾಡಿದ್ದೀರೋ, ಅದಕ್ಕಿಂತ ಹೆಚ್ಚಾಗಿ ಪ್ರೆಸ್‌ನವರೂ ಕೂಡ ರಾಷ್ಟ್ರಕ್ಕೆ ಒಳ್ಳೆಯ ಆಡಳಿತವನ್ನು ಕೊಡಲಿಕ್ಕೆ ಮನಸ್ಸು ಮಾಡಿದ್ದಾರೆ ಆ ರೀತಿಯಿಂದ ಅವರು ಕೆಲಸ ಮಾಡಿದ್ದಾರೆ. The Hon'ble Chief Minister is good man but I do not know, why he has taken this sort of confrontation line with the Press. ನಾನು ಹೆಚ್ಚಾಗಿ ಓದುವುದಕ್ಕೆ ಹೋಗುವುದಿಲ್ಲ ಇದನ್ನು ತಾವು ತಿಳಿದುಕೊಳ್ಳಬೇಕು. ಇದರ ಅರ್ಥವಾದರೂ ಏನು? The Press helps the citizen to make up his mind about their rival policies and programmes with different

political parties put before him. The Press is the standard vehicle for the dissemination of the public opinion. But unfortunately. the Chief Minister has taken a confrontation line with the Press. ಈ ಲೈನನ್ನು ದಯುವಿಟ್ಟು ಮುಖ್ಯಮಂತ್ರಿಗಳು ಬಿಡಲಿ. ಇವತ್ತಿನದಿವಸ ಹೇಗೆ ಚುನಾವಣೆಯಲ್ಲಿ ನಿಂತು ನಾನು ಅವರು ಗೆದ್ದು ಬಂದಿದ್ದೇವೆ ನಾನು ವಿರೋಧಪಕ್ಷದಲ್ಲಿ ಅವರು ಆಡಳಿತ ಪಕ್ಷದಲ್ಲಿ ಕುಳಿತು ಕೆಲಸಮಾಡತಕ್ಕ ಹಕ್ಕು ಸಂವಿಧಾನದಲ್ಲಿ ಯಾವರೀತಿ ಇದೆ ಅದೇರೀತಿ ಪ್ರೆಸ್‌ನವರು ಮಾಡುತ್ತಿದ್ದಾರೆ. We have guaranteed freedom of the Press under our Constitution. Nobody can take away that freedom including Sri R. Gundu Rao and his leader Smt. Indira Gandhi. I would make it clear that the people of this country would resist with all powers at their command. ನಾನು ಅದರಿ ಕೇಳಿಕೊಳ್ಳುತ್ತೇನೆ ಪ್ರೆಸ್‌ನವರ ಜೊತೆಯಲ್ಲಿ ಈ ರೀತಿ ವರ್ತಿಸುವುದನ್ನು ದಯುವಿಟ್ಟು ಬಿಡಲಿ. Press can play a very constructive role ಏನನ್ನು ಹೇಳಬೇಕಾಗಿತ್ತೊ ಅದನ್ನು ಪತ್ರಿಕೆಯವರು ಹೇಳಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಎಷ್ಟರಮಟ್ಟಿಗೆ ಹೇಳಬೇಕೆಂದು ತಿಳಿದುಕೊಂಡಿದ್ದರೋ ಅಷ್ಟರಮಟ್ಟಿಗ ಹೇಳದೆ ಇರಬಹುದು. ಆದರಿಂದ ಈ ವಿಚಾರದಲ್ಲಿ ತೀವ್ರ ಗಮನಹರಿಸಬೇಕು, ನಿಮಗೆ ಯಾರಾದರೂ ಸಲಹೆಗಾರರಿದ್ದರೆ ಅವರು ಈ ರೀತಿ ಸಲಹೆ ಮಾಡಲಿ ಎಂದು ಹೇಳುತ್ತೇನೆ. ಕನ್‌ಫ್ರಂಟೇಷನ್ ಲೈನ್‌ನಲ್ಲಿ ತಾವು ಯೋಚನೆ ಮಾಡಬೇಕು. ಈ ರಾಷ್ಟ್ರದ ಆಡಳಿತವನ್ನು ನಡೆಸತಕ್ಕವರು ವಿರೋಧಪಕ್ಷದವರೂ ಆಡಳಿತ ಪಕ್ಷದವರೂ ಇಬ್ಬರೂ ಕೂಡಿ ರಾಷ್ಟ್ರವನ್ನು ಕಟ್ಟಬೇಕಾಗುತ್ತದೆ. ನಾನು ಹೇಳುವುದಾದರೆ ಇವತ್ತಿನದಿವಸ ನಮ್ಮ ರಾಷ್ಟ್ರಕ್ಕೆ ಇರತಕ್ಕ ಸಂಪತ್ತು, ಬುದ್ಧಿವಂತಿಕೆ ಇರತಕ್ಕ ಜನ ಅಡ್ಮಿನಿಸ್ಟ್ರೇಟೀವ್ ಅಫೀಸರುಗಳು ಏನು ಇದ್ದಾರೆ ಯಾವ ರಾಷ್ಟ್ರದಲ್ಲಿಯೂ ಇಂತಹ ಅಡ್ಮಿನಿಸ್ಟ್ರೇಟೀವ್ ಆಫೀಸರ್ ಸ್ಟೀಲ್‌ಫ್ರೇಮ್ ಕಟ್ಟುವಂತಹವರು ಸಿಗತಕ್ಕದ್ದು ಬಹಳ ಕಷ್ಟ.

೪-೦೦ ಪಿ.ಎಂ.

† ಈವೊತ್ತಿನ ದಿವಸ ಒಳ್ಳೆಯ ಅಧಿಕಾರಿಗಳು ಇಲ್ಲದೇ ಇರುವುದರಿಂದ ಆಫ್ರಿಕಾ ದೇಶದಲ್ಲಿ ಏನಾಗುತ್ತಾ ಇದೆ, ಮಿಡಲ್ ಈಸ್ಟ್‌ನಲ್ಲಿ ಏನಾಗುತ್ತಾ ಇದೆ. ಸೌತ್ ಏಷ್ಯಾದಲ್ಲಿ ಏನಾಗುತ್ತಾ ಇದೆ ಅದನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಹೋಲಿಸುವುದಾದರೆ ಈ ರಾಷ್ಟ್ರವನ್ನು ಇಡೀ ವಿಶ್ವದಲ್ಲಿ ದೊಡ್ಡ ರಾಷ್ಟ್ರವನ್ನಾಗಿ ಮಾಡತಕ್ಕಂಥಾ ಎಲ್ಲಾ ಅವಕಾಶಗಳೂ ಇವೆ ಎಂದು ಹೇಳುತ್ತೇನೆ. We are becoming a Super Power. ಈವೊತ್ತಿನ ದಿವಸ ಹೇಳಬೇಕಾದರೆ Both America and Russia are afraid of India. I am proud to be a citizen of this Country will shortly become a Super Power. ನಾವು ಈವೊತ್ತಿನ ರಷ್ಯಾ ಮತ್ತು ಅಮೆರಿಕಾ ದೇಶದವರು ಏನು ಮಾಡುತ್ತಿದ್ದಾರೆ ಅನ್ನುವುದನ್ನು ಅರಿತುಕೊಂಡು ಕೆಲಸ ಮಾಡೋಣ. ಪ್ರತಿಯೊಂದಕ್ಕೂ ಕೂಡ ಪೆಟ್ಟಿ ಪೊಲಿಟಿಕಲ್ ಸ್ಕ್ರಾಂಬಲ್ಸ್ ಏನು ಇದೆ ಅದನ್ನು ಬಿಡೋಣ. ಮೊದಲು ಅಂಥಾ ವಾಲ್ಯೂ ಸಿಸ್ಟಂಗೆ ತಿಲಾಂಜಲಿ ಕೊಡೋಣ. ಸಣ್ಣ ಸಣ್ಣ ವಿಚಾರಗಳನ್ನಾಗಲಿ ಅಥವಾ ಈ ಕ್ಷುಲ್ಲಕ ವಿಚಾರಗಳನ್ನಾಗಲಿ ಪ್ಲಾಟ್‌ಫಾರಂನಲ್ಲಿ ಮಾತನಾಡುವುದರಿಂದ ರಾಷ್ಟ್ರದ ಹಾಗೂ ರಾಜ್ಯದ ಮುಖ್ಯ ಮುಖ್ಯ ಸಮಸ್ಯೆಗಳಿಗೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈವೊತ್ತಿನ ದಿನ ಏನು ಮಾಡುತ್ತಿದ್ದಾರೆ ಅನ್ನುವುದನ್ನು ಎಲ್ಲರೂ ಗಮನಿಸುತ್ತಿದ್ದಾರೆ. ಅವರು ಒಳ್ಳೆಯ ಯುವಕರು ಬಹಳ ಆಕ್ಟೀವ್ ಆಗಿದ್ದಾರೆ. ದೇವರು ಅವರಿಗೆ ಒಳ್ಳೆಯ ಆರೋಗ್ಯಭಾಗ್ಯ ಕೊಟ್ಟಿದ್ದಾನೆ. ಆದರೆ ಅವರು ಸಣ್ಣ ಸಣ್ಣ ವಿಚಾರಕ್ಕೂ ಕೂಡ ಸ್ಕ್ರಾಂಬಲ್ಸ್ ಮಾಡುತ್ತಾರೆ. ಈ ರೀತಿಯಾಗಿ ಅವರು ಕಾಲ ಕಳೆಯುತ್ತಿದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಹೌಸ್ ಕೆಲಸ ಮಾಡುವಾಗ ಯಾವ ರೀತಿ ಮಾತನಾಡುತ್ತಾರೆ ಅನ್ನುವುದನ್ನೂ ಯೋಚನೆ ಮಾಡಲಿ, ಅವರು ಹೊರಗಡೆ ಯಾವ ರೀತಿ ಮಾತನಾಡುತ್ತಾರೆ ಅನ್ನುವುದನ್ನೂ ಯೋಚನೆ ಮಾಡಲಿ. ಈ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಲಿ. ಈ ಕ್ಷುಲ್ಲಕ, ಕ್ಷಣಿಕ ವಿಚಾರಗಳ ಬಗ್ಗೆ, ರಾಜ್ಯದ ೩½ ಕೋಟಿ ಜನತೆಯ ಪರವಾಗಿ ಏನು ಮಾತನಾಡುತ್ತಾರೆ ಅದನ್ನು ಮಾನ್ಯ

ಮುಖ್ಯ ಮಂತ್ರಿಗಳು ಗಮನಿಸಿದ್ದೇ ಆದರೆ ಅದು ಅವರ ಸ್ಥಾನಕ್ಕೆ ಸರಿಯೇ ಅನ್ನುವುದನ್ನು ನೋಡಿ ಕೊಳ್ಳಲಿ. ವೈಯಕ್ತಿಕವಾಗಿ ಹೇಳುವುದಾದರೆ ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ನನಗೂ ಗೌರವ ಇದೆ. ಇನ್ನೊಂದು ವಿಚಾರವನ್ನು ನನ್ನ ಪಕ್ಷದ ವತಿಯಿಂದ ಹೇಳುತ್ತೇನೆ. ಅದೇನೆಂದರೆ ಮಾನ್ಯ ಮುಖ್ಯ ಮಂತ್ರಿಗಳ ಒಂದು ಇನ್ಸಿಟಿಟ್ಯೂಷನ್ ಏನು ಇದೆ ಅದನ್ನು ನಾನು ಡೆನಿಗ್ರೇಟ್ ಮಾಡುವುದಕ್ಕೆ ಸಿದ್ಧನಿಲ್ಲಾ. ಏತಕ್ಕೆಂದರೆ ಈವೊತ್ತಿನ ದಿವಸ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿರಬಹುದು, ಹಿಂದೆ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದರು, ಮುಂದೆ ಬೇರೆ ಯಾರಾದರೂ ಮುಖ್ಯ ಮಂತ್ರಿಗಳಾಗಿ ಬರಬಹುದು. ಆದುದರಿಂದ ಈ ಇನ್ಸಿಟಿಟ್ಯೂಷನ್‌ನಲ್ಲಿ ಯಾರೇ ಬಂದರೂ ಕೂಡ ಅವರು ತಮ್ಮ ರೆಸ್ಪೆಕ್ಟ್ ಅನ್ನು ಕಾಪಾಡಿಕೊಳ್ಳುವುದು ಮುಖ್ಯ, ಅದಕ್ಕೆ ತಕ್ಕಂತೆ, ಅದಕ್ಕೆ ಸರಿಯಾಗಿ ಕಾಪಾಡಿಕೊಂಡು ಹೋಗುವಂಥಾ ಕರ್ತವ್ಯ ನಮ್ಮದೂ ಸಹ ಮುಖ್ಯವಾಗಿರುತ್ತದೆ, ನಾವೂ ಸಹ ಸರಿಯಾಗಿ ಉಳಿಸಿಕೊಂಡು ಹೋಗಬೇಕು. ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತಿನ ದಿವಸ ಏನಾಗಿದೆ ಎಂದರೆ ಪ್ರತಿ ಕ್ಷುಲ್ಲಕ ವಿಚಾರಗಳ ಬಗ್ಗೆ, ಅವರ ವಿಚಾರ ಏತಕ್ಕೆ ಪ್ರಸ್ತಾಪವಾಗುತ್ತಾ ಇದೆಯೋ ನನಗೆ ಗೊತ್ತಿಲ್ಲ. ಹೊರಗಡೆ ಪ್ಲಾಟ್‌ಫಾರಂಗಳಲ್ಲಿ ಅವರು ಮಾತನಾಡುವುದನ್ನು ನೋಡಿದರೆ ಸ್ಕ್ರಾಂಬಲ್ಸ್ ಏತಕ್ಕೆ ಮಾಡುತ್ತಾರೋ ಗೊತ್ತಿಲ್ಲ. ಏತಕ್ಕೆ ಆರೀತಿ ಅವರಿಗೆ ಆವೇಶ ಬರುತ್ತದೋ ನನಗೆ ಗೊತ್ತಿಲ್ಲ. ಯಾವ ಉದ್ದೇಶವನ್ನಿಟ್ಟುಕೊಂಡು ಮಾತನಾಡುತ್ತಾರೋ ಗೊತ್ತಿಲ್ಲ. ಬಹುಶ: ಅವರು ಯಾರದೋ ಸಲಹೆಗಳನ್ನು ಪಡೆದುಕೊಂಡು ಈ ರೀತಿಯಾಗಿ ಮಾತನಾಡಬಹುದು ಎಂದು ನನಗೆ ಅನ್ನಿಸುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಅವರ ಸ್ವಂತ ಬುದ್ಧಿಯಿಂದ ಈ ರೀತಿಯಾಗಿ ಮಾತನಾಡುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳು ಆಗುವ ಮೊದಲಿನಿಂದಲೂ ನನಗೆ ಚೆನಾಗಿ ಪರಿಚಯ ಇದೆ ಆ ಮನುಷ್ಯ ಒಳ್ಳೆಯ ವ್ಯಕ್ತಿ. ಒಳ್ಳೆಯ ಇನ್ಸಿಟಿಟ್ಯೂಟ್‌ನಲ್ಲೇ ಇದ್ದಂಥಾ ಮನುಷ್ಯ. ಆದರೆ ಅವರು ಪ್ಲಾಟ್‌ಫಾರಂಗೆ ಮಾತನಾಡುವುದಕ್ಕೆ ಹೋದಾಗ ಅಷ್ಟು ಭಾವೋದ್ರೇಕದಿಂದ ಏತಕ್ಕೆ ಮಾತನಾಡುತ್ತಾರೋ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳನ್ನು ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ, ಏನೆಂದರೆ ಈ ಕ್ಷುಲ್ಲಕ, ಕ್ಷಣಕ ವಿಚಾರಗಳ ಬಗ್ಗೆ ಮಾತನಾಡುವುದನ್ನು ಬಿಟ್ಟುಬಿಡಿ ಎಂದು. ಈವೊತ್ತಿನ ದಿವಸ ಈ ಒಗ್ಗೆ ಪ್ರತಿ ಪಕ್ಷದವರು ಏನು ಅಪಾದನೆ ಮಾಡುತ್ತಾರೆ ಎಂದರೆ ಇಂಥಾ ಮಾತುಗಳನ್ನು ಬಿಡಿ ಎಂದು. ಈವೊತ್ತಿನ ದಿವಸ ಸರ್ಕಾರ ಮಾಡುವಂಥಾ ಕೆಲಸಗಳಿಗೆ ಪ್ರತಿಪಕ್ಷದವರೂ ಸಹ ಸಹಾಯ ಸಹಕಾರ ಮಾಡಬೇಕಾಗುತ್ತದೆ, ಆ ಬಗ್ಗೆ ಏನಾದರೂ ಒಂದು ಸಣ್ಣ ವಿಚಾರಕ್ಕೆ ಆಗಲಿ ಅಪಾದನೆ ಮಾಡಿದ ಮಾತ್ರಕ್ಕೇನೆ ಅದನ್ನು ದೊಡ್ಡದನ್ನಾಗಿ ಮಾಡಿಕೊಂಡು ಅದು ಇಡೀ ರಾಷ್ಟ್ರದ ಸಮಸ್ಯೆ, ಇಡೀ ರಾಜ್ಯದ ಸಮಸ್ಯೆ ಎಂದು ಭಾವಿಸಿಕೊಂಡು ಹೋಗತಕ್ಕಂಥಾದ್ದು ಸರಿಯಲ್ಲ. ನಮ್ಮೆಲ್ಲರ ಸಹಾಯ ಮತ್ತು ಸಹಕಾರ ಮತ್ತು ಸಲಹೆಗಳನ್ನು ಕೆಲಸ ತೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ. ಸಿ.ಐ.ಡಿ.ಯವರು ಕೆಲವೊಂದು ವೇಳೆ ಸ್ವತಂತ್ರವಾಗಿ ಕೆಲಸ ಮಾಡಬೇಕಾಗುತ್ತದೆ. ಅವರು ಸ್ವಯಂಪ್ರೇರಿತರಾಗಿ ಕೆಲಸ ಮಾಡುವುದಕ್ಕೆ ಬಿಡದೆ ಹೋದರೆ ರಾಜ್ಯದಲ್ಲಿ ನೀವು ಮುಖ್ಯ ಮಂತ್ರಿಗಳಾಗಿ ಇರುವವರೆಗೂ ಕೂಡ ಏನೂ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲಾ, ಆದುದರಿಂದ ಅವರನ್ನು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಬಿಡಿ ಎಂದು ಹೇಳುತ್ತೇನೆ. ಈ ಬಗ್ಗೆ ತಾವು ಕನ್‌ಫ್ರಂಟೇಷನ್ ಲೈನ್ ಬಿಟ್ಟು ಕನ್‌ಸ್ಟ್ರಕ್ಟೀವ್ ಲೈನ್‌ಗೆ ಯಾವ ರೀತಿ ಕೆಲಸ ಮಾಡಬೇಕು ಅನ್ನುವುದನ್ನು ಯೋಚನೆ ಮಾಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು confrantation with labour ಬಗ್ಗೆ ಹೇಳಬೇಕಾದರೆ ರಾಷ್ಟ್ರದ ಸಂಪತ್ತನ್ನು ಹೆಚ್ಚು ಬೆಳೆಸಬೇಕಾದರೆ ಕಾರಣ ಹೆಚ್ಚು ಹೆಚ್ಚಾಗಿ ಇಂಡಸ್ಟ್ರಿಯಲ್ ಲೇಬರರ್ಸ್ ಕೆಲಸ ಮಾಡಿ ಹಗಲೂ ರಾತ್ರಿ ದುಡಿದು ಕೆಲಸ ಮಾಡಿರುವುದರಿಂದ ರಾಷ್ಟ್ರದ ಸಂಪತ್ತನ್ನು ಹೆಚ್ಚು ಹೆಚ್ಚು ಬೆಳೆಸುವುದಕ್ಕೆ ಕಾರಣವಾಗಿದೆ. ಅವರೆಲ್ಲ ಕಾರಣರು ಎಂದು ಮತ್ತೊಮ್ಮೆ ಹೇಳುತ್ತೇನೆ. ಹಾಗೆಯೇ ಹಳ್ಳಿಗಳಲ್ಲಿರತಕ್ಕಂಥಾ ನೂರಾರು, ಸಾವಿರಾರು ಅಗ್ರಿಕಲ್ಚರಲ್ ಲೇಬರರ್ಸ್ ಕೂಡ ಕಾರಣರಾಗಿದ್ದಾರೆ. ಆದರೆ ದುರ್ದೈವವಶಾತ್ ಆ ರೈತರು ಏನು ಪ್ರಯತ್ನಪಟ್ಟರೂ ಕೂಡ ಏನೂ ಪ್ರಯೋಜನವಾಗಲಿಲ್ಲ, ಅದಕ್ಕೆ ಕಾರಣ ಏನು ಅನ್ನುವುದೂ ಗೊತ್ತಾಗಲಿಲ್ಲಾ. ಅದನ್ನು ಬಹಿರಂಗವಾಗಿ ಹೇಳಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಕನ್‌ಫ್ರಂಟೇಷನ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಯಾವ ನಿಲುವನ್ನೂ ತೆಗೆದುಕೊಂಡಿಲ್ಲ, ಕಾರಣ ಗೊತ್ತಿಲ್ಲ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ನವರು ಸ್ಟ್ರೈಕ್ ಮಾಡಿದಾಗ ಏನು ಆಯಿತು ಅನ್ನು

ವುದು ತಮಗೆ ಗೊತ್ತಿದೆ. ಆದುದರಿಂದ ನಾನು ಹೇಳುತ್ತೇನೆ ಇದು ಒಳ್ಳೆಯ ಆಡಳಿತದ ಕುರುಹು ಅಲ್ಲ ಎಂದು ಹೇಳಬೇಕಾಗಿದೆ. ದಯವಿಟ್ಟು ಈ ವಿಚಾರವನ್ನು ಅವರು ಯೋಚನೆ ಮಾಡಲಿ. ಇಂತಹ ಒಂದು ಲೇಬರ್ಸ್ ಜೊತೆಯಲ್ಲಿ ಕನ್‌ಫ್ರಂಟೇಷನ್ ಆಗುವುದಕ್ಕೆ ಅವಕಾಶ ಕೊಡಬೇಡಿ. ಇನ್ನು ಇವರ ಆಡಳಿತದಲ್ಲಿ ಎಷ್ಟರಮಟ್ಟಿಗೆ ಎಫಿಷಿಯೆನ್ಸಿ ಇದೆ ಅನ್ನುವುದನ್ನು ಹೇಳಬಯಸುತ್ತೇನೆ. ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ನಡೆಸುವುದಕ್ಕೆ ಸರಿಯಾದಂಥಾ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಏನು ಹೇಳಿದ್ದಾರಲ್ಲಾ ಅದಕ್ಕೆ ಒಂದು ಉದಾಹರಣೆ ತಮ್ಮ ಮುಂದೆ ಹೇಳಬಯಸುತ್ತೇನೆ. ಈವೊತ್ತಿನವರೆಗೆ ರಾಜ್ಯದಲ್ಲಿ ೫ ಸಾವಿರ ಪ್ರೈಮರಿ ಉಪಾಧ್ಯಾಯರು ಅಪಾಯಿಂಟ್‌ಮೆಂಟ್ ಆಗಬೇಕಾಗಿತ್ತು. ಅವರಿಗೆ ಅಪಾಯಿಂಟ್‌ಮೆಂಟ್ಸ್ ಇದುವರೆಗೂ ಕೊಟ್ಟಿಲ್ಲಾ. ನೂರಾರು, ಸಾವಿರಾರು ಪ್ರೈಮರಿ ಶಾಲೆಗಳಲ್ಲಿ ಈವೊತ್ತಿನ ದಿವಸ ಉಪಾಧ್ಯಾಯರೂ ಇಲ್ಲ, ಇದು ಇವರ ಒಳ್ಳೆಯ ಆಡಳಿತದ ಕುರುಹು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿ. ಈವೊತ್ತಿಗೂ ಕೂಡ ೫ ಸಾವಿರ ಉಪಾಧ್ಯಾಯರುಗಳ ವೇಕೆನ್ಸಿ ಇವೆ. ಇದನ್ನು ಇನೂ ಭರ್ತಿ ಮಾಡಿಲ್ಲಾ. ಸುಮಾರು ಎರಡು ವರ್ಷದಿಂದಲೂ ಕೂಡ ಇದನ್ನು ಭರ್ತಿ ಮಾಡಿಲ್ಲಾ, ಇದನ್ನು ಹಿಂದಿನವರು ಮಾಡಲಿಲ್ಲಾ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಬಹುದು. ಅವರ ಮಾತು ಬೇಕಾಗಿಲ್ಲಾ. ನಿಮಗೆ ಹೇಗಾದರೂ ಅವರನ್ನು ಅಪಾಯಿಂಟ್‌ಮೆಂಟ್ ಮಾಡುವ ಕ್ಲೈಮ್ ಇದೆಯಲ್ಲಾ, ಏತಕ್ಕೆ ಆಕ್ಷನ್ ತೆಗೆದುಕೊಳ್ಳಲಿಲ್ಲಾ ಹೇಳಿ. ನೀವು ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡುತ್ತೇವೆ ಎಂದು ಹೇಳಿದವರು ಏತಕ್ಕೆ ಈ ಕೆಲಸ ಮಾಡಲಿಲ್ಲಾ. ಇಂಥಾದ್ದಕ್ಕೆಲ್ಲಾ ಅವಕಾಶ ಕೊಡಬಾರದು, ಆದುದರಿಂದ ನಿಮ್ಮ ಆಡಳಿತ ಒಳ್ಳೆಯ ಆಡಳಿತ ಅಂತ ಹೇಳತಕ್ಕಂಥಾದ್ದು ಸರಿಯಲ್ಲ, ಇದು ಒಳ್ಳೆಯ ಕುರುಹು ಅಲ್ಲ ಎಂದು ಹೇಳುತ್ತೇನೆ.

ಇವರ ಒಳ್ಳೆಯ ಆಡಳಿತಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ನಮ್ಮ ರಾಜ್ಯದಲ್ಲಿ ಹೈಕೋರ್ಟಿಗೆ ಇನ್ನೂ ೪ ಜನರನ್ನು ಹಾಕಬೇಕು ಇನ್ನೂ ಹಾಕಿಲ್ಲಾ. ಅದಕ್ಕೆ ಕಾರಣ ಏನು ಅನ್ನುವುದನ್ನು ತಿಳಿಸಬೇಕು. ಇನ್ನು ಸುಮಾರು ೧೦೦ ಮುನ್ಸಿಫ್‌ರನ್ನು ಅಪಾಯಿಂಟ್‌ಮೆಂಟ್ ಮಾಡಬೇಕಾಗಿತ್ತು. ಅನೇಕ ಮುನ್ಸಿಫ್ ಕೋರ್ಟ್‌ಗಳಲ್ಲಿ ವೇಕೆನ್ಸಿ ಇದೆ. ಅದನ್ನು ಭರ್ತಿ ಮಾಡುವುದಕ್ಕೆ ಏತಕ್ಕೆ ಇನ್ನೂ ಹೋಗಿಲ್ಲ, ನೀವು ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡುವುದಾದರೆ ಈ ರೀತಿ ಡಿಲೇಗೆ ಅವಕಾಶ ಕೊಡಕೂಡದು, ಈ ರೀತಿಯಾಗಿ ಇನ್ ಆಕ್ಷನ್‌ಗೆ ಅವಕಾಶ ಇರಕೂಡದು ಎಂದು ಹೇಳುತ್ತೇನೆ. ದಯವಿಟ್ಟು ಇದನ್ನು ಯೋಚನೆ ಮಾಡಿ.

ಇನ್ನು ಬೆಂಗಳೂರಿನ ಜನರ ವಸತಿ ಬಗ್ಗೆ ಹೇಳಬೇಕಾದರೆ, ಈವೊತ್ತಿನ ದಿವಸ ಬೆಂಗಳೂರಿನಲ್ಲಿ ಏನಾಗಿದೆ ಎಂದರೆ ಬಡವರು ಕಡು ಬಡವರಾಗಿಯೇ ಇದ್ದಾರೆ, ಅವರು ಜನ್ಮಜನ್ಮಕ್ಕೂ ಬೆಂಗಳೂರಿನಲ್ಲಿ ಒಂದು ಸೈಟು ಮಾಡುವುದಕ್ಕಾಗುವುದಿಲ್ಲ. ಇನ್ನು ಮಿಡಲ್ ಕ್ಲಾಸ್, ಅಪ್ಪರ್ ಮಿಡಲ್ ಕ್ಲಾಸ್‌ನವರು ಸೈಟುಗಳನ್ನು ಹೊಂದುವುದಕ್ಕೆ ಇನ್ನೂ ಆಗಿಲ್ಲಾ ಕಾರಣ ಏನು? ನನಗೆ ಗೊತ್ತಿರುವ ಹಾಗೆ ಈವಾಗ ಬಿ.ಡಿ.ಎ ಕೆಲಸ ಏನು ಇದೆ ಈ ಸೈಟುಗಳ ಕೆಲಸ ಏನು ಮಾಡಬೇಕಾಗಿತ್ತು, ಅವೆಲ್ಲವೂ ಸ್ಥಗಿತಗೊಂಡಿದೆ, ಇದಕ್ಕೆ ಕಾರಣ ಏನು, ನೀವು ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡುವುದಾದರೆ ಈ ರೀತಿಯಾಗಿ ನಿರಾಶೆ ಭಾವನೆ ಇರಕೂಡದು. ಬಿ.ಡಿ.ಎ ಈ ಬಗ್ಗೆ ಯಾವ ರೀತಿಯಾಗಿಯೂ ನಿರಾಶೆಯಾಗಿರಬಾರದು ಎಂದು ಹೇಳುತ್ತೇನೆ.

ಸ್ವಾಮಿ, ಇನ್ನೊಂದು ಉದಾಹರಣೆ ಹೇಳುತ್ತೇನೆ. ಫಸ್ಟ್ ಡಿವಿಷನ್ ಕ್ಲರ್ಕ್ ಎಕ್ಸಾಮಿನೇಷನ್ ರಿಸಲ್ಟ್ ತಿಳಿದು ೧–೧½ ವರ್ಷವಾಗಿದೆ. ಅದರಲ್ಲಿ ಪಾಸಾದ ಹುಡುಗರಿಗೆ ಇನ್ನೂ ಅಪಾಯಿಂಟ್‌ಮೆಂಟ್ ಕೊಡಲಿಲ್ಲಾ. ಇದಕ್ಕೆ ಕಾರಣ ಏನು ಸ್ವಾಮಿ ? ಇದೇ ತರಹ ಉದಾಹರಣೆ ಇನ್ನೂ ಬೇಕಾದಷ್ಟು ಇವೆ, ಇದೇ ತರಹ ಸಿಂಬಲ್ಸ್ ಇನ್ನೂ ಬೇಕಾದಷ್ಟು ಕೊಡುತ್ತೇನೆ. ಆದರೆ ಸಮಯಾವಕಾಶ ಇಲ್ಲದೇ ಇರುವುದರಿಂದ ಇನ್ನೊಂದು ವಿಚಾರವನ್ನು ಬಹು ಮುಖ್ಯವಾದ ವಿಚಾರ ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ತೀವ್ರವಾಗಿ ಪರಿಶೀಲಿಸಬೇಕು ಎಂದು ಹೇಳುತ್ತೇನೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ನಿಜವಾಗಿಯೂ ಕೂಡ ಒಳ್ಳೆಯ ಆಡಳಿತವನ್ನು ಕೊಡಬೇಕು ಎಂದು ಅವರ ಮನಸ್ಸಿನಲ್ಲಿದೆ ಎನ್ನುವುದು ನನಗೆ ಗೊತ್ತು. ಆದರೆ ಈವೊತ್ತಿನ ದಿವಸ ಎಲ್ಲ ಮುಖ್ಯವಾದಂಥಾ ಪವರ್‌ಫುಲ್ ಪೋರ್ಟ್ ಪೋಲಿಯೋಸ್ ಅನ್ನು ಅವರೆ ಇಟ್ಟುಕೊಂಡಿರುವುದರಿಂದ ಅದರ ಕಾರ್ಯಾಚರಣೆ ಎಷ್ಟರಮಟ್ಟಿಗೆ ನಡೆಯುತ್ತಾ ಇದೆ ಅನ್ನುವುದನ್ನು ಹೇಳಬೇಕು ಎಂದು ಕೇಳುತ್ತೇನೆ. ತಮಗೆ

ಹೇಳಬೇಕಾದರೆ Home portfolio, Excise portfolio, Industries portfolio, agriculture and Sericulture portfolios are with him. ಈ ಸಿರಿಕಲ್ಚರ್ ಬಗ್ಗೆ ಹೇಳಬೇಕಾದರೆ ಈವೊತ್ತಿನ ದಿವಸ ಹಳ್ಳಿಗಳಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಬಹಳವಾಗಿ ಇದೆ ಅನ್ನುವುದನ್ನು ಹೇಳುತ್ತೇನೆ.

ಇವತ್ತಿನದಿವಸ ಹಳ್ಳಿಗಳಲ್ಲಿ ನೂರಾರು, ಸಾವಿರಾರು, ಲಕ್ಷಾಂತರ ಮಂದಿ ಯುವಕರು ಕೆಲಸವಿಲ್ಲದೇ ಈ ರೇಷ್ಮೆ ವ್ಯವಸಾಯದ ಬಗ್ಗೆ ಅವರಿಗೆಲ್ಲಾ ತಿಳಿವಳಿಕೆ ಕೊಟ್ಟು ಅದನ್ನು ಮಾಡಿಸಬಹುದು. ಈ ರೇಷ್ಮೆ ವ್ಯವಸಾಯದ ಬಗ್ಗೆ ನಮ್ಮ ಮಾನ್ಯ ಬಸಪ್ಪನವರಿಗೆ ಎಲ್ಲಾ ವಿಚಾರವೂ ಗೊತ್ತಿದೆ. ಅವರು ಎಲ್ಲೋ ಹೊರಟು ಹೋದರು......ಇಲ್ಲ. ಅವರು ಅಲ್ಲೇ ಇದ್ದಾರೆ. ಅವರು ಮಾನ್ಯ ಮುಖ್ಯಮಂತ್ರಿಯವರಿಗೆ ಈ ಬಗ್ಗೆ ಹೇಳಬೇಕು. ಆದರೆ ಇದನ್ನೆಲ್ಲಾ ಕಾರ್ಯಗತ ಮಾಡುವುದು ಯಾವಾಗ?

ಒಬ್ಬ ಮಾನ್ಯ ಸದಸ್ಯರು.—ನೀವು ಅದಕ್ಕಾಗಿ ಕಾಯಬೇಕು.

ಶ್ರೀ ಎಂ. ವಿ. ರಾಜಶೇಖರನ್.—ನಾವು ಕಾಯಬೇಕೇ, ಆಗಲಿ ಕಾಯೋಣ. ಆ ವಿಚಾರ ನಮ್ಮ ಮಾನ್ಯ ಬಸಪ್ಪನವರಿಗೆ ಗೊತ್ತಿದೆ, ಮಾನ್ಯ ಅರಸ್‌ರವರಿಗೆ ಗೊತ್ತಿದೆ, ಮಾನ್ಯ ರುದ್ರಪ್ಪನವರಿಗೆ ಗೊತ್ತಿದೆ. ನಮ್ಮ ಮಾನ್ಯ ಬಸಪ್ಪನವರ ಬಗ್ಗೆ ನಾವು ಏನು ತಿಳಿದುಕೊಂಡಿದ್ದೆವು ಎಂದರೆ ಶ್ರೀ ಡಿ. ದೇವರಾಜ ಅರಸ್‌ರವರು ಈ ಕಡೆ ಇರುವವರೆಗೆ ಇಲ್ಲಿ ಅವರು ಬಿಗಿಯಾಗಿ ಇರುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರು ಶ್ರೀ ದೇವರಾಜ ಅರಸರನ್ನು, ನಮ್ಮನ್ನು ಎಲ್ಲರನ್ನೂ ಬಿಟ್ಟು ಜಾಗ್ರತೆಯಾಗಿ ಆ ಕಡೆಗೆ ಹೊರಟು ಬಿಟ್ಟರು. ಈ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಏನು ಕಾಮೆಂಟ್ಸ್ ಮಾಡಿದರೂ ಏನೂ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೇ ಇವತ್ತಿನದಿವಸ ಎಲ್ಲಾ ಮೇಜರ್ ಪೋರ್ಟ್‌ಫೋಲಿಯೋಸ್ ಮಾನ್ಯ ಮುಖ್ಯ ಮಂತ್ರಿಯವರ ಕಾನ್ ಸೆಂಟ್ರೇಷನ್‌ನಲ್ಲಿ ಇದೆ. ಅವರು ಅದಕ್ಕೆಲ್ಲಾ ಹೇಗೆ ಗಮನಕೊಡುವುದಕ್ಕಾಗುತ್ತದೆ? ಸ್ವಾಮಿ, ಮಾನ್ಯ ಮುಖ್ಯಮಂತ್ರಿಯವರೇ, ನಿಮ್ಮ ಬುದ್ಧಿಶಕ್ತಿ ಏನಿದೆ, ನಿಮ್ಮ ಚತುರತೆ ಏನಿದೆ ಮತ್ತು ನಿಮ್ಮ ಸಲಹೆಗಾರರ ಚತುರತೆ ಏನಿದೆ ಅದನ್ನೆಲ್ಲಾ ಉಪಯೋಗಿಸಿಕೊಂಡು ಈ ಸಾಮಾನ್ಯಾಡಳಿತವನ್ನು ಬಲಪಡಿಸುವುದಕ್ಕೆ ಮತ್ತು ನಮ್ಮ ರಾಜ್ಯದಲ್ಲಿ ಕಾಮನ್ ಮೇನ್ ಏನಿದ್ದಾರೆ ಅವರಿಗೆಲ್ಲಾ ಒಳ್ಳೆಯ ಆಡಳಿತದ ಫಲವನ್ನು ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ ಮತ್ತು ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡಬೇಕಾಗುತ್ತದೆ. ಅದನ್ನು ಮಾಡಿಕೊಡಬೇಕಾದರೆ you must decentralise your powers. ನೀವು ನೋಡುವುದಕ್ಕೆ ಉದ್ದವಾಗಿ, ದಪ್ಪವಾಗಿ ಇರಬಹುದು. ಆದರೆ ಈ ಎಲ್ಲಾ ಪೋರ್ಟ್‌ಫೋಲಿಯಸ್ ಇಟ್ಟುಕೊಂಡು ನಾನೇ ಅಧಿಕಾರ ಮಾಡುತ್ತೇನೆ ಎಂದರೆ ಅದು ಹುಚ್ಚುತನವಾಗುತ್ತದೆ. ಈ ರೀತಿ ಪವರ್ ಡೀಸೆಂಟ್ರಲೈಸ್ ಮಾಡದೇ ಪವರ್ ಕಾನ್‌ಸೆಂಟ್ರೇಟ್ ಮಾಡಿರತಕ್ಕಂಥಾದ್ದು ಒಳ್ಳೆಯ ಆಡಳಿತದ ಕುರುಹೇ ಎಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ನಾನು ಈ ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಡೀಟೈಲ್ ಆಗಿ ಆ ಮೇಲೆ ಬರುತ್ತೇನೆ. ಎಲ್ಲೆಲ್ಲೂ Demoralisation has set in.

MR. DEPUTY SPEAKER.—How much time you want? You have already taken half an hour.

SRI M.V. RAJASHEKHARAN.—ತಾವು ಎಷ್ಟು ಟೈಮ್ ಕೊಡುತ್ತೀರೋ ಕೊಡಿ. You have to safeguard our rights *i.e,* right to speak in this House. I have not taken time of the House for so many months.

MR. DEPUTY SPEAKER.—You conclude by 4-30.

ಶ್ರೀ ಎಂ.ವಿ. ರಾಜಶೇಖರನ್.—ಸ್ವಾಮಿ, ನಾನು ಆದಷ್ಟು ಬೇಗ ಮುಗಿಸುತ್ತೇನೆ, ಆದರೆ ನನಗೆ ಸ್ವಲ್ಪ ಟೈಮ್ ಕೊಡಿ. ಇವತ್ತಿನದಿವಸ ಈ ಅಡ್ಮಿನಿಸ್ಟ್ರೇಷನ್‌ನ ಒಳ್ಳೆಯ ಫಲ ನಿಜವಾಗಿ ಜನತೆಗೆ ದೊರೆಯಬೇಕಾದರೆ Powers must be decentralised, both political and economical. ಇವತ್ತಿನದಿವಸ ಜಿಲ್ಲಾಡಳಿತ ಹೇಗಿದೆ? ಅದರ ಕಡೆಗೆ ಮಾನ್ಯ ಮುಖ್ಯಮಂತ್ರಿಯವರು ಹೆಚ್ಚಾಗಿ ಗಮನವನ್ನು ಕೊಟ್ಟಿದ್ದಾರೆಯೇ ಇವತ್ತಿನದಿವಸ ಡೆಪ್ಯುಟಿ ಕಮಿಷನರ್ ಏನಿದ್ದಾರೆ, ಪಾಪ,

ಆ ಪ್ರಾಣಿ ಮೇಲೆ ಎಲ್ಲಾ ರೀತಿಯ ರೆಸ್ಪಾನ್ಸಿಬಲಿಟಿಯನ್ನು ತುಂಬಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹೆಲಿಕ್ಯಾಪ್ಟರ್‌ನಿಂದ ಇಳಿದತಕ್ಷಣ ಅವರನ್ನು ರಿಸೀವ್ ಮಾಡುವುದಕ್ಕೆ ಹೋಗುವುದರಿಂದ ಹಿಡಿದು ಎಲ್ಲಾ ರೀತಿಯ ಕೆಲಸಕಾರ್ಯಗಳನ್ನೂ ಅವರು ಮಾಡಬೇಕಾಗಿದೆ. ಇದು ಸಾಧ್ಯವೇ ತಾವು ಯೋಚನೆ ಮಾಡಿ. ಈ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಅನ್ನು ಮತ್ತು ತಾಲ್ಲೂಕು ಅಡ್ಮಿನಿಸ್ಟ್ರೇಷನ್ ಅನ್ನು ಯಾವರೀತಿ ಸ್ಟ್ರೆಂಗ್ತನ್ ಮಾಡಬೇಕೆನ್ನುವ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರಾಗಲೀ ಅವರ ಸರ್ಕಾರದವರಾಗಲೀ ಏನಾದರೂ ಯೋಚನೆ ಮಾಡಿದ್ದಾರೆಯೋ ಈ ವಿಚಾರದಲ್ಲಿ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಬೆಂಗಳೂರು ನಗರದಲ್ಲಿ ಇವತ್ತಿನದಿವಸ ನಮ್ಮ ಅದೃಷ್ಟದಿಂದ ೬೦ಕ್ಕಿಂತ ಹೆಚ್ಚು ಸಂಸ್ಥೆಗಳು ಇವೆ. The important Research Management Institutions are located in Bangalore. In India there are only two places, where there are abundant resources of people with intelligence and experience. One is Bangalore and the other is Ahmedabad. Third is Delhi but Delhi is politically very hot. My hon. friend Sri R. Gundu Rao knows it very well. ಡೆಲ್ಲಿಯಲ್ಲಿ ಯಾರ್‍ಯಾರು ಆಡಳಿತ ಮಾಡಿದ್ದಾರೆ ಅವರು ಬಹಳ ಕಷ್ಟದಲ್ಲಿ ಇದ್ದಾರೆ. ಆದ್ದರಿಂದ ಇವತ್ತಿನದಿವಸ ಬೆಂಗಳೂರಿನಲ್ಲಿ ಅಂತಹ ಪ್ರಭಾವಯುತರಾದ ಬುದ್ಧಿವಂತ ವ್ಯಕ್ತಿಗಳು ಇರುವಾಗ ಅವರ ಸಲಹೆಗಳನ್ನು ತಾವು ಪಡೆಯಿರಿ. ಈ ಸದನದಲ್ಲಿ ಸಾಕಷ್ಟು ಲಾಗಳನ್ನು ಪಾಸ್ ಮಾಡಿಸುತ್ತಿದ್ದೀರಿ. ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಯವರಾದಾಗಿನಿಂದ ಸಾಕಷ್ಟು ಲಾಗಳನ್ನು ಪಾಸ್ ಮಾಡಿಸಿ ಅವುಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದರೆ ಅದರ ಒಂದು ಉಪಯೋಗ ಸಾಮಾನ್ಯ ಪ್ರಜೆಯ ಮೇಲೆ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕೋ ಬೇಡವೊ? ಆ ಕೆಲಸವನ್ನು ಮಾಡಿಸಿದ್ದಾರೆಯೋ ಎಂದು ನಾನು ಅವರನ್ನು ಕೇಳುತ್ತೇನೆ. ಇವತ್ತಿನ ದಿವಸ ನಮ್ಮಲ್ಲಿ ಪಾಸ್ ಮಾಡತಕ್ಕಂಥ ಬಹಳ ಲಾಗಳು they are only trying to help the privileged few and not powerless majority of poor people. ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳುತ್ತೇನೆ, ಇದನ್ನು ಬದಲಾವಣೆ ಮಾಡುವುದಕ್ಕೆ ಏನೇನು ಮಾಡಿದ್ದಾರೆ ಎಷ್ಟು ಲಾಗಳನ್ನು ಪಾಸ್ ಮಾಡಿದ್ದಾರೆಯೋ ಅದರ ಅನುಕೂಲ ನಿಜವಾಗಿ ಸಾಮಾನ್ಯ ಪ್ರಜೆಗೆ ಸಿಕ್ಕಿದೆಯೋ ಅದು ಸಿಕ್ಕದೇಹೋದರೆ ಅದಕ್ಕೆ ಕಾರಣ ಏನು? ಇದನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಯವರು ವಿವೇಚನೆ ಮಾಡಿದ್ದಾರೆಯೋ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಒಂದು ಕಮಿಷನ್ ಮಾಡಿ ಪ್ರತಿಭಾವಂತ ವ್ಯಕ್ತಿಗಳನ್ನು ಅದರಲ್ಲಿ ಹಾಕಿ. ನಿಮ್ಮ ಅಡ್ಮಿನಿಸ್ಟ್ರೇಷನ್‌ನಲ್ಲಿ ಇರತಕ್ಕಂಥವರು ಒಳ್ಳೆಯ ಪ್ರತಿಭಾವಂತರು ಇದ್ದಾರೆ. ನಿಮ್ಮ ಅಡ್ಮಿನಿಸ್ಟ್ರೇಷನ್‌ನಲ್ಲಿರತಕ್ಕಂಥ ಅಧಿಕಾರಿಗಳನ್ನು ನಾನು ಧೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಕುದುರೆಗಳು ಇದ್ದಹಾಗೆ. ನೀವು ಹೇಗೇ ಅವರನ್ನು ನಡೆಸುತ್ತಿರೋ ಹಾಗೆ ಅವರು ನಡೆಯುತ್ತಾರೆ, ನಿಮ್ಮಲ್ಲಿ ತಪ್ಪು ಬಂದರೆ ಅವರು ಸರಿಯಾಗಿ ನಡೆದು ಕೊಳ್ಳುವುದಿಲ್ಲ. ಆದ್ದರಿಂದ ನಾನು ಯಾವ ಅಧಿಕಾರಿಗಳನ್ನೂ ಧೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. In fact, as I have mentioned, we have got some of the bet officers in the country. The State can be proud that we have got such people in Vidhana Soudha but unfortunately they have been put in a very tight position–position of fear. ಅದಕ್ಕೆ ನಾನಾ ಕಾರಣಗಳು ಇದೆ. ಅದನ್ನು ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನನಗೆ ಸಾಕಷ್ಟು ಕಾಲಾವಕಾಶ ವಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಈ ಪೊಲಿಟಿಕಲ್ ಪವರ್ ಮತ್ತು ಎಕನಾಮಿಕ್ ಪವರನ್ನು ಡೀಸೆಂಟ್ರಲೈಸ್ ಮಾಡಿ. ಇವತ್ತಿನದಿವಸ ಇದರಲ್ಲಿ ನೀವು ಒಂದು ವಿಚಾರವನ್ನು ಬಹಳ ಚೆನ್ನಾಗಿ ಹೇಳಿದ್ದೀರಿ. ನಿಮ್ಮ ರಿಪೋರ್ಟ್‌ನಲ್ಲಿ ಸರ್ಕಾರದ ಕೆಲಸ ದೇವರ ಕೆಲಸ ಅಂತ ಹೇಳಿದ್ದೀರಿ. The legendary that has been brought back. That is what you have said ಆದರೆ ಡಿಪಾರ್ಟ್‌ಮೆಂಟ್ ಆಫ್ ಕ್ಯಾಬಿನೆಟ್ ಅಫೇರ್ಸ್ ಅಂಡ್ ಡಿಪಾರ್ಟ್‌ಮೆಂಟ್ ಆಫ್ ಪರ್ಸನಲ್ ಅಡ್ಮಿನಿಸ್ಟ್ರೇಟಿವ್ ರಿಫಾರಂಸ್ ಬಗ್ಗೆ ಏನು ಹೇಳಿದ್ದೀರಿ ಅದನ್ನು ಓದಿದರೆ ನನಗೆ ನಗು ಬರುತ್ತದೆ. ಅದಕ್ಕೋಸ್ಕರ ನಾನು ಅದನ್ನು ರೆಫರ್ ಮಾಡುವುದನ್ನು ಬಿಟ್ಟು ಹಾಗೆಯೇ ಇಟ್ಟುಬಿಟ್ಟಿದ್ದೇನೆ.

This contains only very frivolous matter. ಈ ಡಿಸ್ಟ್ರಿಬ್ಯೂಷನ್ ಆಪ್ ಥೆರ್ಮಿಕೆ ಜಗ್ಸ್ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. With a view to making facility for storage of cold drinking water and Tea and Coffee in hot condition, action was taken to supply thermic jugs of 5 & 6 litres capacity each to officers and Sections of Karnataka Government Secretariat. An amount of Rs.40,499.30 was spent for purchase of 230 thermic jugs ಎಂದು ಹೇಳಿದ್ದಾರೆ. ಸ್ವಾಮಿ, ಇದನ್ನು ಓದಿದರೆ ನಿಜವಾಗಿ ನಮಗೆ ತಲೆ ತಗ್ಗಿಸುವಂತಾಗುತ್ತದೆ. ನಿಮಗೆ ನಾಚಿಕೆಯಾಗಬೇಕು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಮಾನ್ಯ ಅಧ್ಯಕ್ಷರು ಆ ಪದವನ್ನು ಉಪಯೋಗಿಸಬೇಡಿ ಎಂದು ಹೇಳುತ್ತಾರೆ. ಇದನ್ನು ನೋಡಿ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತಿದೆ. ಈ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನ ರಿಪೋರ್ಟನ್ನು ನೋಡಿದರೆ ನಮಗೆ ಏನು ಗೊತ್ತಾಗುತ್ತದೆ ಎಂದರೆ ನೂರಾರು, ಸಾವಿರಾರು ಹಳ್ಳಿಗಳಲ್ಲಿ ಇವತ್ತಿನ ದಿವಸ ಕುಡಿಯುವುದಕ್ಕೆ ನೀರೇ ಇಲ್ಲ, ಇಲ್ಲಿ ಅವರಿಗೆ ಕೋಲ್ಡ್ ವಾಟರ್ ಕುಡಿಸಬೇಕಂತೆ, ಇದಲ್ಲದೇ "Additional lifts to Vidhana Soudha, Supply of Tea/Coffee to officials of Karnataka Government Secretariat, Regulation of entry of visitors into Vidhana Soudha. ಈ ಬಗ್ಗೆ ಕೂಡ ಹೇಳಿದ್ದಾರೆ. ಇವತ್ತಿನದಿವಸ ಈ ವಿಧಾನಸೌಧ ಏನಿದೆ. This is the seat of administration, people should also realise by just looking at the building that the rule of law is being enforced. ಆದರೆ ನಮ್ಮ ಪರಮ ಮಿತ್ರರು ಏನು ಮಾಡಿದ್ದಾರೆ ಎಂದರೆ ಇದರ ಸುತ್ತ ಪೋಲೀಸರ ಒಂದು ದೊಡ್ಡ ಯೂನಿಟ್ಟನ್ನು ಕಾವಲಿಗೆ ಹಾಕಿದ್ದಾರೆ. ಇದರ ಸುತ್ತಮುತ್ತ ಎಲ್ಲಿ ನೋಡಿದರೂ ಪೋಲೀಸ್‌ಮೆನ್ ಇರತಕ್ಕಂಥ ಬಸ್‌ಗಳು ಮತ್ತು ಪೋಲೀಸ್ ಕಾನ್‌ಸ್ಟೇಬಲ್ಸ್ ಕಾಣುತ್ತಾರೆ. ಇವರನ್ನೆಲ್ಲಾ ಹಾಕಿ, ರಿಪೋರ್ಟ್‌ನಲ್ಲಿ ಸರ್ಕಾರಿ ಕೆಲಸ ದೇವರ ಕೆಲಸ ಎಂದು ಹೇಳಿದ್ದಾರೆ.

ಸ್ವಾಮಿ ಇವತ್ತು ಹೆಣ್ಣು ಮಕ್ಕಳನ್ನು ಬಂಧನ ಮಾಡಿ ಒಳಗೆ ಹಾಕಿದ್ದಾರೆ. "Reviving the Legend. ನಿಜ ಸ್ವಾಮಿ ಸರ್ಕಾರದ ಕೆಲಸ ದೇವರ ಕೆಲಸ ಎಂದು ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಓದಿದ್ದರೆ ಇದನ್ನು ಪ್ರಿಂಟ್ ಮಾಡಿಸುತ್ತಿರಲಿಲ್ಲ. ಆದ್ದರಿಂದ ಇದನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತೀರಿ. ? ಮತ್ತೆ ವಿಧಾನಸೌದಕ್ಕೆ the words "Governments work is god's work" inscribed at the main entrance of Vidhana Soudha but were, removed subsequently. Now as per Government's decision action is being taken in consultation with public Works and Electricity Department for revival of the legend on the main entrance of Vidhana Soudha. The Public Works and Electricity Department has submitted an estimate of Rs. 3000 for the work for administrative approval." ಮತ್ತೆ ಮೂರು ದಿವಸಗಳ ಹಿಂದೆ We have restored and revived the legend. This Vidhana Soudha must be the seat where a common man can come and get his grievance redressed. Sri Lankaದಲ್ಲಿ ಪ್ರಧಾನ ಮಂತ್ರಿಗಳು ಹೇಳಿದರು, During a particular hour anybody in the State can directly ring to the Chief Minister and he will attend within no minute to his grievances. ಆದ್ದರಿಂದ ನಾವು ಚೆನ್ನಾಗಿ ಕೆಲಸ ಮಾಡಬೇಕು. ತಮಗೆ ಏನು ಸವಲತ್ತುಗಳು ಬೇಕೋ ಆ ಎಲ್ಲಾ ಸವಲತ್ತುಗಳನ್ನು ತೆಗೆದುಕೊಳ್ಳಿ. But, I judge your performance on the basis of what you are going to give to the comomnman. ನಾವೇನಾದರೂ ವಿಧಾನಸೌದಕ್ಕೆ ಫೋನ್ ಮಾಡಿದರೆ ೮–೧೦ ಕಡೆ ಹೋಗುತ್ತದೆ. ಏತಕ್ಕೆ ಹೋಗುತ್ತದೆಯೋ ಗೊತ್ತಿಲ್ಲ. ತಮ್ಮ ಪಿ.ಎಸ್‌ಗಳು ಒಳ್ಳೆಯ ಜನರಿದ್ದಾರೆ. ಅವರು ಒಳ್ಳೆಯ ಶಿಸ್ತಿನಿಂದ ಕೆಲಸ ಮಾಡುತ್ತಾರೆ. The System does not allow youto function effectively. The system does not allow you to give

good administration to the commonman. That is what you should remember and try to rectify. ಆದ್ದರಿಂದ ಸ್ವಾಮಿ ಇವತ್ತು ಏನಾಗಿದೆ ಎಂದರೆ ವಿಧಾನ ಸೌಧವನ್ನು ಒಳಗಡೆ ನೋಡಲು ಒಬ್ಬ ಸಾಮಾನ್ಯ ಪ್ರಜೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಾಮಾನ್ಯ ಮನುಷ್ಯನು ಬಂದ್ರೆ ನೇರವಾಗಿ ಏತಕ್ಕೆ ನೋಡಬಾರದು. ಅವನು ನೇರವಾಗಿ ತಮಗೆ ಓಟು ಕೊಟ್ಟಿದ್ದಾರೆ. ಅಂತಹವನಿಗೆ ತಾವು ವಿಧಾನ ಸೌಧವನ್ನು ಒಳಗಡೆ ನೋಡುವುದಕ್ಕೆ ಅವಕಾಶ ಮಾಡಿಕೊಡಿ. I say that Sri Gundu Rao has given a very good and best administration. ಈ ಒಂದು ಕೆಲಸವನ್ನು ತಾವು ಮಾಡಬೇಕು. ಮತ್ತೇ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಅದು ಏನೆಂದರೆ In transfers no interference. In fact I congratulated him even before he took decision. One day we were travelling from Delhi to Bangalore in the same flight, I said, you take the decision irrespective of so may peopel, before the members in their party think about, or the Opposition Members think about it. ಮತ್ತೆ ನಮ್ಮ ಅಡ್ಮಿನಿಸ್ಟ್ರೇಷನ್‌ನಲ್ಲಿ ಸರಿಯಾಗಿ ಕೆಲಸ ಮಾಡಂತ್ತಿಲ್ಲ. Both political interference and influence that is what is causing the deterioration of the good administration in the state. ಇದರ ಬಗ್ಗೆ ಎಫೆಕ್ಟೀವ್ ಇದೆ. ಇದರಿಂದ ಏನಾಗಿದೆ ಎಂದರೆ ಜನರಿಗೆ ನ್ಯಾಯವಾಗಿ ಅವರ ಮನಸ್ಸಿನಲ್ಲಿ ವೇದನೆಯಾಗಿದೆ. ಕೆಲಸ ಮಾಡುವುದರಲ್ಲಿ ಸ್ಥಗಿತವಾಗಂತ್ತದೆ. ಇದಕ್ಕೆ ನಾವು ಅವಕಾಶ ಮಾಡಿಕೊಡುವುದು ಬೇಡ. ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡಬೇಕಾದರೆ ಸರಿಯಾದ ರೀತಿಯಲ್ಲಿ ಆಡಳಿತ ವ್ಯವಸ್ಥೆ ಇರಬೇಕು. ಎಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾನು ಎಲ್ಲಿ ಹೋದರು ಜನ ನನ್ನನ್ನು ಸ್ವಾಗತಿಸುತ್ತಾರೆ ಎಂದು, ಅದು ನಿಜ ಅಲ್ಲ ಎಂದು ನಾನು ಹೇಳುವುದಿಲ್ಲ, ಯಾವ ಒಬ್ಬ ಮುಖ್ಯಮಂತ್ರಿ ಯಾಗಲಿ ಅಥವಾ ಮಂತ್ರಿಗಳಾಗಿ ಹೋದಾಗ ಅವರನ್ನು ಸ್ವಾಗತಿಸುವುದು ಸಹಜ. ಆದರೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಯುವಕರು. ಯುವಕ ಮುಖ್ಯಮಂತ್ರಿಗಳನ್ನು ನೋಡುವುದಕ್ಕೆ ಜನರು ಬರುತ್ತಾರೆ. ಅಂತಹ ಜನರಿಗೆ ತಾವುಕೊಟ್ಟಿರುವುದಾದರು ಏನು? ಆ ಮೇಲೆ ಸಾವಿರಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಕರ್ಯಗಳು ಇಲ್ಲ. ಆದರೆ ತಾವು ಹೇಳಿರುವ ಪ್ರಕಾರ ನವೆಂಬರ್ ೧೯೮೧ರ ವೇಳೆಗೆ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸುತ್ತೇವೆ ಎಂದು ಹೇಳಿದ್ದೀರಿ ಆದರೆ ಅದರ ಬಗ್ಗೆ What is the action you have taken, ಈಗಾಗಲೇ ನಾವು ಜುಲೈ ತಿಂಗಳಿನಲ್ಲಿ ಇದ್ದೇವೆ. ಸ್ವಾಮಿ ನನ್ನ ಕ್ಷೇತ್ರದಲ್ಲಿ ಹೇಳುವುದಾದರೆ ಯಾವ ವಿಧವಾದ ರಿಲೀಫ್ ಕೆಲಸಕಾರ್ಯಗಳನ್ನೂ ತೆಗೆದುಕೊಂಡಿಲ್ಲ. ಕುಡಿಯುವ ನೀರಿನ ಸೌಕರ್ಯ ಒಂದು ಹಳ್ಳಿಗೂ ಒದಗಿಸಿಕೊಟ್ಟಿಲ್ಲ. ನೂರಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಟ್ಟಿಲ್ಲ. ನಾನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿ ಮೀಟಿಂಗ್‌ನಲ್ಲಿಯೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಎಲ್ಲಿ ರಿಗ್ ಅವಶ್ಯಕವಾಗಿ ಬೇಕಾಗಿದೆಯೋ ಅಲ್ಲಿ ರಿಗ್ ಯಂತ್ರವನ್ನು ಒದಗಿಸಿಕೊಟ್ಟಿಲ್ಲ. ಹೀಗಿರುವಾಗ ಇನ್ನು ೩ ತಿಂಗಳೊಳಗಾಗಿ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಡಲು ಹೇಗೆ ಸಾಧ್ಯವಾಗುತ್ತದೆ ? ಎಂಬುದನ್ನು ನೀವೆ ಲೆಕ್ಕ ಹಾಕಿ. I want to judg on the performance, not on the assurances or intentions.

MR. DEPUTY SPEAKER.—I am very sorry. You have taken 40 minutes.

SRI M. V. RAJASHEKHARAN.—My thoughts will not be palatable to the ruling party. I will never realise that it is palatable to the chair also.

MR. DEPUTY SPEAKER.—5 Members from Opposition side and 10 Members from their side are there.

SRI M. V. RAJASHEKHARAN.—I will try to conclude as quickly as possible.

MR. DEPUTY SPEAKER.—You speak on that occasion.

SRI M. V. RAJASHEKHARAN.—The decision making apparatus let him decentralise the whole thing. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಯುವಕರು ಅವರು ಚೆನ್ನಾಗಿ ಕೆಲಸ ಮಾಡಬೇಕು. ಅವರು ಬಹಳ ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಇರಬೇಕು. ಏತಕ್ಕೆಂದರೆ ಎಲ್ಲಾ ಮುಂದುಕರು ಮುಖ್ಯಮಂತ್ರಿಗಳಾಗಿ ಬೇಗ ಬೇಗ ಅಧಿಕಾರದಿಂದ ಇಳಿದು ಹೋಗಿದ್ದಾರೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೯ ಜಿಲ್ಲೆಗಳು ಇವೆ. ಇದರಲ್ಲಿ ಸುಮಾರು ೧೫ ಜಿಲ್ಲೆಗಳಲ್ಲಿ ಬರಗಾಲ ಪರಿಸ್ಥಿತಿ ಇದೆ. ತಾವು ಕೇಂದ್ರ ಸರ್ಕಾರದಿಂದ ಈ ಬರಗಾಲ ನಿವಾರಣೆಗಾಗಿ ೬೦ ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ ಎಂದು ಪತ್ರಿಕೆಯಲ್ಲಿ ಓದಿದ್ದೇನೆ, ಕೇಂದ್ರ ಸರ್ಕಾರದಿಂದ ಎಷ್ಟು ಕೋಟಿ ರೂಪಾಯಿಗಳು ನಮ್ಮ ಸರ್ಕಾರಕ್ಕೆ ಬಂತು. ಮಾನ್ಯ ಮುಖ್ಯಮಂತ್ರಿಗಳಿಗೆ ಕೇಂದ್ರ ಸರ್ಕಾರದಲ್ಲಿ ಒಳ್ಳೆಯ ಇನ್‌ಫ್ಲಿಯೆನ್ಸ್ ಇದೆ ಎಂದು ಕೇಳಿದ್ದೇನೆ. ಆದರೆ ಅವರಿಗೆ ಎಷ್ಟು ಇನ್‌ಫ್ಲಿಯೆನ್ಸ್ ಇದೆ ಎಂದು ಅವರಿಗೆ ಗೊತ್ತು ನನಗೆ ಗೊತ್ತು. ಈ ಬರಗಾಲದ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ಇದರ ಬಗ್ಗೆ ಮಾತನಾಡುತ್ತೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಮ್ಮ ವಿಧಾನ ಸೌಧದಲ್ಲಿ ಒಳ್ಳೆಯ ಮುಖ್ಯ ಕಾರ್ಯದರ್ಶಿಗಳು ಇದ್ದಾರೆ. ಅವರು ಚನ್ನಾಗಿ ಕೆಲಸ ಮಾಡುತ್ತಾರೆ, ಅವರು ಯಾರ ನಿರ್ಬಂಧಕ್ಕೂ ಒಳಗಾಗಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳು ಅಲ್ಲ. ಆದ್ದರಿಂದ ಸರ್ಕಾರದ ಅಧಿಕಾರಿಗಳು ಏನೇನು ಸಲಹೆಗಳನ್ನು ಕೊಡುತ್ತಾರೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ಮಾಡಿದರೆ ಒಳ್ಳೆಯದು, The ultimate decision must be yours. The ultimate decision must lie with thepolitical power, not with the civil authority. Political power, the politicians they are the most powerful people. But, unfortunately, what could we do? We have brought down the very institution of politicians because of our behaviour in public, ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಪೊಲಿಟಿಕಲ್ ಪವರ್ ತೆಗೆದುಕೊಂಡು ಅಧಿಕಾರಿಗಳು ಕೊಟ್ಟ ಸಲಹೆಗಳನ್ನು ಸರಿಯಾಗಿ ಪರಿಶೀಲನೆ ಮಾಡಿದರೆ ತಮಗೆ Political decision making authority, you please decentralise the whole thing. You must share that power at the district level, at the taluk level.

4-30 P.M.

I don't mind if you to share it with your own people, but I want that power to go there.

ಸ್ವಾಮಿ, ಕಡೆಯದಾಗಿ ಪೋಲೀಸ್ ಇಲಾಖೆಯ ಬಗ್ಗೆ ಹೇಳಬೇಕಾಗುತ್ತದೆ. ನಾನು ಸಾಮಾನ್ಯವಾಗಿ ಈ ಇಲಾಖೆ ಬಗ್ಗೆ ಮಾತನಾಡುವುದಿಲ್ಲ. ಆದರೆ ನನ್ನ ಮನಸ್ಸಿಗೆ ನೋವಾಗಿರುವುದರಿಂದ ಮಾತನಾಡುತ್ತಿದ್ದೇನೆ. ಇವೊತ್ತಿನದಿವಸ ಈ ಪೋಲೀಸ್ ಇಲಾಖೆ ಏನಿದೆ, ಇದು ಚೆನ್ನಾಗಿ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ, ನಮ್ಮಲ್ಲಿ ಬಡತನ ಹೆಚ್ಚುತ್ತಿದೆ ಹಾಗೂ ಬೆಳೆಯುತ್ತಿದೆ. ಮೊದಲು ನಮ್ಮಲ್ಲಿ ಇದು ೪೦ ಪರ್ಸೆಂಟ್ ಇದ್ದರೆ, ಈಗ ಅದು ೫೩ ಪರ್ಸೆಂಟ್‌ಗೆ ಹೆಚ್ಚಿದೆ. ಅದು ಇನ್ನೂ ಜಾಸ್ತಿಯಾಗಬಹುದು. ಆದ್ದರಿಂದ ಈ ಇಲಾಖೆ ಹುಷಾರಿನಿಂದ ಕೆಲಸ ಮಾಡಬೇಕಾಗುತ್ತದೆ. Both with regard to Law and Order and act as a friend of a common man. ಏಕೆಂದರೆ ಮಾನ್ಯ ಆಮ್ರುಗಂ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಮುಖ್ಯವಾಗಿ ಅವರು ಹರಿಜನ ಮತ್ತು ಗಿರಿಜನರಿಗೆ ಸಂಬಂಧಪಟ್ಟಂತೆ ಯಾವ ರೀತಿ ತೊಂದರೆಯಾಗುತ್ತಿದೆ ಎಂಬ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ನಮಗೆ ಬಹಳ ದಕ್ಷವಾದಂಥ ಒಂದು ಪೋಲೀಸ್ ಇಲಾಖೆ ಇರಬೇಕು. ಮೊನ್ನೆ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಐ.ಜಿ.ಪಿ. ಸಾಹೇಬರು ಹೇಳಿದಂಥ ಒಂದು ವಿಷಯ ವರದಿ

ಯಾಗಿದೆ, ಅವರು ಒಳ್ಳೆಯುವರೆಂದು ನಾನು ಕೇಳಿದ್ದೇನೆ What is good ? The man may be very good, but I would like to say as far as this country is conɜerned because it is a poor country. ನಾನು ಈಗಿನ ಐಜಿಪಿ ಅವರನ್ನು ಸ್ವತಃ ಹೋಗಿ ನೋಡಿಲ್ಲ. ಪತ್ರಿಕೆಯಲ್ಲಿ ಬಂದಿರುವ ಅವರ ಫೋಟೋವನ್ನು ನೋಡಿದ್ದೇನೆ. ಈ ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ಅವರೇ ಸ್ವತಃ ಹೇಳಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಇಲ್ಲಿ ಬಂದಿರುವ ವಿಚಾರವನ್ನು ಓದಿದ ನಂತರ ನನ್ನ ಮನಸ್ಸಿಗೆ ಬಹಳ ನೋವಾಯಿತು. He is supposed to have said, which has been reported in lucid terms by Deccan Herald, ''What was the Association doing when I was superceded for thirteen times ?''

ಸ್ವಾಮಿ, ತಾವೇ ಯೋಚನೆ ಮಾಡಿ, ೧೩ ಸಲ ಇವರನ್ನು ಸೂಪರ್‌ಸೀಡ್ ಮಾಡಿರಬೇಕಾದರೆ, ಅದಕ್ಕೆ ಕಾರಣವೇನು ಎಂಬುದನ್ನು ? ಅವರು ಒಳ್ಳೆಯುವರಾಗಿರಬಹುದು, ಆದರೆ ಅವರು ಹಾರ್ಟ್ ಪೇಷಂಟ್ ಇದ್ದಾರೆಂದು ನಾನು ಕೇಳಿದ್ದೇನೆ. ದೇವರು, ಅವರನ್ನು ಬಹಳ ಕಾಲ ಇಟ್ಟಿರಲಿ ಹಾಗೂ ಅವರಿಗೆ ಒಳ್ಳೆಯುದನ್ನು ಮಾಡಲಿ. ಆದರೆ ಒಂದು ಜವಾಬ್ದಾರಿ ಸ್ಥಾನಕ್ಕೆ ನೇಮಕವಾಗುಪವರು ಎಫಿಷಿಯೆಂಟ್ ಆಗಿರಬೇಕಾಗುತ್ತದೆ. Every minute, every second he has got to perform. ಈಗಿನ ಐ.ಜಿ.ಪಿ. ಅವರು ಎಷ್ಟು ರಾತ್ರಿಗಳು ನಿದ್ದೆ ಇಲ್ಲದೆ ಇದ್ದಾರೋ ಗೊತ್ತಿಲ್ಲ. ಆದ್ದರಿಂದ ಒಳ್ಳೆಯ ಪೋಲೀಸ್ ಆಫೀಸರ್‌ನ್ನು ಐ.ಜಿ.ಪಿ. ಯನ್ನಾಗಿ ನೇಮಕ ಮಾಡಬೇಕೆಂದು ಹೇಳುತ್ತೇನೆ ನಮ್ಮ ಮುಖ್ಯಮಂತ್ರಿಗಳು ಯಾವ ರೀತಿ ಮರ್ಕ್ಯುರಿ ಇದ್ದಂತೆ ಇದ್ದಾರೋ ಅದರ ಇನ್ನೂರರಷ್ಟು ಮರ್ಕ್ಯುರಿ ತರಹ ಕೆಲಸ ಮಾಡುವವರನ್ನು ನೇಮಕ ಮಾಡಬೇಕು. ಈಗಿನವರಿಗೆ ಆರೋಗ್ಯ ಚೆನ್ನಾಗಿ ಇಲ್ಲದ ಪ್ರಯುಕ್ತ ೧೫ ದಿವಸ ಇಲ್ಲವೇ ಒಂದು ತಿಂಗಳ ಕಾಲ ಆಸ್ಪತ್ರೆಯಲ್ಲಿದ್ದರೆಂದು ನಾನು ಕೇಳಿದ್ದೇನೆ ನಾನು ವೈಯುಕ್ತಿಕವಾಗಿ ಅವರನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಳ್ಳೆಯುವರನ್ನು ಈ ಜಾಗಕ್ಕೆ ಹಾಕಿ ಎಂದು ಹೇಳುತ್ತೇನೆ. ಇವರಂತೆಯೇ ಹೋಂ–ಸೆಕ್ರೆಟರಿ ಅವರೂ ಸಹ ಒಳ್ಳೆಯುವರೆಂದು ನಾನು ಕೇಳಿದ್ದೇನೆ. ಆದರೆ ಅವರೂ ಸಹ ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಒಂದು ಕಡೆ ಹೋಂ ಸೆಕ್ರೆಟರಿ ಅವರು ಇನ್ನೊಂದು ಕಡೆ ಐ.ಜಿ.ಪಿ ಸಾಹೇಬರು ಇದ್ದು ಈಗಿನ ಪೋಲೀಸ್ ಆಡ್ಮಿನಿಸ್ಟ್ರೇಷನ್ ಸರಿಯಾಗಿ ಫಂಕ್ಷನ್ ಆಗುತ್ತಿಲ್ಲ, ಆದ್ದರಿಂದ ಇದರ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕಾಗಿದೆ ಎಂದು ನನಗನ್ನಿಸುತ್ತದೆ.

ಇನ್ನು ಸಿ.ಒ.ಡಿ. ಬಗ್ಗೆ ಹೇಳಬೇಕೆಂದರೆ, To-day COD has become a thoroughly demorelised organisation. You should not have given any room for happening or bringing about such a situation in State. ಇಲ್ಲಿ ಕೆಲಸ ಮಾಡುತ್ತಿದ್ದ ಭಟ್ ಸಾಹೇಬರನ್ನು ತಾವು ಹೊರಗಡೆಗೆ ಕಳುಹಿಸಿದಿರಿ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. It is your right. it is the right of the IGP and the Home Secretary to advise you. ಆದರೆ ಇವರು ಬಿ.ಜೆ.ಪಿ.ಗೆ ಸಿಂಪಥೈಜ್ ಆಗಿದ್ದರೆಂಬ ಕಾರಣದಿಂದ ಯಂ.ಪಿ.ಗೆ ಕಳುಹಿಸಲಾಯಿತೆಂದು ಮತ್ತೊಬ್ಬರನ್ನು ಕಾಶ್ಮೀರಕ್ಕೋ ಅಥವಾ ಇನ್ನೆಲ್ಲಿಗೋ ಕಳುಹಿಸಲಾಯಿತೆಂದು ನನಗೆ ಯಾರೋ ಹೇಳಿದರು. ಆದರೆ ತಾವು ತಮ್ಮ ಅಧಿಕಾರಿಗಳ ವಿಚಾರದಲ್ಲಿ ಈ ರೀತಿಯಾಗಿ ಅನುಮಾನ ಇಟ್ಟುಕೊಳ್ಳುವುದಾದರೆ, ಅದು ನಿಮ್ಮ ಮನೆಯ ಸ್ವಂತ ಹೆಂಗಸರ ಬಗ್ಗೆಯೇ ಅನುಮಾನ ಇಟ್ಟುಕೊಂಡಂತೆ ಆಗುತ್ತದೆ ಆದ್ದರಿಂದ ತಾವು ಅಧಿಕಾರಿಗಳ ವಿಚಾರದಲ್ಲಿ ದಯಮಾಡಿ ಆ ರೀತಿ ಅನುಮಾನ ಪಡುವುದು ಬೇಡ.. You treat every officer as an honest man. and efficient and he does not belong to any party. I believe today in Karnataka the police officers do not belong to any section, any political party but we are trying to make use of their honesty for our own selfish end. ಆದ್ದರಿಂದ ಮುಖ್ಯಮಂತ್ರಿಗಳು ಇಂಥಾದ್ದಕ್ಕೆ ಇನ್ನು ಮುಂದೆ ಅವಕಾಶ ಕೊಡಬಾರದು. That is what I want. That is what I want the Chief Minister to do in the party and ask his members, because every fortnightly they are meeting in the party meetings.

(Interruptions)

MR. DEPUTY SPEAKER.—You have taken 55 minutes. Please conclude.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಂಡದ್ದನ್ನು ಕಂಡಂತೆ ಹೇಳಿದರೆ ಇವರಿಗೆ ಕೆಂಡದಂಥ ಕೋಪ ಬರುತ್ತದೆ. ಅದಕ್ಕೇನು ಮಾಡುವುದಕ್ಕಾಗುತ್ತದೆ ?

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ಕಡೆ ಮಾತನಾಡುವವರು ಬಹಳ ಮಂದಿ ಇದ್ದಾರೆ. ಆದರೆ ಅವರ ಹತ್ತಿರ ಮಾತನಾಡುವಂತಹ ಅನೇಕ ವಿಷಯಗಳು ಇರುವಂತೆ ಕಾಣುತ್ತಿದೆ.

ಶ್ರೀ ಎಂ.ವಿ. ರಾಜಶೇಖರನ್.—ನಾನು ಜಾಗ್ರತೆ ಮುಗಿಸಿಬಿಡುತ್ತೇನೆ. ನಾನು ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆಂದರೆ, ಅವರ ಪಾರ್ಟಿ ಮೀಟಿಂಗ್ ಏನು ನಡೆಯುತ್ತದೆ. It is also important to the House. We would like to know what happens in the party, because whatever decision they take and untake, is going to have an effect on the opposition and also on the State. So, I am equally interested in what happens in the party.

(Interruptions)

MR. DEPUTY SPEAKER.—You have taken one hour completely Please conclude.

ಶ್ರೀ ಎಚ್.ಟಿ, ಕೃಷ್ಣಪ್ಪ.—ಮಾನ್ಯ ಸದಸ್ಯರು ಈಲ್ಡ್ ಆದರೆ...

ಶ್ರೀ ಎಂ.ವಿ. ರಾಜಶೇಖರನ್.—ನಾನು ಈಲ್ಡ್ ಆಗುವುದಿಲ್ಲ. ತಾವು ಹಿರಿಯ ಸದಸ್ಯರಿದ್ದೀರಿ. ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಿ. ಇವೊತ್ತಿನದಿವಸ ಇವರ ಪಾರ್ಟಿ ಮೀಟಿಂಗ್‌ಗೆ ಮುಖ್ಯ ಮಂತ್ರಿಗಳು ಹೋದರೆ ಸಾಕು. ಅವರನ್ನು ಹೊಗಳುವುದೇ ಇವರ ಕೆಲಸವಾಗಿಬಿಟ್ಟಿದೆ. ಈ ಸಂದರ್ಭ ದಲ್ಲಿ ನನಗೆ ಬಸವಣ್ಣನವರ ವಚನ ಜ್ಞಾಪಕಕ್ಕೆ ಬರುತ್ತಿದೆ. "ಎನ್ನ ಹೊಗಳಿ ಹೊಗಳಿ ಹೊನ್ನ ಶೂಲ ಕೇರಿಸಬೇಡಿ'' ಎಂದು ಅವರು ಹೇಳುತ್ತಿದ್ದರಂತೆ. ಅದರಂತೆ ಇವರೆಲ್ಲರೂ ಸೇರಿಕೊಂಡು ಮುಖ್ಯ ಮಂತ್ರಿಗಳನ್ನು ಎಲ್ಲಿ ಹೊನ್ನ ಶೂಲಕ್ಕೆ ಹಾಕುತ್ತಾರೋ ಎಂದು ನನಗೆ ಹೆದರಿಕೆಯಾಗಿದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ. ಈಗ ನನ್ನ ಮುಖ್ಯ ವಾದ ಪ್ರಶ್ನೆ ಏನೆಂದರೆ, ಮಾನ್ಯ ರಾಜಶೇಖರನ್ ಅವರು ಮಾತನಾಡುವ ಒಂದು ಆವೇಶದ ಬರದಲ್ಲಿ ನಮ್ಮ ಪಕ್ಷದಲ್ಲಿ ನಡೆಯುವ ವಿಚಾರಗಳು ಸರಿಯೋ ಅಥವಾ ತಪ್ಪೋ ಎಂದು ಹೇಳತಕ್ಕಂಥ ಅಧಿಕಾರ ವನ್ನು ತೆಗೆದುಕೊಂಡಿದ್ದಾರೆ. ಈ ಒಂದು ಅಧಿಕಾರವನ್ನು ಇವರಿಗೆ ಕೊಟ್ಟವರು ಯಾರು ? ನಮ್ಮ ಪಕ್ಷ ಸರಿಯಾಗಿ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ ಎಂದು ಗೇಲಿ ಮಾಡುವ ಮಟ್ಟಕ್ಕೆ ಅವರು ಹೋಗು ತ್ತಿದ್ದಾರೆ. ನಮಗೂ ಸಹ ಆತ್ಮಗೌರವಿದೆ. ಆದ್ದರಿಂದ ಅವರು ಆ ರೀತಿಯೆಲ್ಲಾ ಮಾತನಾಡಬಾರ ದೆಂದು ತಾವು ಅವರಿಗೆ ಆದೇಶ ಕೊಡಬೇಕು.

ಶ್ರೀ ಮತ್ತೀಕಟ್ಟಿ.—ಇಲ್ಲದಿದ್ದರೆ ಅವರು ನಮ್ಮ ಪಕ್ಷಕ್ಕೆ ಸೇರಿಕೊಂಡು ಆಮೇಲೆ ಬೇಕಾದರೆ ಮಾತನಾಡಲಿ.

ಶ್ರೀ ಎಂ.ವಿ. ರಾಜಶೇಖರನ್.—ಅದಕ್ಕೆ ನಾನು ಉತ್ತರ ಕೊಡುವ ಅಗತ್ಯವೇನೂ ಇಲ್ಲ. ಇನ್ನು ಪೋಲೀಸರಿಗೆ ಟ್ರೈನಿಂಗ್ ಕೊಡುವ ವಿಚಾರ. ಪೋಲೀಸರಿಗೆ ಒಳ್ಳೆಯ ಟ್ರೈನಿಂಗ್ ಕೊಟ್ಟರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಆದ್ದರಿಂದ ಅವರಲ್ಲಿ ಒಳ್ಳೆಯ ಡಿಸಿಪ್ಲೀನ್ ಬರುವಂತಹ ರೀತಿಯಲ್ಲಿ ಟ್ರೈನಿಂಗ್ ಕೊಡಲು ಒಳ್ಳೆಯ ಎಫಿಷಿಯೆಂಟ್ ಆಗಿರುವವರನ್ನು ನೇಮಕ ಮಾಡಬೇಕೇ ಹೊರತು ಬೇರೆಯವರನ್ನು ಟ್ರೈನಿಂಗ್ ಕೊಡಲು ನೇಮಕ ಮಾಡಬೇಡಿ ಎಂದು ಹೇಳುತ್ತೇನೆ.

ಇನ್ನು Forensic Science Laboratory ಬಗ್ಗೆ ಹೇಳಬೇಕೆಂದರೆ, it is a very important institution in the State like any other institution, because that institution gives you all the backing for detection of crimes. ಆದರೆ

ಇಲ್ಲಿ ಕಳೆದ ೩–೪ ವರ್ಷಗಳಿಂದ ಹ್ಯಾಂಡ್-ರೈಟಿಂಗ್ ಎಕ್ಸ್‌ಪರ್ಟ್ಸ್ ಇಲ್ಲ. ನಾನು ಪತ್ರಿಕೆಗಳಲ್ಲಿ ಓದಿದ ಪ್ರಕಾರ ಶ್ರೀ ರಾಜೇಂದ್ರನ್ ಕೇಸ್‌ನಲ್ಲಿ ಅವರೇ ಸಹಿ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಹೈದರಾಬಾದಿಗೆ ಕಳುಹಿಸಿಕೊಟ್ಟಿದ್ದರು. ಇಂತಹ ಒಂದು ಕೇಸ್‌ಗೆ ೩–೪ ಸಾವಿರ. ರೂ. ಗಳನ್ನು ಕೊಡುತ್ತಾರೆಂದು ಕೇಳಿದ್ದೇನೆ. ಇಷ್ಟೊಂದು ಹಣವನ್ನು ಅವರಿಗೆ ಕೊಡುವುದಕ್ಕೆ ಬದಲು ಇಲ್ಲಿಯೇ ಅಂತಹ ಎಕ್ಸ್‌ಪರ್ಟ್‌ನನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲವೇ ? ದಯಮಾಡಿ ಆ ಸಂಸ್ಥೆಯನ್ನು ಚೆನ್ನಾಗಿ ನಡೆಸಿ ಮತ್ತು ಅಲ್ಲಿ ಎಲ್ಲ ರೀತಿಯ ಎಕ್ಸ್‌ಪರ್ಟ್ಸ್‌ನ್ನು ಇಡಬೇಕೆಂದು ಹೇಳುತ್ತೇನೆ.

ಇನ್ನು ಕಡೆಯದಾಗಿ Welfar Programmes to police officers ಬಗ್ಗೆ ಒಂದು ಸಲಹೆ ಮಾಡುತ್ತೇನೆ. ಪೋಲೀಸರು ಚೆನ್ನಾಗಿ ಕೆಲಸ ಮಾಡಿಬೇಕಾದರೆ, ಅವರನ್ನು ತಾವು ನೋಡಿಕೊಳ್ಳಬೇಕಾಗುತ್ತದೆ.ಅವರಿಗೆ ಎಲ್ಲ ಸವಲತ್ತುಗಳನ್ನು ಕೊಡಬೇಕು ಮತ್ತು ಅವರ ಹೊಟ್ಟೆಗೆ ಸರಿಯಾಗಿ ನೋಡಿಕೊಳ್ಳಬೇಕು.ಸ್ವಾಮಿ,ಈಗ ನೀವು ಅವರಿಗೆ ರೇಷನ್ ಕೊಡುತ್ತಾ ಇದ್ದೀರಿ.ಸಬ್ಸಿಡೈಸ್ ರೇಟ್‌ನಲ್ಲಿ ರೇಷನ್ ಕೊಡಬೇಕು. ಇದನ್ನು ವೆಸ್ಟ್ ಬೆಂಗಾಲ್‌ನಲ್ಲಿ ಜಾರಿಗೆ ತಂದಿದ್ದಾರೆ, ತಮಿಳುನಾಡಿನಲ್ಲಿ ಒಂದೆರಡು ವರ್ಷಗಳಿಂದ ಜಾರಿಗೆ ತಂದಿದ್ದಾರೆ. ಸಬ್ಸಿಡೈಸ್ ರೇಟ್‌ನಲ್ಲಿ ರೇಷನ್ ಕೊಡಲಿ. ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಿ,ವಾಹನ ಸೌಕರ್ಯ ಕೊಡಿ ಪ್ರತಿಯೊಬ್ಬ ಕಾನ್‌ಸ್ಟೇಬಲ್‌ಗೂ ವಾಹನ ಸೌಕರ್ಯ ಕೊಡಬೇಕು. ಬೆಂಗಳೂರಿನಲ್ಲಿರತಕ್ಕ ಪೋಲೀಸರಿಗೆ ಏನೇನು ಸೌಕರ್ಯ ಕೊಟ್ಟಿದ್ದೀರಿ ಅದರ ಮೂರನೇ ಒಂದು ಭಾಗ ಹಳ್ಳಿಯವರಿಗೆ ಕೊಡಿ. ಹಳ್ಳಿಯಲ್ಲಿ ಇವತ್ತಿಗೂ ಕೂಡ ಕಾನ್‌ಸ್ಟೇಬಲ್ಸ್ ನಡೆದುಕೊಂಡು ಹೋಗಬೇಕು, ಆದುದರಿಂದ ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.ಇವತ್ತಿನದಿವಸ ಇವರು ಒಳ್ಳೆಯ ಅಡ್ಮಿನಿಸ್ಟ್ರೇಷನ್ ಕೊಟ್ಟಿದ್ದೇನೆ ಎಂದು ಹೇಳಿಕೊಂಡು ಸಹಬಾಸ್‌ಗಿರಿ ಗಳಿಸುವುದು ಸಹಭಾಸ್‌ಗಿರಿಯಲ್ಲ ರಾಜ್ಯದ ಜನತೆ ಶಹಭಾಸ್‌ಗಿರಿಯನ್ನು ಕೊಡಬೇಕು. ಆರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ಆಶಿಸುತ್ತೇನೆ. ಈ ಕಾನ್‌ಫ್ರಂಟೇಷನ್ ಲೈನ್ ಏನಿದೆ, either with the press or with the Opposition ಹೀಗೆ ಕಂಟಿನ್ಯು ಮಾಡಿದರೆ ಅಪೋಸಿಷನ್ ಪ್ರೆಸ್‌ನವರ ಜೊತೆಯಲ್ಲಿ, it is not only dangerous to you but it is also dangerous to Democracy. Thank you.

ಶ್ರೀ ಕಾಪು ಸಂಜೀವ ಶೆಟ್ಟಿ (ಕುಂದಾಪುರ).—ಮಾನ್ಯ ಸಭಾಧ್ಯಕ್ಷರೆ, ಇವತ್ತು ನಮ್ಮ ಮುಂದಿರುವ ಮಾನ್ಯ ಮುಖ್ಯ ಮಂತ್ರಿಗಳ ಸುಮಾರು ೧೯ ಬೇಡಿಕೆಗಳಲ್ಲಿ ತೋಟಗಾರಿಕೆಯೂ ಕೂಡ ಇದೆ ನಾನು ಈ ಬೇಡಿಕೆಗಳನ್ನೆಲ್ಲಾ ಸ್ವಾಗತಿಸುತ್ತಾ, ಮುಖ್ಯವಾಗಿ ತೋಟಗಾರಿಕೆಯಲ್ಲಿ ನನಗೆ ಸ್ವಲ್ಪ ಅನುಭವವಿರುವುದರಿಂದ ಮತ್ತು ಮಾನ್ಯ ಮಿತ್ರರು ಇತರ ಇಲಾಖೆಗಳ ಮೇಲೆ ಮಾತನಾಡಿದ್ದರಿಂದ ನಾನು ತೋಟಗಾರಿಕೆ ಇಲಾಖೆಗೆ ನನ್ನ ಭಾಷಣವನ್ನು ಸೀಮಿತವಾಗಿಟ್ಟುಕೊಳ್ಳುತ್ತೇನೆ. ಮುಖ್ಯವಾಗಿ ಈ ರಾಜ್ಯದಲ್ಲಿ ಡೈರಕ್ಟೊರೇಟ್ ಇದೆ, ಅದರಲ್ಲಿ ಒಬ್ಬರು ಡೈರಕ್ಟರ್ ಇದ್ದಾರೆ, ೪ ಜಾಯಿಂಟ್ ಡೈರಕ್ಟರ್ಸ್ ಇದ್ದಾರೆ. ಜಿಲ್ಲಾಮಟ್ಟದಲ್ಲಿ ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಆಫೀಸರ್ ಇದ್ದಾರೆ, ತಾಲ್ಲೂಕುಮಟ್ಟದಲ್ಲಿ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ ಇದ್ದಾರೆ, ನೌಕರರು ಇದ್ದಾರೆ. ಈ ವರದಿಯಲ್ಲಿ ನೋಡಿದ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ೧೦೦ ಯೋಜನೆಗಳಿದ್ದು ಅದರಲ್ಲಿ ೪೯ ಪ್ಲಾನ್ಡ್ ಸ್ಕೀಮುಗಳು, ೩೯ ನಾನ್‌ಪ್ಲಾನ್ಡ್ ಸ್ಕೀಮುಗಳು, ೬ ಸ್ಕೀಮುಗಳು, ಮತ್ತು ೬ ಸ್ಪೆಷಲ್ ಸ್ಕೀಮುಗಳು, ಹೀಗೆ ೧೦೦ ಯೋಜನೆಗಳಿವೆ, ಕಳೆದ ಮೂರು, ನಾಲ್ಕು ದಶಕಗಳಿಂದ ತೋಟಗಾರಿಕೆಯಲ್ಲಿ ನನಗೆ ಅನುಭವ ಇರುವುದರಿಂದ, ಹೇಳುವುದಾದರೆ, ಈ ಸ್ಕೀಮುಗಳು ಗೊತ್ತಿಲ್ಲ, ಈ ಸ್ಕೀಮುಗಳ ಬಗ್ಗೆ ಬೇಕಾದಷ್ಟು ಪ್ರಚಾರವನ್ನು ನಿಮ್ಮ ಇಲಾಖೆಯವರು ಕೊಟ್ಟಿಲ್ಲ. ಇದರ ಬಗ್ಗೆ ಒಳ್ಳೆಯ ರೀತಿಯಲ್ಲಿ ಪ್ರಚಾರ ಮಾಡಬೇಕು. ಜನರಿಗೆ ತಿಳಿಯುವ ರೀತಿಯಲ್ಲಿ ಹೇಳಬೇಕು ಎಂದು ನಾನು ಸಲಹೆ ಕೊಡುತ್ತಾ ಇದ್ದೇನೆ. ಮುಖ್ಯವಾಗಿ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಣ್ಣು ಮತ್ತು ಹವೆ ತೋಟಗಾರಿಕೆ ಬೆಳೆಗೆ ಬಹಳಷ್ಟು ಅನುಕೂಲವಾಗಿದೆ. ಆದುದರಿಂದ ಅಲ್ಲಿ ಗೇರು, ಮಾವು, ಅನಾನಸು, ಹೀಗೆ ಎಲ್ಲಾ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಅಭಿವೃದ್ಧಿ ಯೋಜನೆ ವಿಶೇಷವಾಗಿರುವುದರಿಂದ ೪ ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಟ್ಟಿದೆ. ಆದರೆ ಅದರಲ್ಲಿ ಹೆಚ್ಚಿನ ಕೆಲಸವಾಗಿಲ್ಲ. ಏಕೆಂದರೆ ಈ ಯೋಜನೆ ಪ್ರಕಾರ ೫ ವರ್ಷಗಳಿಗೆ, ಸುಮಾರು ಏಳೂವರೆ ಸಾವಿರ

ಹೆಕ್ಟೇರ್ ಹೊಸ ತೋಟ ಹಾಗೂ ಎರಡೂವರೆ ಸಾವಿರ ಹಳೇ ತೋಟ ಅಭಿವೃದ್ಧಿಯಾಗಿ ಒಟ್ಟಿಗೆ ೧೦ ಸಾವಿರ ಹೆಕ್ಟೇರ್ ಅಭಿವೃದ್ಧಿಗೆ ೪ ಕೋಟಿ ರೂಪಾಯಿಗೂ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ. ೫ ವರ್ಷಗಳ ಅವಧಿಯಲ್ಲಿ ಇದು ಆಗಬೇಕು. ದುರದೃಷ್ಟಕರ ಅಂದರೆ, ನಿಮ್ಮ ಅಧಿಕಾರಿಗಳು ಹೆಚ್ಚಿನ ಕೆಲಸ ಮಾಡದೆ ಒಂದು ವರ್ಷದಲ್ಲಿ ೨೭೫ ಹೆಕ್ಟೇರ್ಸ್ ಹೊಸ ತೋಟವಾಗಿದೆಯೆಂದರೆ ಎಷ್ಟರಮಟ್ಟಿಗೆ ಈ ಅಭಿವೃದ್ಧಿ ಯೋಜನೆ ಮಾಡುತ್ತಾರೆ. ಮುಖ್ಯವಾಗಿ ಇದನ್ನು ಕಾರ್ಯರೂಪಕ್ಕೆ ತರಬೇಕಾದ್ದು ಅಧಿಕಾರಿಗಳಿಗೆ ಅಗತ್ಯವುಂಟು. ಮುಖ್ಯವಾಗಿ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ಸ್ ೪೦ ಜನ ಇದ್ದರೂ ಕೂಡ ಇನ್ನೂ ೨೦ ಜನರನ್ನು ನೇಮಕ ಮಾಡುತ್ತಾರೆಂದು ಕೇಳುತ್ತಾ ಇದ್ದೇನೆ. ಈ ರೀತಿ ಮಾಡಿದರೆ ಈ ಯೋಜನೆ ಕಾರ್ಯಗತವಾಗುವುದಿಲ್ಲ. ಆದುದರಿಂದ ಇದಕ್ಕೆ ಬೇಕಾದ ಎಲ್ಲಾ ಅಧಿಕಾರಿಗಳನ್ನೂ ನೇಮಿಸಬೇಕು. ಕಳೆದವರ್ಷ ೨೭೫ ಹೆಕ್ಟೇರ್ಸ್‌ನಲ್ಲಿ ಬೆಳೆ ಬೆಳೆದಿದ್ದಾರೆ. ಈಗ ಜುಲೈ ತಿಂಗಳು ಮುಗಿಯುತ್ತಾ ಬಂತು, ಆಗಸ್ಟ್ ತಿಂಗಳಲ್ಲಿ ಗೇರು ಸಸಿಗಳ ನಾಟಿ ಆಗಬೇಕು. ಬೇಕಾದಷ್ಟು ಗಿಡಗಳು ತಯಾರಾಗಿವೆ. ಆದರೆ ನೆಡುವ ಜನ ರೈತರು ಇಲ್ಲದೆ ಕೆಲಸವಾಗಿಲ್ಲ. ಲಕ್ಷಗಟ್ಟಲೆ ಗಿಡಗಳು ತಯಾರಾಗಿದೆ. ತಮಗೆ ಗೊತ್ತಿರುವ ಹಾಗೆ ಬರುವ ವರ್ಷಕ್ಕೆ ಆ ಗಿಡ ಆಗುವುದಿಲ್ಲ. ಲಕ್ಷಗಟ್ಟಲೆ ಗಿಡಗಳನ್ನು ತಯಾರು ಮಾಡಲಾಗಿದೆ, ಆದರೆ ಅದನ್ನು ನೆಡಲಿಕ್ಕೆ ಬೇಕಾದ ರೈತರು ಇಲ್ಲ. ಸರ್ಕಾರದವರು, ಇದನ್ನು ಒಂದು ಎಕರೆಗೆ ಹಾಕಬೇಕಾದರೆ ೩೬೦ ರೂಪಾಯಿ ಸಬ್ಸಿಡಿ ಕೊಡುತ್ತಾರೆ, ೧೫೦೦ ರೂಪಾಯಿ ಸಾಲ ಕೂಡ ಕೊಡುತ್ತಾರೆ, ಮತ್ತೆ ದೀರ್ಘಾವಧಿ ಸಾಲ ಕಡಿಮೆ ಬಡ್ಡಿ ಸಾಲ ಕೊಡತಕ್ಕಂಥ ಸೌಲಭ್ಯವಿದ್ದರೂ ಕೂಡ ಈ ಯೋಜನೆ ಸಾಕಷ್ಟು ಕಾರ್ಯವಾಗುತ್ತಾ ಇಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಂದರೆ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ ಮತ್ತು ಜಾಯಿಂಟ್ ಡೈರೆಕ್ಟರ್ ಸ್ಥಾನಗಳನ್ನು ತುಂಬಿಸಿ ಆದಷ್ಟು ಈ ಯೋಜನೆ ಕಾರ್ಯಗತವಾಗುವ ರೀತಿಯಲ್ಲಿ ತಾವು ಮಾಡಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಹಿಂದೆ ನಮ್ಮ ಜಿಲ್ಲೆಯಲ್ಲಿ ಬನಾನ ಯೋಜನೆ ಇತ್ತು, ಅದರಲ್ಲಿ ೩೬೦ ಪ್ಲಾಟ್‌ನಲ್ಲಿ ಒಂದು ವರ್ಷದಲ್ಲಿ ನೆಟ್ಟು ಬೆಳೆದು ಅದನ್ನು ರಫ್ತು ಮಾಡುವ ಯೋಜನೆ ಇತ್ತು. ಅದಕ್ಕೆ ಹಲವಾರು ಬ್ಯಾಂಕುಗಳು ಹಣವನ್ನು ಕೊಡಲಿಕ್ಕೆ ಬಂದರು. ಆದರೆ ಇದೇ ರೀತಿಯಲ್ಲಿ ಕೆಲಸ ಮಾಡದೆ, ಬನಾನ ಯೋಜನೆ ಕೂಡ ನಾಲ್ಕೈದು ವರ್ಷಗಳಲ್ಲಿ ಕಾರ್ಯಕ್ರಮಕ್ಕೆ ಬಾರದೆ ನಮ್ಮ ರೈತರಿಗೆ ಸಿಕ್ಕುವ ಸೌಲತ್ತೂ ತಪ್ಪಿಹೋಯಿತು. ಇದನ್ನು ಆ ರೀತಿ ಮಾಡದೆ, ಇದು ವಿಶ್ವ ಬ್ಯಾಂಕಿನ ಯೋಜನೆಯಾದ್ದರಿಂದ ಬಹಳಷ್ಟು ಜಾಗ್ರತೆ ವಹಿಸಬೇಕು. ಇದು ಹೋಗಿಬಿಟ್ಟರೆ ವಿಶ್ವಬ್ಯಾಂಕಿನ ನೆರವು ಸಿಕ್ಕಲಿಕ್ಕಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಯಂಕಟಪ್ಪನವರು ಬಹಳ ಅನುಭವ ಇದ್ದವರು. ಆದುದರಿಂದ ಈ ಕೆಲಸವನ್ನು ಶೀಘ್ರವಾಗಿ ಮಾಡಿ, ಡನುವೆ ಸೀಸನ್ ಕೂಡ ಆಗಸ್ಟ್ ತಿಂಗಳು. ತಮಗೆ ಗೊತ್ತಿರುವ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಸ್ಟ್ ತಿಂಗಳಲ್ಲಿ ನೆಡಬೇಕು, ನಂತರ ನೆಟ್ಟರೆ, ಅಕ್ಟೋಬರ್‌ನಲ್ಲಿ ನೆಟ್ಟರೆ ಗಿಡ ಬರುವುದಿಲ್ಲ. ಈ ಟೆಕ್ನಿಕಲ್ ತಮ್ಮ ಅಧಿಕಾರಿಗಳಿಗೆ ಗೊತ್ತಿದೆ, ಸುಮ್ಮನೆ ತಡೆಮಾಡಿದರೆ ಒಂದು ವರ್ಷ ಹೋಗುತ್ತದೆ, ಕಳೆದ ವರ್ಷ ಏನೂ ಆಗಿಲ್ಲ, ಒಂದು ವರ್ಷ ಹೋದರೆ ಇನ್ನು ೩ ವರ್ಷ ಮಾತ್ರ ಇರುತ್ತದೆ. ಆದರಲ್ಲಿ ೧೦ ಸಾವಿರ ಹೆಕ್ಟೇರಿಗೆ ಹೇಗೆ ಮಾಡುತ್ತಾರೊ ಗೊತ್ತಿಲ್ಲ ಅದರಲ್ಲಿ ತೊಂದರೆ ಬರುತ್ತದ. ಅದುದರಿಂದ ಈ ದಿಶೆಯಲ್ಲಿ ಆಲೋಚನೆ ಮಾಡಿ ಕಾರ್ಯಗತ ಮಾಡಬೇಕು. ಇನ್ನು ರಾಜ್ಯದಲ್ಲಿ ಕೊಕೊ ಅಭಿವೃದ್ಧಿ ಉಂಟು. ಕಳೆದ ೮–೧೦ ವರ್ಷಗಳಿಂದ ಕೊಕೊ ಬೆಳೆಯಾಗಿದೆ. ಆದಕ್ಕೆ ತುಂಬ ಬೆಲೆ ಕೂಡ ಇತ್ತು. ನಾವೆಲ್ಲಾ ಬೆಳೆದವರು. ೪ ವರ್ಷಗಳ ಹಿಂದೆ ಸುಮಾರು ಒಂದು ಕೆ.ಜಿ. ವೆಟಲಾನ್‌ಗೆ ೧೩–೬೦ ಪೈಸೆ ಇತ್ತು ಇವತ್ತು ಆ ಬೆಲೆ ಬಿದ್ದಿದೆ. ಕಳೆದ ವರ್ಷದ ಇದೇ ಸಮಯದಲ್ಲಿ ಕೊಕೊವನ್ನು ತೆಗೆದುಕೊಳ್ಳಲಿಲ್ಲ. ಏಕೆಂದರೆ, ರೈತ ಬೆಳೆದ ಕೊಕೊ ಕೊಳತು ಬಿದ್ದಿತು. ಆ ಸಮಯದಲ್ಲಿ ಕ್ಯಾಂಕೊ ಸಂಸ್ಥೆ ಮುಂದೆ ಬಂದು ತೆಗೆದುಕೊಂಡಿತು, ಈ ಸಂಸ್ಥೆಯವರು ಒಂದು ಕೊಕೊ ಪ್ಯಾಡಿಗೆ ೧–೨೦ ಪೈಸೆ ಕೊಡುತ್ತಾಇದ್ದಾರೆ. ಇದು ಒಂದು ಪ್ಯಾಡಿಗೆ ೩ ರೂಪಾಯಿ ಬೀಳುತ್ತದೆ. ೪ ವರ್ಷಗಳ ಹಿಂದೆ ೧೩–೬೦ ಪೈಸ್ ಇದ್ದದು ಇವತ್ತು ೩ ರೂಪಾಯಿ ರೈತರಿಗೆ ಸಿಕುತ್ತಾ ಇಲ್ಲ. ನಮಗೆ ಒಂದು ಧೈರ್ಯ ಏನೆಂದರೆ, ಸಹಕಾರಿ ಸಂಸ್ಥೆ ಕೆಕೊವನ್ನು ಮುಂದೆ ಅಭಿವೃದ್ಧಿ ಮಾಡಿ, ಇದಕ್ಕೆ ಪ್ರೊಸೆಸಿಂಗ್ ಸೆಂಟರ್ ತಯಾರು ಮಾಡುತ್ತಾ ಇದ್ದಾರೆ. ಈ ದಿಶೆಯಲ್ಲಿ ರಾಜ್ಯ ಸರ್ಕಾರ ಅವರ ನೆರವಿಗೆ ಬರಬೇಕು. ಈ ಸಂಸ್ಥೆಗೆ ೨೫ ಲಕ್ಷ ರೂಪಾಯಿ ಬಂಡವಾಳ ಹಿಂದೆ ಕೊಟ್ಟಿರಬೇಕು, ಏಕೆಂದರೆ, ಅಡಿಕೆ ಧಾರಣೆ ಬಿದ್ದಲ್ಲಿ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರ ಕೂಡಿ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ತಮಗೆ ಗೊತ್ತಿರಬಹುದು. ಕೇರಳ ರಾಜ್ಯದಲ್ಲೂ ಕೂಡ

ಕೊಕೊ ಬೆಳೆ ಚೆನ್ನಾಗಿ ಬಂದು, ಇವತ್ತು ಕೇರಳ ಸರ್ಕಾರ ಮಾರ್ಕೆಟಿಂಗ್ ಫೆಡರೇಷನ್‌ಗೆ ಒಂದೂವರೆ ಕೋಟಿ ರೂಪಾಯಿ ಕೊಟ್ಟಿದೆ. ಒಂದು ಕೋಟಿ ನಷ್ಟ ಮಾಡಿದೆಯಾದರೂ ಬರುತ್ತಾ ಇದೆ. ಆದುದರಿಂದ ಈ ಕಾರ್ಯಕ್ರಮ ತೆಗೆದುಕೊಳ್ಳಬೇಕು. ತಮಗೆ ಗೊತ್ತಿರಬಹುದು. ಈ ಕೊಕೊ ಬಹಳಷ್ಟು ಉತ್ತಮವಾದ ಆಹಾರವಾಗಿದೆ. ಇದರಲ್ಲಿ ಚಾಕಲೇಟ್ ಆಗಲಿ, ಕುಡಿಯುವ ಪಾನೀಯವಾಗಲಿ ಬೇಕಾದಷ್ಟು ರೀತಿಯಲ್ಲಿ ಮಾಡಬಹುದು. ನಮ್ಮ ಇಡೀ ದೇಶದಲ್ಲಿ ಸುಮಾರು ಒಂದೂವರೆ ಸಾವಿರ ಟನ್ ನಷ್ಟು ಮಾತ್ರ ಪ್ರಚಾರವುಂಟು. ನಮ್ಮಲ್ಲಿ ೬೦೦ ಟನ್ ಕೊಕೊ ಇದ್ದದ್ದು ಇವತ್ತು ನಾಲ್ಕೂವರೆ ಸಾವಿರ ಟನ್‌ಗೆ ಹೋಗಿದೆ. ಆದುದರಿಂದ ಇದರ ಕಡೆ ಹೆಚ್ಚಿನ ರೀತಿಯಲ್ಲಿ ನಿಗಾ ಕೊಟ್ಟು ಬೆಳೆದವರಿಗೆ ಧಾರಣೆಯನ್ನು ಹೆಚ್ಚಿನ ರೀತಿಯಲ್ಲಿ ಬರುವ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ.

ಇನ್ನು ಮಾವಿನ ಬೆಳೆ ವಿಷಯದಲ್ಲಿ ಹೇಳುವುದಾದರೆ, ನಮ್ಮ ಜಿಲ್ಲೆ ಬಹಳಷ್ಟು ಮಾವನ್ನು ಬೆಳೆಯುವ ಜಿಲ್ಲೆ. ನಮ್ಮಲ್ಲಿ ಮಳೆಗಾಲದಲ್ಲಿ ಹೆಚ್ಚಾಗಿ ಮಾವಿನ ಹಣ್ಣು ಬರುತ್ತದೆ. ಆಗ ಸಾವಿರಾರು ಲೋಡುಗಟ್ಟಲೆ ಮಾವಿನ ಹಣ್ಣು ಕೊಳೆತು ಹೋಗುತ್ತದೆ. ಇವತ್ತು ತೋಟಗಾರಿಕೆ ಇಲಾಖೆಯವರು ಹಲವಾರು ಮಾವಿನ ಗಿಡಗಳನ್ನು ರೈತರಿಗೆ ಕೊಡುತ್ತಾ ಇದ್ದಾರೆ. ಗಿಡ ಕೊಡುವಾಗ, ಯಾವರೀತಿ ನೆಡಬೇಕು, ಜನರಿಗೆ ಅದರಿಂದ ಏನು ಪ್ರಯೋಜನವಾಗುತ್ತದೆ ಎಂದು ಹೇಳುವುದಿಲ್ಲ. ತಮ್ಮ ಇಲಾಖೆಯವರು ಮಾವಿನ ಗಿಡಗಳನ್ನು ಕೊಡುತ್ತಾ ಇದ್ದಾರೆ. ಸಣ್ಣ ರೈತರಿಗೆ, ಚಿಕ್ಕ ಚಿಕ್ಕ ರೈತರಿಗೆ ಎರಡೆರಡು ಗಿಡಗಳನ್ನು ಕೊಡುತ್ತಾ ಇದ್ದಾರೆ. ನಾವು ಜಾಗ್ರತೆ ಮಾಡಬೇಕಾದ್ದು ಏನೆಂದರೆ, ಇದು ಕ್ಯಾನಿಂಗ್ ಸಂಸ್ಥೆಗಳಿಗೆ ಬಹಳಷ್ಟು ಬೇಕಾಗಿದೆ. ಇದು ನಮ್ಮ ಜಿಲ್ಲೆಯಲ್ಲೂ ಉಂಟು. ಆಪೂಸ್ ಅಥವಾ ಬಾದಾಮಿ ಕ್ಯಾನಿಂಗ್ ಫ್ಯಾಕ್ಟರಿಗೆ ಬೇಕಾಗಿದೆ, ಅದಕ್ಕೆ ವಿದೇಶಿವಿನಿಮಯ ಕೂಡ ಉಂಟು ಅಲ್ಲದೆ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಬೇಕಾದಷ್ಟು ಖರ್ಚಾಗುತ್ತದೆ. ಹೀಗಿರುವಾಗ ಅದಕ್ಕೆ ಮಾವಿನ ಹಣ್ಣು ಸಿಕ್ಕುವುದಿಲ್ಲ ಆದುದರಿಂದ ಆಪೂಸ್ ಅಥವಾ ಬಾದಾಮಿ ತಳಿಯನ್ನು ಅಭಿವೃದ್ಧಿ ಮಾಡಬೇಕು. ಇದು ಸಾಧಾರಣವಾಗಿ ೧೫–೨೦ ವರ್ಷದ ಗಿಡದಲ್ಲಿ ೫೦೦–೬೦೦ ರೂಪಾಯಿ ಬೆಳೆ ಬರುತ್ತದೆ. ಈ ಗಿಡಗಳನ್ನು ರೈತರಿಗೆ ಹೆಚ್ಚಾಗಿ ಕೊಡಬೇಕು. ಈ ಅಪೂಸ್ ಅಥವಾ ಬಾದಾಮಿ ಗಿಡಗಳು ಅಭಿವೃದ್ಧಿಯಾದರೆ ನಮ್ಮಲ್ಲಿರತಕ್ಕ ಕ್ಯಾನಿಂಗ್ ಫ್ಯಾಕ್ಟರಿಗಳು ಬೇಕಾದಷ್ಟು ಹಣ ಕೊಡುತ್ತವೆ, ಇದು ನಮ್ಮ ಜಿಲ್ಲೆಯಲ್ಲಿ ಇಲ್ಲ, ಈಗ ಹೊರಗಡೆಯಿಂದ ತರುತ್ತಾ ಇದ್ದಾರೆ.

(ಶ್ರೀ ಎಂ. ಸಿ. ಬಸಪ್ಪನವರು ಅಧ್ಯಕ್ಷರ ಪೀಠದಲ್ಲಿದ್ದರು)

ಪೈನಾಪಲ್ ಹಣ್ಣನ್ನು ಹೆಚ್ಚಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಈ ಹಣ್ಣು ಕೂಡ ಮಳೆಗಾಲದಲ್ಲಿ ಬರುವುದರಿಂದ ಆ ಸಂದರ್ಭದಲ್ಲಿ ಗಿರಾಕಿಗಳು ಇರುವುದಿಲ್ಲ. ೧೫–೨೦ ಪೈಸೆಗೆ ಹಣ್ಣು ಮಾರಾಟ ಮಾಡುತ್ತಾರೆ. ಶೇಖರಣೆ ಮಾಡುವುದಕ್ಕೆ ರೈತರಿಗೆ ಅನುಕೂಲವಿಲ್ಲದೆ ಅಗ್ಗದ ದರದಲ್ಲಿ ಮಾರಾಟ ಮಾಡುತ್ತಾರೆ. ಹಣ್ಣುಗಳನ್ನು ರೈತ ಬೆಳೆದು ಸರಿಯಾದ ಬೆಲೆ ಸಿಗದಿದ್ದಾಗ ಸರ್ಕಾರ ಅವನ ಸಹಾಯಕ್ಕೆ ಬರಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಗೇರು ತೋಟ, ಮಾವಿನ ತೋಟ, ತೆಂಗಿನ ತೋಟ, ಇವುಗಳ ಮಧ್ಯದಲ್ಲಿ ಫೈನಾಪಲ್‌ನ್ನು ಬೆಳೆದರೆ ರೈತರಿಗೂ ಅನುಕೂಲವಾಗುತ್ತದೆ. ಇಂಟರ್‌ಗಾರ್ಡನ್ ಮಾಡುವುದರಿಂದ ತೋಟಗಳ ಅಭಿವೃದ್ಧಿ ಕೂಡ ಆಗುತ್ತದೆ. ಇದರ ಕಡೆ ಸರ್ಕಾರದವರು ಹೆಚ್ಚಿನ ಗಮನಕೊಡಬೇಕೆಂದು ಹೇಳುತ್ತೇನೆ. ಕೇಂದ್ರ ಸರ್ಕಾರದ ಇಂಡೋ ಬಲ್ಗೇರಿಯನ್ ಪ್ರಾಜೆಕ್ಟ್ ಮಾಡುವುದರಿಂದ ತೋಟಗಾರಿಕೆಯನ್ನು ಬೆಳಸಲಿಕ್ಕೂ ಮತ್ತು ತರಕಾರಿಗಳನ್ನು ಬೆಳಸಲಿಕ್ಕೂ ಅನುಕೂಲವಾಗುತ್ತದೆ. ಈ ಯೋಜನೆಯನ್ನು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗೆ ಮಾತ್ರ ಅಳವಡಿಸಿಕೊಂಡಿದ್ದೀರಿ ? ನಮ್ಮ ಜಿಲ್ಲೆಗೂ ಕೂಡ ಈ ಒಂದು ಯೋಜನೆಯನ್ನು ವಿಸ್ತರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಬೆಳೆದಂತ ಹಣ್ಣುಗಳನ್ನು ದಾಸ್ತಾನು ಮಾಡುವುದಕ್ಕೆ ಮತ್ತು ಒಳ್ಳೆ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಕ್ಯಾನಿಂಗ್ ಫ್ಯಾಕ್ಟರಿ ಕೂಡ ಮಾಡಬೇಕು. ಗೇರು ಬೀಜ ಅಭಿವೃದ್ಧಿ ಯೋಜನೆ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಂಡು ಆದಷ್ಟು ಬೇಗ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕುಂದಾಪುರ ತಾಲ್ಲೂಕು ಕೈಗಾರಿಕೆಗಳ ಕೇಂದ್ರವಾಗಿದ್ದರೂ ಅಲ್ಲಿ ಒಂದು ಫೈರ್ ಸ್ಟೇಷನ್ ಇಲ್ಲ. ಕಳೆದ ಎರಡು ಮೂರು ವರ್ಷಗಳಿಂದ ನಮಗೆ ಫೈರ್ ಸ್ಟೇಷನ್

ಗಳನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಲೇ ಬಂದಿದ್ದೇನೆ. ಈ ಸಾರಿಯಾದರೂ ನಮ್ಮ ಕುಂದಾಪುರ ತಾಲ್ಲೂಕಿಗೆ ಒಂದು ಫೈರ್ ಸ್ಟೇಷನ್ ಮಂಜೂರು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ತಮಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ಸಾಮಾನ್ಯ ಆಡಳಿತ ಒಳಾಡಳಿತ, ಬಂದೀಕಾನೆ ಹಾಗೂ ಅಬ್ಕಾರಿಯಂತ ಪ್ರಮುಖ ಇಲಾಖೆಗಳ ಬಗ್ಗೆ ಈ ಸಭೆ ಒಂದು ವರ್ಷದ ವೆಚ್ಚ ತನ್ನ ಅನುಮೋದನೆಯನ್ನು ಕೊಡವುದಕ್ಕೆ ಮುಂಚೆ, ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ ಅವಕಾಶ ಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮಗೆ ಅಭಾರಿಯಾಗಿದ್ದೇನೆ. ಸ್ವಾಮಿ, ಈ ಸರ್ಕಾರ ಅಧಿಕಾರಕ್ಕೆ ಬಂದು ೧೮ ತಿಂಗಳಾಗಿದೆ. ೧೯೮೦ರ ಲೋಕಸಭೆ ಚುನಾವಣೆಯಾದ ಮೇಲೆ, ಲೋಕಸಭೆ ಚುನಾವಣೆ ಪಲಿತಾಂಶ ಹೊರಬಿದ್ದ ಕೇವಲ ಅಲ್ಪ ಕಾಲದಲ್ಲಿ ವಿರೋಧ ಪಕ್ಷದ ಮುಖಂಡರಾಗಿದ್ದ ಶ್ರೀಮಾನ್ ಗುಂಡೂರಾಯರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಸರ್ಕಾರದ ಸೂತ್ರವನ್ನು ವಹಿಸಿಕೊಂಡರು. ಮಾನ್ಯ ರಾಜ್ಯಪಾಲರು ಕೂಡ ತಮ್ಮ ಜನರಿಗೆ ೧೯೮೦ರ ಜಂಟೀ ಅಧಿವೇಶನದಲ್ಲಿ ಆ ಮಾತನ್ನು ವ್ಯಕ್ತಪಡಿಸಿದ್ದಾರೆ. ೧೯೮೧ರ ಜನವರಿ ೨೮ ರಂದು ಜಂಟೀ ಅಧಿವೇಶನ ದಲ್ಲಿ ಭಾಷಣ ಮಾಡತಕ್ಕ ಕಾಲದಲ್ಲಿ ರಾಜ್ಯಪಾಲರು ಒಂದು ಮಾತನ್ನು ಹೇಳಿದ್ದಾರೆ.

> ನನ್ನ ಸರ್ಕಾರವು, ಸ್ವಚ್ಛ ಹಾಗೂ ದಕ್ಷ ಆಡಳಿತವನ್ನು ಒದಗಿಸುವ ಕಾರ್ಯಕ್ಕೆ ಆದ್ಯತೆ ನೀಡುತ್ತದೆ. ಈ ದಿಸೆಯಲ್ಲಿ ಕೈಕೊಂಡ ಕ್ರಮ ಗಳು ಸಾಕಷ್ಟು ಫಲಕಾರಿಯಾಗಿವೆ ಎಂದು ತಿಳಿಸಲು ನನಗೆ ಸಂತೋಷ ವಾಗುತ್ತದೆ. ಅಧಿಕಾರಿಗಳ ವರ್ಗಾವಣೆ ಸ್ಥಳ ನೇಮಕಾತಿ ಮತ್ತು ಬಡ್ತಿಗಳ ವಿಚಾರದಲ್ಲಿಯೂ, ನಿವೃತ್ತ ಅಧಿಕಾರಿಗಳಿಗೆ ಸೇವಾ ವಿಸ್ತರಣೆ ನೀಡುವ ಅಥವಾ ಪುನರ್ ನೇಮಕ ಮಾಡುವ ವಿಚಾರದಲ್ಲಿಯೂ ಯಾವುದೇ ಒತ್ತಡಕ್ಕೆ ಮಣಿಯದಿರುವ ನನ್ನ ಸರ್ಕಾರದ ನೀತಿ ಅಚಲ ವಾಗಿದೆಯೆಂದೂ...... ...

ಹೀಗೆ ಹೇಳಿಕೊಂಡು ಹೋಗಿದ್ದಾರೆ. ಒಂದು ವರ್ಷದ ನಿಮ್ಮ ಆಡಳಿತದ ಸೇವೆಯನ್ನು ಜನತೆ ಊಟ ಮಾಡಿದಮೇಲೆ, ರಾಜ್ಯಪಾಲರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆಂದು ನಾನು ಭಾವಿಸಿಕೊಳ್ಳು ತ್ತೇನೆ. ಸ್ವಾಮಿ, ಸಾಮಾನ್ಯ ಆಡಳಿತ ರಾಜ್ಯದ ಅಭ್ಯುದಯಕ್ಕೆ, ಜನತೆಯ ಕಲ್ಯಾಣಕ್ಕೆ ಚಾಲನೆ ಕೊಡತಕ್ಕ, ದಾರಿ. ಈವತ್ತು ಇಡೀ ರಾಜ್ಯದ ಮೂರುವರೆ ಕೋಟಿ ಜನತೆಯ ಸಮಗ್ರ ಅಭ್ಯುದಯಕ್ಕೆ ನಾಂದಿಯಾಗತಕ್ಕಂಥ ಒಂದು ಇಲಾಖೆ ಎಂಬುದನ್ನು ಮೊದಲನೆಯದಾಗಿ ತಿಳಿದುಕೊಳ್ಳಬೇಕಾಗಿದೆ. ಹಾಗೆ ಒಳಾಡಳಿತ ಇಲಾಖೆ, ರಾಜ್ಯದ ಮೂರುವರೆ ಕೋಟಿ ಜನತೆಯ ಆಸ್ತಿ, ಅವರ ಮಾನ ಮತ್ತು ಪ್ರಾಣದ ರಕ್ಷಣೆ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗಿದೆ. ಇನ್ನು ಅಬ್ಕಾರಿ ಮತ್ತು ಜೈಲುಗಳ ಬಗ್ಗೆ ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ ೧೯೮೦ರ ಲೋಕಸಭಾ ಚುನಾವಣೆಯ ಫಲಿ ತಾಂಶದಿಂದ ತಾವು ಅಧಿಕಾರಕ್ಕೆ ಬಂದಿರಿ. ನಮ್ಮ ನಾಯಕರು ಮಾತನಾಡಿದರು ? ತಾವು ಚುನಾವಣೆ ಫಲಿತಾಂಶದಿಂದ ಸಂಖ್ಯಾಬಲ ಹೆಚ್ಚಾಯಿತು ? ಮುಖ್ಯಮಂತ್ರಿಗಳಿಗೆ ನೈತಿಕ ಶಕ್ತಿಯ ಆಧಾರದಮೇಲೆ ಮುಂದುವರಿಯಬಾರದು ? ತಾವು ಮಧ್ಯಂತರ ಚುನಾವಣೆಗೆ ಹೋಗಬೇಕೆನ್ನುವ ಮಾತನ್ನು ಅವರು ಹೇಳಿದ್ದಾರೆ. ಚುನಾವಣೆಗೆ ಹೋಗುವುದು ಬಿಡುವುದು ನಿಮಗೆ ಸೇರಿದಂತೆ ವಿಚಾರ. ನಮ್ಮ ಪಕ್ಷದ ವತಿಯಿಂದ ಈ ಮಾತನ್ನು ಹೇಳಿದ್ದಾರೆ ? ಇದರ ಬಗ್ಗೆ ವ್ಯಾಖ್ಯಾನ ಮಾಡುವುದಿಲ್ಲ. ಇವತ್ತು ಪಕ್ಷಾಂತರ ಪಿಡುಗು ನಿಮ್ಮ ಕಾಲದಲ್ಲಿ ಬಂದಂತಾದ್ದು ಅಲ್ಲ. ೧೯೬೯ರಲ್ಲಿಯೇ ಈ ಸಭೆಗೆ ಬಂತು. ಆವೊತ್ತು ಪಂಡಿತ್ ಜವಹರಲಾಲ್ ನೆಹರುರವರ ಮುಖಂಡತ್ವದಿಂದ ಮನನೊಂದಂತ ಸೋಷಿಲಿಸ್ಟ್ ಒಂದು ಭಾಗ ಸಿಡಿದುಹೋಯಿತು. ಈ ಶಕೆ ಅಲ್ಲಿಂದ ಪ್ರಾರಂಭವಾಯಿತು. ಇದರ ಬಗ್ಗೆ ಸಾರ್ವಜನಿಕ ರಂಗದಲ್ಲೂ ಕೂಡ ಮಹತ್ವ ಇಲ್ಲ. ಜನಾಭಿಪ್ರಾಯ ಕೂಡ ಇದರ ಬಗ್ಗೆ ನಿಷ್ಕ್ರಿಯವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಪಕ್ಷಾಂತರಿಗಳನ್ನು ಕಟ್ಟಿಕೊಂಡು ಮುಂದುವರಿಯುವ ಬಗ್ಗೆ ಒಂದು ಮಾತನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೫.೦೦ ಪಿ.ಎಂ.

ನೈತಿಕ ಮೌಲ್ಯಗಳ ಬಗ್ಗೆ ರಾಜಕಾರಣದಲ್ಲಿ ಹಾಗೂ ರಾಷ್ಟ್ರದ ರಾಜಕೀಯ ಬೆಳವಣಿಗೆಯಲ್ಲಿ ಬೆಳೆದಿರತಕ್ಕ ಇತ್ತೀಚಿನ ರಾಜಕಾರಣಗಳು ಏನಿವೆ ಅವುಗಳ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುವುದಾದರೆ, ಎಲ್ಲ ರಂಗಗಳಲ್ಲಿಯೂ ಮೌಲ್ಯಗಳ ಅಭಾವ ಇವತ್ತು ಎದ್ದು ಕಾಣುತ್ತಿದೆ ಎಂದು ಸೂಚ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಈ ಸಾಮಾನ್ಯ ಆಡಳಿತ ರಾಜ್ಯದ ಜನತೆಯ ಅಭ್ಯುದಯಕ್ಕೆ ಮತ್ತು ಕಲ್ಯಾಣಕ್ಕೆ ನಾಂದಿಯನ್ನು ಹಾಡಿದೆ ಎಂದು ನಾನು ಮೊದಲೇ ಹೇಳಿದೆ. ತಾವು ಅಧಿಕಾರವನ್ನು ವಹಿಸಿಕೊಂಡ ಮೇಲೆ ಬಹುಶಃ ಈ ದೇಶದಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಇಲ್ಲದಂತೆ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕ ಕಾಲದಲ್ಲಿ ಹಾಗೂ ಕಟ್ಟುನಿಟ್ಟಾಗಿ ಎಲ್ಲ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಯಾವುದೇ ಶಕ್ತಿ ಮಧ್ಯೆ ಪ್ರವೇಶಿಸುವುದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲವೆಂದೂ ಹೊರಗಿನ ಪಟ್ಟಭದ್ರ ಹಿತಾ ಶಕ್ತಿಗಳನ್ನು ಬಗ್ಗುಬಡಿಯುವ ಪ್ರಯತ್ನ ಮಾಡುತ್ತೇವೆಂದೂ ಮತ್ತು ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ಕೊಡುವುದಿಲ್ಲವೆಂದು ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ದಿಸೆಯಲ್ಲಿ ಕೆಲವು ಪ್ರಮುಖವಾದ ಹೆಜ್ಜೆಗಳನ್ನು ಇಟ್ಟಿದ್ದೀರಿ. ನಾನು ಮೊದಲು ಅವುಗಳನ್ನು ಗುರುತಿಸಿ ಆಮೇಲೆ ಎಲ್ಲಿ ಸರ್ಕಾರ ತನ್ನ ಕರ್ತವ್ಯ ಲೋಪ ಮಾಡಿದೆ ಎಂಬುದರ ಬಗ್ಗೆ ಕೂಡ ಸರ್ಕಾರಕ್ಕೆ ಎಚ್ಚರಿಕೆ ಕೊಡಬಯಸುತ್ತೇನೆ. ಈ ಎಲ್ಲ ವಿಚಾರಗಳ ಬಗ್ಗೆ ಮಾನ್ಯ ಬೊಮ್ಮಾಯಿಯವರು ಶ್ರೀಮಾನ್ ರಾಜಶೇಖರನ್‌ರವರು ಹಾಗೂ ಮತ್ತಿತರ ಅನೇಕ ಜನ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯ ಕೊನೆಯ ಪ್ರಜೆ ಏನಿದ್ದಾನೆ ಅವನಿಗೆ ಈ ಆಡಳಿತ ಯಂತ್ರದ ಚಲನೆಯಿಂದ ದೊರಕಬೇಕಾಗಿರತಕ್ಕ ಎಲ್ಲ ಸಾಮಾಜಿಕ ನ್ಯಾಯಗಳನ್ನು ದೊರಕಿಸಲು ವಿಳಂಬವಿಲ್ಲದ ರೀತಿ ನಾವು ಯಂತ್ರದ ಒಂದು ಚಲನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಹೇಳಿದ್ದಾರೆ. ಅದರ ಅಂಗವಾಗಿ ಕಡತಗಳ ವಿಲೇವಾರಿ ಮಾಡಿದ್ದೀರಿ. ಬಹುಶಃ ಅದನ್ನು ಹೊಸ ಒಂದು ಆಂದೋಳನ ಅನ್ನುವುದಕ್ಕಾಗುವುದಿಲ್ಲ. ಏಕೆಂದರೆ ೧೯೭೫ನೇ ಜೂನ್‌ನಲ್ಲಿ ಈ ರಾಷ್ಟ್ರಕ್ಕೆ ಆಂತರಿಕ ತುರ್ತು ಪರಿಸ್ಥಿತಿ ಇದ್ದಂತಹ ಕಾಲದಲ್ಲಿ ನಿಮ್ಮ ಸ್ಥಾನದಲ್ಲಿ ಕುಳಿತಂತ ಆಗಿನ ಮುಖ್ಯಮಂತ್ರಿಗಳು ಕಡತಗಳ ವಿಲೇವಾರಿ ಮಾಡತಕ್ಕ ಒಂದು ಆಂದೋಳನವನ್ನು ಮಾಡುತ್ತೇವೆಂದು ಹೇಳಿದರು. ಇದರ ಫಲಿತಾಂಶ ಏನು ಎಂಬುದನ್ನು ಜನತೆಗೆ ತೋರಿಸಿಕೊಡುತ್ತೇವೆಂದು ಅಂದಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮಾನ್ ಜಿ.ವಿ.ಕೆ. ರಾವ್‌ರವರು ಪತ್ರಿಕಾ ಸಂದರ್ಶನದಲ್ಲಿ ಹೇಳಿದರು. ಆದರೆ ಅದರ ಫಲಿತಾಂಶ ಮಾತ್ರ ಹೊರಬೀಳಲಿಲ್ಲ. ಈಗ ಮತ್ತೊಂದು ಸಾರಿ ಸಮರ ಸಾರಿದ್ದೀರಿ. ಈ ದೇಶದ ಆಡಳಿತದಲ್ಲಿ ಯಾವುದೇ ರೀತಿಯ ವಿಳಂಬಕ್ಕೆ ಆಸ್ಪದ ಕೊಡದೆ, ಕೊನೆಯ ಹಂತದಲ್ಲಿರುವ,ನಿಲುವನ್ನು ಕಚ್ಚಿ ನಿಂತಿರುವ ಜೀವಿಗೆ ಎಲ್ಲ ರೀತಿಯ ಲಾಭ ದೊರಕಿಸಿ ಕೊಡುವುದಕ್ಕೆಕಡತ ವಿಲೇವಾರಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರ ಜೊತೆಗೆ ತಾವು ವರ್ಗಾವರ್ಗಿ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಕೈಕೊಂಡಿದ್ದೀರಿ. ತಮ್ಮ ಇನ್ನೊಂದು ಸಾಧನೆ ಏನೆಂದರೆ, ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ಹಸ್ತಕ್ಷೇಪ ಇರಬಾರದೆಂದು ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಜೊತೆಗೆ ರೈತರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ಮಾಡಿದ್ದೀರಿ ಹೀಗೆ ನಾಲ್ಕಾರು ಪ್ರಯತ್ನಗಳನ್ನು ನಡೆಸಿದ್ದೀರಿ. ಆದರೆ ಈ ಕೆಲಸಗಳಿಂದ ಯಾವ ಗುರಿಯನ್ನು ಮುಟ್ಟಲಿಕ್ಕೆ ಹೊರಟಿದ್ದೀರೋ ಅದನ್ನು ಮುಟ್ಟಲಿಕ್ಕೆ ಸಾಧ್ಯವಾಗಿದೆಯೋ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಈ ಹಿನ್ನೆಲೆಯಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ತಮ್ಮ ದಿನನಿತ್ಯದ ಗೋಷ್ಠಿ ಅಂದರೆ ಸಮಾಜದಲ್ಲಿ ಯಾರು ಕಡುಬಡವರು, ಹಿಂದುಳಿದ ವರ್ಗದವರು, ಅಲ್ಪ ಸಂಖ್ಯಾತರು, ನಿಮ್ನ ವರ್ಗದವರು ಹಾಗೂ ಬಡತನದ ರೇಖೆಯಿಂದ ಒಳಗಡೆ ಇರುವ ಜನರೇನಿದ್ದಾರೆ ಅವರ ಅಭ್ಯುದಯವೇ ನಮ್ಮ ಗುರಿ ಎಂಬ ಮಾತನ್ನು ಪದೇ ಪದೇ ಮಾನ್ಯ ರಾಜ್ಯಪಾಲರ ಮತ್ತು ಆರ್ಥಿಕ ಸಚಿವರ ಭಾಷಣದಲ್ಲಿ ಹೇಳಲಾಗಿದೆ. ಆದರೆ ತಾವು ಈ ದಿಶೆಯಲ್ಲಿ ಎಷ್ಟು ದೂರ ಮುಂದೆ ಹೋಗಿದ್ದೀರಿ ಎಂಬ ಬಗ್ಗೆ ವಿಮರ್ಶೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದನ್ನು ಒಪ್ಪುತ್ತೇನೆ ಅದೇನೆಂದರೆ, ಮಂತ್ರಿಮಂಡಲ ರಚನೆಯಲ್ಲಿ ತಾವು ಎಲ್ಲ ವರ್ಗಕ್ಕೆ ಪ್ರಾತಿನಿಧ್ಯ ನೀಡಿರುವುದು. ಆದರೆ ಅದು ಅರ್ಹತೆ ಆಧಾರದ ಮೇಲೆ ಎಂದು ಹೇಳುವುದಕ್ಕೆ ಸಿದ್ಧವಿಲ್ಲ, ಏಕೆಂದರೆ ಅಡ್ಮಿನಿಸ್ಟ್ರೇಷನ್ ರೀಫಾರಮ್ಸ್ ಕಮೀಷನ್‌ನವರು ಕೊಟ್ಟಿರುವ ಗೈಡ್‌ಲೈನ್ಸ್ ಏನಿದೆ ಅದರ ಪ್ರಕಾರ, ಅದರ ಹಿನ್ನೆಲೆಯಲ್ಲಿ ಸಚಿವ ಸಂಪುಟ ರಚನೆಯಾಗಿದೆ ಎಂದು ಹೇಳುವುದಕ್ಕೆ ಸಿದ್ಧವಿಲ್ಲ. ಆದರೆ ಸಾಮಾಜಿಕ ನ್ಯಾಯವನ್ನು ದೊರಕಿಸತಕ್ಕ ಒಂದು ಹಿನ್ನಲೆಯಿಂದ ಮಂತ್ರಿಮಂಡಲದಲ್ಲಿ ಪ್ರಯತ ನಡೆದಿದೆ. ಹಿಂದೆ ಇದ್ದಂತಹ ಮಂತ್ರಿ ಮಂಡಲದಲ್ಲಿ ಏನೇನು ವಿವಿಧ ವರ್ಗ

ಗಳಿಗೆ ಪ್ರಾತಿನಿಧ್ಯ ಕೊಡಬೇಕಾಗಿತ್ತೋ ಅದಕ್ಕಿಂತ ಒಂದು ಪಟ್ಟು ಮುಂದೆ ಹೋಗಿ ಪ್ರಾತಿನಿಧ್ಯವನ್ನು ಕೊಟ್ಟಿದ್ದೀರಿ ಎಂದು ಹೇಳುತ್ತೇನೆ. ಈ ಮಾತನ್ನು ಹೇಳುವುದಕ್ಕೆ ಪೂರ್ವಭಾವಿಯಾಗಿ ಒಂದು ವಿನಂತಿ ಏನೆಂದರೆ ಅಧಿಕಾರಿಗಳು ಇವತ್ತು ಈ ಸಭೆಗೆ ಜವಾಬ್ದಾರರಲ್ಲ. ಆದ್ದರಿಂದ, ನಾನು ಅವರ ಬಗ್ಗೆ ಯಾವುದೇ ಮಾತನಾಡುವುದಕ್ಕೆ ಹೋಗುವುದಿಲ್ಲ, ತಾವು ಮತ್ತು ತಮ್ಮ ಸಚಿವ ಸಂಪುಟ ಈ ಸಭೆಗೆ ನೇರವಾಗಿ ಜವಾಬ್ದಾರರು. ಸಾಮಾನ್ಯ ಆಡಳಿತ ಇಲಾಖೆಯು ಅಧಿಕಾರ ನಿರ್ವಹಣೆ ಮಾಡತಕ್ಕ ಕಾಲದಲ್ಲಿ ಅಧಿಕಾರಿಗಳ ಹಂತದಲ್ಲಿ ನಡೆಯುತಕ್ಕ ಯಾವುದೇ ಒಂದು ಲೋಪದೋಷಗಳಾದರೂ ಅದಕ್ಕೆ ಅಧಿಕಾರಿಗಳು ಜವಾಬ್ದಾರರಾಗಲಿಕ್ಕೆ ಸಾಧ್ಯವಿಲ್ಲ. ನಾಯಕರಾಗಿರತಕ್ಕವರಿಗೆ ನಾನಾ ಇಲಾಖೆಯ ಬೇಡಿಕೆಗಳು ಈ ಸಭೆಯಲ್ಲಿ ಅಂಗೀಕಾರವಾಗತಕ್ಕ ಕಾಲದಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ, ನಿನ್ನೆ ಅವರು ತಮ್ಮ ಭಾಷಣದಲ್ಲಿ ಬೇಡಿಕೆಗಳಿಗೆ ಹೊರತಾದ ವಿಷಯಗಳನ್ನು ಪ್ರಸ್ತಾಪಿಸಿದರು. ನಾನು ಇವತ್ತು ಈ ಇಲಾಖೆಯ ಬೇಡಿಕೆಗೆ ಹೊರತಾದ ಯಾವುದೇ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಹೋಗ ವುದಿಲ್ಲ. ಸಾಮಾನ್ಯ ಆಡಳಿತ ಇಲಾಖೆಯಲ್ಲಿ ಬಹುಮುಖವಾದ ಸಮಸ್ಯೆಗಳು ಬರುತ್ತವೆ,ಈ ಸಂದರ್ಭದಲ್ಲಿ ನನ್ನ ನೇರ ಪ್ರಶ್ನೆ ಏನೆಂದರೆ, ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಹಾಗೆ ನೇಮಕಾತಿ, ಬಡ್ತಿ, ವರ್ಗಾ ವರ್ಗಿ– ಇವು ಬಹು ಪ್ರಾಮುಖ್ಯವಾಗಿ ಬರತಕ್ಕ ಸಮಸ್ಯೆಗಳು, ಇವುಗಳನ್ನು ನೀವು ಬಗೆಹರಿಸತಕ್ಕ ಕಾಲದಲ್ಲಿ ಯಾವುದೇ ಒಂದು ರೀತಿಯ ಅತೃಪ್ತಿಗೆ ಎಡೆಮಾಡಿಕೊಟ್ಟರೆ ಇಡೀ ಆಡಳಿತ ಯಂತ್ರದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಯು ಕುಂಠಿತವಾಗುತ್ತದೆ. ಇವತ್ತು ನೀವು ರಾಜ್ಯಪಾಲರ ಭಾಷಣದಲ್ಲಿ ಸ್ವಚ್ಛ ಮತ್ತು ದಕ್ಷ ಆಡಳಿತ ಎಂದು ಏನು ಹೇಳಿದ್ದೀರಿ ಅದು ಇವತ್ತಿನ ಆಡಳಿತ ಯಂತ್ರದಲ್ಲಿ ಕುಂಠಿತವಾಗಿದೆ, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ತಾವು ಅಧಿಕಾರಕ್ಕೆ ಬಂದ ೧೮ ತಿಂಗಳ ಅವಧಿಯಲ್ಲಿ ಮಂತ್ರಿ ಮಂಡಲವನ್ನು ರಚನೆ ಮಾಡತಕ್ಕ ಕಾಲದಲ್ಲಿ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ಸಲುವಾಗಿ ಸಚಿವ ಸಂಪುಟದಲ್ಲಿ ಎಲ್ಲ ಪ್ರತಿಬಿಂಬವನ್ನು ರೂಪಿಸುವುದರಲ್ಲಿ (ಎಲ್ಲ ವರ್ಗಗಳಿಗೆ ಆದ್ಯತೆ ನೀಡಿ) ಪ್ರಯತ್ನ ಮಾಡಿ ಯಶಸ್ವಿಯಾಗಿದ್ದೀರಿ. ಆದರೆ ಆಡಳಿತ ಯಂತ್ರದಲ್ಲಿ ಆ ದಿಸೆಯಲ್ಲಿ ಯಶಸ್ವಿಯಾಗಿಲ್ಲವೆಂದು ಹೇಳಬೇಕಾಗುತ್ತದೆ.

ತಾವು ಅದನ್ನು ತಿದ್ದಿಕೊಳ್ಳುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ನೇಮಕಾತಿ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ನೇಮಕಾತಿಗಳ ಬಗ್ಗೆ ಈ ದೇಶದಲ್ಲಿ ದೊಡ್ಡ ಆಂದೋಳನ ನಡೆದಿದೆ. ಇವತ್ತು ಇಡೀ ಜನಸಂಖ್ಯೆಯ ಆಧಾರದಮೇಲೆ ತೆಗೆದುಕೊಂಡು ಮಾತನಾಡುವುದಾದರೆ ಕೇವಲ ೨–೩ ಪರ್ಸೆಂಟ್ ಮಾತ್ರ ಸರ್ಕಾರೀ ಸೇವೆಗಳಲ್ಲಿ ಇರತಕ್ಕದ್ದನ್ನು ನಾವು ನೋಡಬಹುದು. ಶ್ರೀಮಾನ್ ಆಮುರ್ಗಂ ಅವರು ಸರ್ಕಾರಿ ಸೇವೆಯಲ್ಲಿನ ೧೮ ಪರ್ಸೆಂಟ್ ಮೀಸಲಾತಿ ವಿಷಯದಲ್ಲಿ ಭಾಷಣ ಮಾಡುವಾಗ ಹೇಳಿದರು. ಹಿಂದುಳಿದವರ್ಗಗಳು ಮತ್ತು ಇನ್ನಿತರ ವರ್ಗಗಳಿಗೆ ಕಳೆದ ೩೦ ವರ್ಷದ ಆಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲದಿರುವುದರಿಂದ ಆ ವರ್ಗಗಳಿಗೆ ಪ್ರಾತಿನಿಧ್ಯವನ್ನು ದೊರಕಿಸಿ ಕೊಡುವ ಬಗ್ಗೆ ಈ ದೇಶದಲ್ಲಿ ಸಾಕಷ್ಟು ಹೋರಾಟ ನಡೆಯಿತು. ಇದರ ಬಗ್ಗೆ ಕೆಲವು ಸರ್ಕಾರಗಳೂ ಅದಲುಬದಲಾಗಿವೆ. ಬಿಹಾರದಲ್ಲಿ ಕರ್ಪೂರಿ ಠಾಕೂರ್ ಅವರ ಸರ್ಕಾರ ಹೋಯಿತು. ಹಿಂದುಳಿದ ವರ್ಗಗಳಿಗೆ ಸವಲತ್ತುಗಳನ್ನು ಕೊಡಬೇಕೆಂಬ ಬಗ್ಗೆ ಹೋರಾಟ ನಡೆಯಿತು. ಅದರಲ್ಲಿ ಕೆಲವು ಹಿತಾಸಕ್ತಿಗಳು ಆಳುವಪಕ್ಷ ಮತ್ತು ವಿರೋಧಪಕ್ಷ ಎರಡೂ ಕಡೆ ಸೇರಿಕೊಂಡು ಕರ್ಪೂರೀ ಠಾಕೂರ್ ಅವರ ಸರ್ಕಾರವನ್ನು ಬುಡಮೇಲು ಮಾಡಿದ್ದನ್ನು ನಾವು ಕಂಡಿದ್ದೇವೆ. ಇವತ್ತು ತಮ್ಮ (ಮಾನ್ಯ ಮುಖ್ಯ ಮಂತ್ರಿಗಳನ್ನು ಕುರಿತು) ಮುಂದೆ ನೇರವಾಗಿ ಹೇಳುತ್ತೇನೆ, ಇವತ್ತು ತಮ್ಮ ಜವಾಬ್ದಾರಿ ಬಹಳ ಹೆಚ್ಚಿದೆ. ಸತ್ಯಾಂಶಗಳನ್ನು ಸಭೆಯ ಮುಂದೆ ನುಡಿದಂಥ ಕಾಲದಲ್ಲಿ ಯಾರೂ ಕೂಡ ಬೇಸರಪಟ್ಟು ಕೊಳ್ಳಬಾರದು. ಶ್ರೀಮಾನ್ ಬೊಮ್ಮಾಯಿಯವರು There is a click in Vidhana Soudha– ಎಂದು ಹೇಳಿದರು. ನಾನು ಸ್ವಲ್ಪ ಮುಂದುವರೆಸಿ ಹೇಳುತ್ತೇನೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಬ್ಬ ಮುಂದುವರೆದ ಕೋಮಿಗೆ ಸೇರಿದವರು ಮುಖ್ಯಮಂತ್ರಿಗಳಾಗುವುದಕ್ಕೆ ಸಾಧ್ಯವೇ ಇಲ್ಲ ಎಂಬ ಕಾಲ ಒಂದಿತ್ತು. ೧೯೫೬ಕ್ಕೂ ಪೂರ್ವದಲ್ಲಿ ಹಳೇ ಮೈಸೂರು ಇದ್ದಾಗ ಬಹುಸಂಖ್ಯಾತ ವರ್ಗಕ್ಕೆ ಸೇರಿದ ಒಕ್ಕಲಿಗರ ಸಮಾಜದವರು ಮುಖ್ಯಮಂತ್ರಿಗಳಾಗಿದ್ದರು. ೧೯೫೬ರ ರಾಜ್ಯ ಪುನರ್ ವಿಂಗಡಣೆ ಆದಮೇಲೆ ಮತ್ತೊಂದು ಮುಖ್ಯ ಪ್ರಮುಖ ಕೋಮಿಗೆ ಸೇರಿದವರು ಅಂದರೆ ಲಿಂಗಾಯಿತರು ಮುಖ್ಯಮಂತ್ರಿಗಳಾಗಿದ್ದರು. ಈ ಪ್ರಮುಖ ಕೋಮಿಗೆ ಅಧಿಕಾರ ಕೊಡುವ ಮುಖೇನ ರಾಷ್ಟ್ರದಲ್ಲಿ ಅದರಲ್ಲೂ ರಾಜ್ಯದಲ್ಲಿ ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ನಿಮ್ನ ವರ್ಗದವರು ಏನಿದ್ದಾರೆ

ಅವರ ಕಲ್ಯಾಣ ಕುಂಠಿತವಾಗುತ್ತದೆ. ಆ ಕಾರಣದಿಂದ ಹೊಸ ರಾಜಕೀಯ ಆಂದೋಳನ ರಾಜ್ಯದಲ್ಲಿ ನಡೆಯಬೇಕೆಂದು ಜನತೆ ಇವರೆಡೂ ಬಹುಸಂಖ್ಯಾತ ಕೋಮಿಗೆ ಸೇರಿದವರಿಗೆ ಅಧಿಕಾರ ಕೊಡಬಾರದು ಎಂದು ೧೯೭೨ ರಲ್ಲಿ ತೀರ್ಮಾನ ಮಾಡಿದರು, ೧೯೭೨ ರಿಂದ ೧೯೭೮ ರವರೆಗೆ ಆ ಒಂದು ರಾಜಕೀಯ ರಾಜ್ಯದ ರಾಜಕಾರಣದಲ್ಲಿ ಮುಂದುವರೆಯಿತು. ೧೯೭೨ ರಿಂದ ೧೯೭೮ ರವರೆಗೆ ಮುಂದುವರೆದ ಸಮಾಜಕ್ಕೆ ಸೇರಿದವರು ಬಹುಸಂಖ್ಯಾತ ಕೋಮಿಗೆ ಸೇರಿದವರು ಈ ರಾಜ್ಯದಲ್ಲಿ ರಾಜಕಾರಣದಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಿಲ್ಲ ಎಂಬ ಭೂಮಿಕೆ ತಯಾರಾಯಿತು. ೧೯೮೦ರ ಲೋಕಸಭಾ ಚುನಾವಣೆಯಲ್ಲಿ ಕಳೆದ ೮ ವರ್ಷಗಳ ಕಾಲ ಏನು ಭೂಮಿಕೆ ತಯಾರಾಗಿತ್ತೋ ಅದು ಸಂಪೂರ್ಣವಾಗಿ ಭೇದಿಸಲ್ಪಟ್ಟಿತು ೧೯೭೮–೮೦ರ ಲೋಕಸಭಾ ಚುನಾವಣಾ ಫಲಿತಾಂಶ ಹೊರಬಿದ್ದಮೇಲೆ. ಈ ರಾಜ್ಯದಲ್ಲಿ ಯಾರು ಮುಂದುವರೆದ ಸಮಾಜದವರು ಮುಖ್ಯಮಂತ್ರಿಗಳಾಗುವುದಕ್ಕೆ ಸಾಧ್ಯವಿಲ್ಲವೋ ಈ ಸನ್ನಿವೇಶದಲ್ಲಿ ಬ್ರಾಹ್ಮಣ ಸಮಾಜದವರಾದ ನೀವು ಮುಖ್ಯಮಂತ್ರಿಗಳಾಗಿದ್ದೀರಿ. ನಾನು ನೇರವಾಗಿ ಒಂದು ಪ್ರಶ್ನೆಯನ್ನು ಎತ್ತುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮುಚ್ಚಿ ಮಾತನಾಡಿದರೆ ರಾಜಕಾರಣದಲ್ಲಿ ಪ್ರಯೋಜನವಾಗುವುದಿಲ್ಲ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಾ ಹೇಳುತ್ತೇವೆ ನಾವು. ಈ ರಾಜ್ಯದಲ್ಲಿ ಒಬ್ಬ ಬ್ರಾಹ್ಮಣ ಸಮಾಜಕ್ಕೆ ಸೇರಿದವರು ಮುಖ್ಯಮಂತ್ರಿಗಳಾಗುವುದು ಹೇಗೆ ಸಾಧ್ಯ ಎಂದು ಒಂದು ವರ್ಗ ಇದ್ದರೆ, ಇನ್ನೊಂದು ವರ್ಗದವರಲ್ಲಿ ಏನು ಕಳೆದ ೮ ವರ್ಷಗಳ ಕಾಲ ಈ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಹಿಂದುಳಿದ ಸಮಾಜದವರು ಅಲ್ಪಸಂಖ್ಯಾತರು, ನಿಮ್ನವರ್ಗದವರು, ಅದಲ್ಲೂ ಭೂಮಿಯ ನೆಲವನ್ನು ಕಚ್ಚಿ ಹಿಡಿದವರು ಕಾಗೋಡು ತಿಮ್ಮಪ್ಪನವರು ಮಾತಿನಲ್ಲಿ ಹೇಳುವುದಾದರೆ ನೆಲವನ್ನು ಕಚ್ಚಿ ಹಿಡಿದಂಥ ಜನರೇನಿದ್ದಾರೆ ಅವರ ಕಲ್ಯಾಣಕ್ಕೆ ಹಾಕಿದಂಥ ಎಲ್ಲ ಭೂಮಿಕೆ ಮುಂದುವರೆದ ಸಮಾಜಕ್ಕೆ ಸೇರಿದ ಮುಖ್ಯಮಂತ್ರಿಗಳು ಬಂದಮೇಲೆ ನಿರ್ನಾಮವಾಗುತ್ತದೆಯೋ ಎಂಬ ಶಂಕೆ ಪ್ರಾರಂಭವಾಯಿತು. ತಾವೇ ಹೇಳಿಕೊಂಡಿದ್ದೀರಿ ಬಹಿರಂಗಸಭೆಗಳಲ್ಲಿ, ಶ್ರೀಮತಿ ಇಂದಿರಾಗಾಂಧಿಯವರ ಆಶೀರ್ವಾದ ಇಲ್ಲದಿದ್ದರೆ ನಾನು ಮುಖ್ಯಮಂತ್ರಿಯಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಎಂದು ಆ ಹಿನ್ನಲೆಯಲ್ಲಿ ಹೇಳುತ್ತೇನೆ, ನಿಮ್ಮ ಜವಾಬ್ದಾರಿ ಬಹಳ ಹೆಚ್ಚಿದೆ. ಈ ಮಾತನ್ನು ನಾನು ಬಹಳ ಗಾಂಭೀರ್ಯದಿಂದ ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ. It is accidental. ಈ ರಾಜ್ಯದ ಮುಖ್ಯ ಕಾರ್ಯದರ್ಶಿ, ಅಡಿಷನಲ್ ಮುಖ್ಯ ಕಾರ್ಯದರ್ಶಿ, ಮತ್ತು ಬಹುತೇಕ ಕಾರ್ಯದರ್ಶಿಗಳು ಮುಖ್ಯಮಂತ್ರಿಯವರ ಕೋಮಿಗೆ ಸೇರಿದವರಿದ್ದಾರೆ. ಇದನ್ನು ನೀವು ಸೃಷ್ಟಿ ಮಾಡಿಲ್ಲ. ಈ ಹಂದರವನ್ನು ತಾವು ಸೃಷ್ಟಿ ಮಾಡಲಿಲ್ಲ. ಬಹುಶಃ ಈ ಎಲ್ಲಾ ಅಧಿಕಾರಿಗಳೂ ತಾವು ಬರುವುದಕ್ಕೆ ಪೂರ್ವದಲ್ಲಿ ಇದ್ದರು ಈ ಆಡಳಿತ ವ್ಯವಸ್ಥೆಯಲ್ಲಿ. ಒಬ್ಬ ಬ್ರಾಹ್ಮಣ ಹೇಗೆ ಮುಖ್ಯಮಂತ್ರಿಯಾಗುತ್ತಾನೆ ಎಂದು ಹೇಳುವ ಒಂದು ವರ್ಗದ ಬಗ್ಗೆ ನಾನು ಏನು ಹೇಳುವುದಿಲ್ಲ. ಆದರೆ ಎರಡನೇ ವರ್ಗ ಏನಿದೆ ಅದರ ಬಗ್ಗೆ ಹೇಳುತ್ತೇನೆ. ಕಳೆದ ೮ ವರ್ಷಗಳ ಕಾಲ ಸಮಾಜದಲ್ಲಿರತಕ್ಕ ಕೆಲವು ವರ್ಗಗಳ ಜನತೆಗೆ ದೊರೆಯತಕ್ಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಏನು ಹಂದರವನ್ನು ನಿರ್ಮಾಣ ಮಾಡಿತ್ತು ಅದಕ್ಕೆ ಧಕ್ಕೆ ಬೀಳಬಹುದು ಎಂದು ಸಂಶಯವನ್ನು ವ್ಯಕ್ತಪಡಿಸಿರತಕ್ಕ ವರ್ಗಕ್ಕೆ ತಾವು ಉತ್ತರ ಕೊಡಬೇಕಾದರೆ ರಾಜಕೀಯ ಚಾಣಾಕ್ಷ್ಯತನ ಹೆಚ್ಚಿರಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೭೮ ರಿಂದೀಚೆಗೆ ಈ ದಿವಸದವರೆಗೆ ಯಾವುದೇ ನೇಮಕಾತಿ ಆಗಿಲ್ಲ. ಹಾವನೂರ್ ಆಯೋಗ ಏತಕ್ಕೆ ಬೇಕಾಗಿತ್ತು ? ತಾವೆಲ್ಲಾ ಒಂದೇ ಕಡೆ ಇದ್ದಿರಿ ಆಗ ದೊಡ್ಡ ಹೋರಾಟ ನೇಮಕಾತಿ ಬಗ್ಗೆ ಆಯಿತು. ೪೨ ಪರ್ಸೆಂಟ್ ಮೀಸಲಾತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದೆ. ಬಹುಶಃ ಹಿಂದೂಸ್ಥಾನದಲ್ಲಿ ಎಲ್ಲೂ ಇಲ್ಲ ಈ ರೀತಿ. ೧೯೭೮ ರಲ್ಲಿ ರಿವೈಸ್ಡ್ ರೋಸ್ಟರ್ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಿತು. ಅದರ ತಾರೀಖು ಬೇಕಾದರೂ ಹೇಳುತ್ತೇನೆ. ಆದರೆ ಅದರ ಅವಶ್ಯಕತೆ ಇಲ್ಲ, ಸರ್ಕಾರಕ್ಕೆ ಗೊತ್ತಿದೆ. ಮೊದಲನೇ ರೋಸ್ಟರ್‌ನಲ್ಲಿ ಏನು ಹಿಂದುಳಿದ ವರ್ಗಕ್ಕೆ ವೈಟೇಜ್ ಕೊಡಬೇಕೆಂದು ನಿರ್ಣಯ ಮಾಡಿದ್ದರು ೪–೩–೧೯೭೭ ರಲ್ಲಿ ಅದನ್ನು ಪುನರ್‌ವಿಮರ್ಶೆ ಮಾಡಿದ್ದು ೨೫–೯–೧೯೭೮. ಅಲ್ಲಿಂದ ಜಿಜ್ಞಾಸೆ ಪ್ರಾರಂಭವಾಯಿತು. ಮೊದಲನೇ ರೋಸ್ಟರ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಅಥವಾ ಪರಿಶಿಷ್ಟ ಸಮಾಜದವರಿಗೆ ಹೆಚ್ಚು ಸವಲತ್ತು ಏನು ಸಿಗುತ್ತಿತ್ತು ಅದು ಪುನರ್ ವಿಮರ್ಶಿತ ರೋಸ್ಟರ್‌ನಲ್ಲಿ ಹಿಂದುಳಿದವರ್ಗಗಳಿಗೆ ಹೋಗುತ್ತದೆ ಎಂಬ ವಾದವಿವಾದ ಪ್ರಾರಂಭವಾಯಿತು. ಇದರ ಪರಿಣಾಮ ಎಲ್ಲಿಗೆಹೋಯಿತು ಎಂದರೆ ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂಬ ವಾತಾವರಣ ನಿರ್ಮಾಣವಾಯಿತು. ಕರ್ನಾಟಕ ಲೋಕಸೇವಾ ಆಯೋಗಕ್ಕೂ ಸರ್ಕಾರಕ್ಕೂ

ಜಿಜ್ಞಾಸೆ ಪ್ರಾರಂಭವಾಯಿತು. ೧೯೭೯ ರಲ್ಲಿ ರೋಸ್ಟರನ್ನು ಹಿಂದಿನ ಸರ್ಕಾರದವರು ಏನು ಜಾರಿಗೆ ತಂದರು ಅದನ್ನು ಹಿಂದೆ ನೇಮಕಾತಿಗಳನ್ನು ಮಾಡುವ ಬಗ್ಗೆ ಏನು ನೋಟಿಫಿಕೇಷನ್ ಮಾಡಿದ್ದರೋ ಆ ಎಲ್ಲ ನೇಮಕಾತಿಗಳಲ್ಲಿ ಎಲ್ಲಿ ಸೆಲೆಕ್ಷನ್ ಮುಗಿದಿಲ್ಲವೋ ಅಲ್ಲಿ ಹೊಸ ರೋಸ್ಟರ್ ಅಪ್ಲೈ ಮಾಡಬೇಕು ಎಂಬ ಒಂದು ವಾದ ಇದ್ದರೆ ಅದನ್ನು ಮಾಡಲಿಕ್ಕೆ ಆಗುವುದಿಲ್ಲ ಎಂಬ ಇನ್ನೊಂದು ವಾದ ಬಂತು. ಪಿ.ಎಸ್.ಸಿ.ಗೂ ಸರ್ಕಾರಕ್ಕೂ ಜಿಜ್ಞಾಸೆ ಪ್ರಾರಂಭವಾಯಿತು.

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು.)

ಈ ಬಗ್ಗೆ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಮುಂದೆ ರಿಟ್ ಅರ್ಜಿಗಳು ಹೋದವು. ಇದರ ಪರಿಣಾಮವಾಗಿ ಕ್ಲಾಸ್ (೧), (೨) ಮತ್ತು (೩) ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡುವುದಕ್ಕೆ ಆಗಲಿಲ್ಲ. ನಾವು ಈ ಸದನದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ, ಸಾಮಾಜಿಕ ನ್ಯಾಯ ತರುವ ದಿಸೆಯಲ್ಲಿ ಭೂಸುಧಾರಣೆಯಂಥ ಹಲವಾರು ಮಸೂದೆಗಳನ್ನು ಒಪ್ಪುತ್ತೇವೆ. ಮತ್ತು ರಾಜ್ಯದ ಸಂಪತ್ತನ್ನು ರೂಢಿಸಿಕೊಳ್ಳುವುದಕ್ಕೆ ತೆರಿಗೆ ವಿಧಿಸುವ ಕಾರ್ಯವನ್ನು ಮಾಡುತ್ತೇವೆ. ಈ ಎಲ್ಲಾ ಕಾರ್ಯಗಳನ್ನೂ ಜಾರಿಗೆ ಕೊಡತಕ್ಕದ್ದು ಅಧಿಕಾರ ವರ್ಗದ ಕರ್ತವ್ಯ. ಆದರೆ ಇಂಥಾ ಸನ್ನಿವೇಶ ನಿರ್ಮಾಣವಾದಾಗ ಇದನ್ನು ಜಾರಿಗೆ ಕೊಡತಕ್ಕ ಸನ್ನಿವೇಶ ಹೇಗೆ ನಿರ್ಮಾಣವಾಗುತ್ತದೆ? ಸುಮಾರು ಐದು ಸಾವಿರ ಶಾಲಾ ಉಪಾಧ್ಯಾಯರ ನೇಮಕಗಳು ಆಗಿಲ್ಲವೆಂದು ಮಾನ್ಯ ರಾಜಶೇಖರನ್ ಅವರು ಹೇಳಿದರು. ಬೆಳಿಗ್ಗೆ ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ, ಶ್ರೀ ಸಮ್ಮದ್ ಅವರು ಆರೋಗ್ಯ ಸಂದರ್ಶಕರ ಹುದ್ದೆಗಳ ನೇಮಕಾತಿ ಬಗ್ಗೆ ತಿಳಿಸಿದರು. ಹೀಗೆ ಯಾವುದೇ ಇಲಾಖೆ ತೆಗೆದುಕೊಳ್ಳಿ, ೧೯೭೯ ರಲ್ಲಿ ಹಿಂದಿನ ಸರ್ಕಾರ ನೇಮಕಾತಿಗಳನ್ನು ಮಾಡುವಾಗ ಅನುಸರಿಸಬೇಕೆಂದು ಹೊರಡಿಸಿದ ಹೊಸ ರೋಸ್ಟರ್‌ನಿಂದ ಹಿಡಿದು ಈ ತಿಂಗಳಲ್ಲಿ ಹೊರಡಿಸಲಾಗಿದೆ ಎಂದು ಶ್ರೀ ಸಮ್ಮದ್ ಅವರು ಹೇಳಲಾದ ಹೊಸ ರೋಸ್ಟರ್ ವರೆಗೆ ಯಾವುದೇ ನೇಮಕಾತಿಗಳನ್ನು ಮಾಡಲಾಗಿಲ್ಲ. ಈ ಮಾತನ್ನು, ತಾವು ಇದರ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕಾಗಿದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ರಾಜ್ಯದ ಶ್ರೇಷ್ಟ ನ್ಯಾಯಾಲಯಗಳಿಗೆ ಹೊರಗಡೆಯಿಂದ ಯಾರಾದರೂ ನ್ಯಾಯಾಧೀಶರನ್ನು ವರ್ಗ ಮಾಡಬೇಕೆಂದರೆ, ಇದು ನ್ಯಾಯಾಂಗದಲ್ಲಿ ಹಸ್ತಕ್ಷೇಪವೆಂದು ವಿಧವಿಧವಾಗಿ ದೊಡ್ಡ ವ್ಯಾಖ್ಯಾನ ಮಾಡುತ್ತಾರೆ. ಇತ್ತೀಚೆಗೆ ಕೆಲವು ಪತ್ರಿಕೆಗಳಲ್ಲೂ ಕೂಡ ಹಿರಿಯ ಪತ್ರಕರ್ತರು ವಾದವಿವಾದವನ್ನೇ ಎಬ್ಬಿಸಿದ್ದಾರೆ. ಇದೆಲ್ಲದರ ಪರಿಣಾಮವಾಗಿ ೪೦–೫೦ ಸಾವಿರ ಹುದ್ದೆಗಳು– ಅವು ಪ್ರಾಥಮಿಕ ಶಾಲಾ ಉಪಾಧ್ಯಾಯರಾಗಲಿ, ಅಧ್ಯಾಪಕರಾಗಲೀ, ಸಹಕಾರ ಇಲಾಖೆಯಲ್ಲಾಗಲೀ, ಪಂಚಾಯತ್ ರಾಜ್ ಇಲಾಖೆಯಲ್ಲಾಗಲೀ ಯಾವುದೇ ತೆಗೆದುಕೊಂಡರೂ ನೇಮಕಾತಿಗಳನ್ನು ಮಾಡಲಾಗಲಿಲ್ಲ. ಶ್ರೇಷ್ಠ ನ್ಯಾಯಾಲಯದಲ್ಲಿ ನ್ಯಾಯಾಧೀಶರುಗಳು ಇದರ ಬಗ್ಗೆ ತೀರ್ಪನ್ನು ಕೊಡುವುದಕ್ಕೆ–ಈ ಬೆಂಚಿಗೆ, ಆ ಬೆಂಚಿಗೆ ಹೋಗುತ್ತಾರೆ ಅಡ್ವೋಕೇಟ್ ಜನರಲ್ ಅವರನ್ನು ಸರ್ಕಾರ ನೇಮಕ ಮಾಡಿದೆ. ಅವರು ಇದರ ಬಗ್ಗೆ ಎಷ್ಟು ಶ್ರಮಪಟ್ಟಿದ್ದಾರೆನ್ನುವುದು ಗೊತ್ತಿಲ್ಲ, ಕಾನೂನು ಇಲಾಖೆ ಎಷ್ಟು ಶ್ರಮಪಟ್ಟಿದೆ ಎನ್ನುವುದು ಗೊತ್ತಿಲ್ಲ ಈ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಯಾವುದೇ ಸನ್ನಿವೇಶದಲ್ಲಿ ನೇಮಕಾತಿಗಳಾಗಿಲ್ಲ. ವಿಧಾನ ಸೌಧದ ಮಟ್ಟದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರತಕ್ಕ ಸಿಬ್ಬಂದಿ ಇದೆಯೇ? ರಾಜ್ಯದಲ್ಲಿ ವಿವಿಧ ಹುದ್ದೆಗಳನ್ನು ನೇಮಕಾತಿಗಳನ್ನು ಮಾಡುವುದಕ್ಕೆ ಇರುವುದು ಲೋಕಸೇವಾ ಆಯೋಗವೊಂದೇ ಅಲ್ಲ. ಸುಮಾರು ೬೦–೬೩ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳಿದ್ದವು, ರಾಜ್ಯ ಮಟ್ಟದ ನೇಮಕಾತಿ ಸಮಿತಿಗಳಿದ್ದವು. ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಅಲ್ಲಲ್ಲೇ ನೇಮಕಾತಿ ಸಮಿತಿಗಳಿದ್ದವು. ಇವುಗಳೆಲ್ಲದರ ಕೆಲಸಗಳು ಸ್ಥಗಿತವಾಗಿದೆ. ಇದಕ್ಕೆ ಭ್ರಷ್ಟಾಚಾರ ಕೂಡ ಒಂದು ಕಾರಣ. ನಾನು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಕುಳಿತು, ಅನೇಕ ಖಾಸಗಿ ಸದಸ್ಯರು ಭ್ರಷ್ಟಾಚಾರದಲ್ಲಿ ತೊಡಗಿದ್ದರೆಂದು ಹೇಳಿದ್ದೇನೆ. ಇದನ್ನೆಲ್ಲ ವಿಮರ್ಶೆ ಮಾಡಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳನ್ನು ರಚಿಸಲಾಯಿತು. ಅದರ ಮೇಲೂ ಆಪಾದನೆಗಳು ಬಂದವು. ಆಗ ಆ ಸಮಿತಿಗಳನ್ನೂ ಕೈಬಿಡಲು ನಿರ್ಣಯ ಮಾಡಲಾಯಿತು. ಇದರ ಪರಿಣಾಮವಾಗಿ ಎಲ್ಲ ಹಂತಗಳಲ್ಲೂ ನೇಮಕಗಳನ್ನು ಮಾಡತಕ್ಕ ಕಾರ್ಯ ಸಂಪೂರ್ಣವಾಗಿ ನಿಂತು ಹೋಯಿತು. ಇದರಿಂದ ಆಗಿರತಕ್ಕ ಅನಾಹುತವೇನು ಇದನ್ನು ನಾವು ವಿಮರ್ಶೆ ಮಾಡಬೇಕಾಗುತ್ತದೆ. ಈ ಎರಡು ವರ್ಷಗಳಲ್ಲಿ ನೇಮಕಾತಿಗಳಲ್ಲಿ ವಿಳಂಬವಾದ್ದರಿಂದ ಅನೇಕ ಜನ ನಿರುದ್ಯೋಗಿ ತರುಣರ ವಯಸ್ಸು ಮೀರಿಹೋಯಿತು. ಲೋಕಸೇವಾ ಆಯೋಗದಲ್ಲಿ

೧೯೭೭ ರ ಪೂರ್ವಕ್ಕೆ ಪ್ರಕಟಿಸಿದ್ದ ಖಾಲಿ ಹುದ್ದೆಗಳಿಗೆ ಸಂದರ್ಶನ ಕರೆದು, ಸಂದರ್ಶನ ನಡೆಸಿ, ಆಯಾಯಾ ದಿನವೇ ಅಂಕಗಳನ್ನು ಪ್ರಕಟ ಮಾಡಿದ್ದರೂ ಆಯ್ಕೆಯಾದವರ ಪಟ್ಟಿಯನ್ನು ಪ್ರಕಟ ಮಾಡಲಿಕ್ಕೆ ಇನ್ನೂ ಸಾಧ್ಯವಾಗಿಲ್ಲ. ಈ ಒಂದೂವರೆ ವರ್ಷಗಳಲ್ಲಿ ಅನೇಕರಿಗೆ ಇದರಿಂದ ಮೆಂಟಲ್ ಡಿರೆಂಜ್‌ಮೆಂಟ್ ಆಗುವ ಪರಿಸ್ಥಿತಿ ಬಂದಿತ್ತು, ಅವರಿಗೆ ಜೀವನದಲ್ಲಿ ಸಾಕಷ್ಟು ಆಘಾತವಾಗಿದೆ. ಮೊನ್ನೆ ಅಂದರೆ, ೩೧ನೇ ಜನವರಿ ೧೯೮೧ ರಲ್ಲಿ ಸರ್ಕಾರದವರು ಒಂದು ನಿರ್ಣಯ ಮಾಡಿದರು. ಇದರಲ್ಲಿ All Class III posts to be filled up through competitve examinations. ಎಂದು ಮಾಡಿದರು. ನಂತರ ಅದನ್ನೂ ಮಾರ್ಪಾಡು ಮಾಡಿದರು. ಈ ಎರಡೂ ಪ್ರಕಟಣೆಗಳನ್ನೂ ನನ್ನ ಮುಂದೆ ಇಟ್ಟುಕೊಂಡಿದ್ದೇನೆ. ೧೫-೬-೧೯೮೧ ರಂದು ಖಾಲಿ ಹುದ್ದೆಗಳನ್ನು ಕ್ಲಾಸಿಫೈ ಮಾಡಿದ್ದಾರೆ. State Civil Service Group ಅನ್ನು Group 'A' Group B Group C Group D ಎಂದು ವಿಂಗಡಿಸಿ ೨೫-೬-೧೯೮೧ ರಂದು ಪ್ರಕಟಿಸಿದ್ದಾರೆ. ನಂತರ ಜುಲೈ ೨೩ ರಂದು ಇನ್ನೊಂದು ಪ್ರಕಟಣೆಯನ್ನು ಹೊರಡಿಸಿ, ಅದರಲ್ಲಿ "These rules may be called the Karnataka Civil Services Selections to Class III Posts Rules 1981 ಎಂದು ಹೇಳಿದೆ. ಎ.ಬಿ.ಸಿ. ಮತ್ತು ಡಿ. ಗುಂಪುಗಳಾಗಿ ವಿಂಗಡಣೆ ಮಾಡಿರುವುದರಲ್ಲಿ ನಿಮ್ಮ ಲೆಕ್ಕದ ಪ್ರಕಾರ ಸಿ ಗುಂಪು ಕ್ಲಾಸ್ (೩) ಹುದ್ದೆಗಳನ್ನು ಪ್ರತಿನಿಧಿಸುತ್ತದೆ. ಆದರೆ, ಜುಲೈ ೮ ರಂದು ಮತ್ತೆ ಒಂದು ಪ್ರಕಟಣೆ ಹೊರಡಿಸಿ ಕ್ಲಾಸ್ (೩) ಹುದ್ದೆಗಳನ್ನು ನೇಮಕ ಮಾಡತಕ್ಕ ಬಗ್ಗೆ ನಿಯಮಗಳನ್ನು ಸೂಚಿಸಲಾಗಿದೆ. ಹೀಗೆ ಕೇವಲ ೨೦-೨೫ ದಿವಸಗಳಲ್ಲಿ ಡಿಪಿಎಆರ್ ನವರು ಖಾಲಿ ಹುದ್ದೆಗಳನ್ನು ವರ್ಗೀಕರಣ ಮಾಡುವಾಗ ಸಿ ಗುಂಪು ಎಂಬುದನ್ನು ಬಿಟ್ಟು ಕ್ಲಾಸ್ (೩) ಎಂದು ಮಾಡಿ ನಿಯಮಗಳನು ಅಳವಡಿಸಿ ಪ್ರಕಟ ಮಾಡಿದ್ದಾರೆ, ಈ ವಿಷಯದಲ್ಲಿ ಶ್ರೇಷ್ಟ ನ್ಯಾಯಾಲಯಕ್ಕೆ ಹೋಗಿ ವಿವಾದ ಎಬ್ಬಿಸುವುದಾದರೆ ಪುನ; ಎರಡು ವರ್ಷ ನೇಮಕಾತಿಗಳು ಮುಂದಕ್ಕೆ ಹೋಗುತ್ತವೆ.

೫. ೩೦ ಪಿ.ಎಂ.

ಒಂದು ಪ್ರಾಮುಖ್ಯವಾದ ಸಂಶಯವನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಅಧಿಕಾರಿಗಳು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವುದಾದರೂ ಕೂಡ ಅದಕ್ಕೆ ಜವಾಬ್ದಾರರು ಈ ಸಭೆಗೆ ನೀವೇ ಆಗುತ್ತೀರಾ. ಅದಕ್ಕೆ ನಾನು ಮೊದಲೇ ಹೇಳಿದ್ದೇನೆ ಕರ್ನಾಟಕ ರಾಜ್ಯದಲ್ಲಿ ೧೯೭೨ ರಿಂದ ೧೯೭೭ರವರೆಗೆ ಜಾತಿಯ ರಾಜಕಾರಣ ಅದರಲ್ಲಿದೆ ಎಂಬುದನ್ನು ತಮಗೆ ಹೇಳುತ್ತಿದ್ದೇನೆ. ಮಾನ್ಯ ಶ್ರೀ ರಾಜಶೇಖರ್ ರವರು ಹೇಳಿದರು, ನೀವು ಇನ್ನೂ ಯುವಕರು ಇನ್ನು ೧೦ ವರ್ಷದವರೆಗೆ ಮುಂದುವರಿಯಬೇಕೆಂದು, ಆದರೆ ಇವತ್ತು ನಿಮ್ಮ ಸೆಕ್ರಟರಿಯೇಟ್‌ನಲ್ಲಿ ನಡೆಯುತ್ತಿರತಕ್ಕ ನಿರ್ಣಯಗಳೇನಿವೆ ಅದರ ಹಿನ್ನೆಲೆಯಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥಾ ನಿರ್ಣಯಗಳಿಂದ ನೀವು ನಿಮ್ಮ ಅಧಿಕಾರದಲ್ಲಿ ದಕ್ಷತೆ ಮತ್ತು ಆಡಳಿತದಲ್ಲಿ ಆಸಕ್ತಿಯನ್ನು ಅಳವಡಿಸತಕ್ಕಂಥದ್ದಕ್ಕೆ ಸಾಧ್ಯವೇ ಸ್ವಾಮಿ, ತಾವು ಈ ರೂಲ್ಸ್‌ನಲ್ಲಿ ಹೇಳಿದ್ದೀರಿ ಕ್ಲಾಸ್ (೩) ಅಪಾಯಿಂಟ್‌ಮೆಂಟ್ಸ್‌ನ್ನು ಪಿ.ಎಸ್.ಸಿ. ಯವರಿಂದ ತೆಗೆದು ಹಾಕಿದ್ದೇವೆಂದು ಅದನ್ನು ತೆಗೆದು ಹಾಕಿ ಜಿಲ್ಲಾ ಮಟ್ಟದಲ್ಲಿ ಆಯಾಯಾ ಇಲಾಖೆಯವರೇ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆಂದು ಹೇಳಿದ್ದೀರಿ. ಇದು ೧೦ ಹುದ್ದೆಗಳಿಗಿಂತ ಹೆಚ್ಚು ಇದ್ದರೆ ಜಿಲ್ಲಾ ಯೂನಿಟ್ ಆಫೀಸರ್‌ರವರು ನೇಮಕ ಮಾಡತಕ್ಕದ್ದಕ್ಕೆ ಅವಕಾಶ ಕೊಟ್ಟಿದ್ದೀರಿ. ಇದನ್ನು ಸಭೆಯ ಗಮನಕ್ಕೇ ತರಬಯಸುತ್ತೇನೆ.

> "Provided further that the number of vacancies in relation to a category of Class III Post within the juris liction of the appointing authority who is a District Officer, is less than 10 or any occasion for the recruitment done, the selection authority in relation to these vacancies shall be the Divisional Officer."

೧೦ ಹುದ್ದೆಗಳಿಗಿಂತ ಹೆಚ್ಚು ಖಾಲಿ ಇದ್ದರೆ ಅದನ್ನು ಜಿಲ್ಲಾ ಯೂನಿಟ ಆಫೀಸರ್‌ರವರು ನೇಮಕ ಮಾಡುತ್ತಾರೆ. ೧೦ ಹುದ್ದೆಗಳಿಗಿಂತ ಕಡಿಮೆ ಇದ್ದರೆ ಅದನ್ನು ಡಿವಿಜನಲ್ ಕಮಿಷನರ್ ನೇಮಕ ಮಾಡಬೇಕೆಂದು ಈ ನೋಟಿಫಿಕೇಷನ್ ನಲ್ಲಿ ಹೇಳಿದ್ದೀರಿ. ಅದರ ಪರಿಣಾಮ ಏನಾಗುತ್ತದೆ ಎಂದರೆ ಇವತ್ತು

ಒಂದು ಡಿವಿಜನಲ್ ಲೆವಲ್‌ನಲ್ಲಿ ಯಾವುದೇ ಒಂದು ಜಿಲ್ಲೆಯಲ್ಲಿ ಯಾವುದೇ ಇಲಾಖೆಗೆ ಸಂಬಂಧಪಟ್ಟಂತೆ ೧೦ ಹುದ್ದೆಗಳಿಗಿಂತ ಕಡಿಮೆ ಇರತಕ್ಕಂಥ ಖಾಲಿ ಸ್ಥಾನಗಳನ್ನು ಭರ್ತಿ ಮಾಡಬೇಕಾದರೆ ಅದನ್ನು ಡಿವಿಜನಲ್ ಲೆವಲ್‌ನಲ್ಲಿರತಕ್ಕಂಥ ಕಮೀಷನರ್ ಆಗಿರಬಹುದು ಇಲ್ಲ ಮತ್ತೊಬ್ಬ ಅಧಿಕಾರಿಯಾಗಿರಬಹುದು ಅವರು ಅದನ್ನು ನೋಟಿಫೈ ಮಾಡಬೇಕಾಗುತ್ತದೆ. ಆಗ ಡಿವಿಜನಲ್ ವ್ಯಾಪ್ತಿಯಲ್ಲಿರತಕ್ಕ ಎಲ್ಲಾ ಜಿಲ್ಲಾ ನಿರುದ್ಯೋಗಿಗಳೂ ಅಲ್ಲಿಗೆ ಅಪ್ಲಿಕೇಷನ್ ಹಾಕಲು ಅವಕಾಶವಿದೆ. ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ತಾವು ಈ ಒಂದು ನೇಮಕ ಮಾಡತಕ್ಕದರ ಬಗ್ಗೆ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ. ಅದರ ಇನ್‌ಫ್ರಾಸ್ಟ್ರಕ್ಚರ್ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಆ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಕಾರಣ ಸರ್ಕಾರ ಇದರಲ್ಲಿ ಒಂದು ಮಾತನ್ನು ಹೇಳುತ್ತದೆ. purely based on marks ಎಂದು ಹೇಳಿದ್ದೀರಿ. ಕ್ವಾಲಿಫೈಯಿಂಗ್ ಎಗ್ಜಾಮಿನೇಷನ್ ಏನೇ ಇದ್ದರೂ ಅವರು ಏನು ಅಂಕಗಳನ್ನು ಗಳಿಸಿರುತ್ತಾರೆ ಅದು ಆಧಾರದ ಮೇಲೆ ಅಲ್ಲಿ ನೇಮಕವನ್ನು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಸ್ವಾಮಿ ಮೊನ್ನೆ ಪ್ರೈಮರಿ ಸ್ಕೂಲ್ ಟೀಚರ್ಸ್ ಹುದ್ದೆಗೆ ನೇಮಕಾತಿ ಮಾಡಲು ಒಂದು ಸಿಸ್ಟಂನ್ನು ಜಾರಿಗೆ ತಂದಿದ್ದೀರಿ. ಆಗ ಅಲ್ಲಿ ಒಂದು ಶರತ್ತನ್ನು ಹಾಕಿದ್ದೀರಿ. ೨೫ ವರ್ಷಕ್ಕಿಂತ ಮೀರದೆ ೪೦ ವರ್ಷಕ್ಕೊಳಪಟ್ಟು, ತರಬೇತಿ ಹೊಂದಿರತಕ್ಕ ಯಾರೇ ಅಭ್ಯರ್ಥಿ ಇದ್ದರೂ ಅಂಕಗಳ ಆಧಾರದ ಮೇಲೆ ನೇಮಕ ಮಾಡಬೇಕೆಂದು ತಾವು ಸೂಚಿಸಿದ್ದೀರಿ. ಆಯಾಯಾ ಜಿಲ್ಲೆಗೆ ಸಂಬಂಧಪಟ್ಟ ಹುಡುಗರಿಗೆ ಅಲ್ಲಿ ತಾವು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಆದರೆ ಈ ಕ್ಲಾಸ್ (೩) ಪೋಸ್ಟ್‌ನಲ್ಲಿ ಆ ಸನ್ನಿವೇಶ ಬರಲಿಕ್ಕೆ ಸಾಧ್ಯವಿಲ್ಲದ ಹಾಗಾಗಿದೆ. ಏತಕ್ಕೆಂದರೆ ಕ್ಲಾಸ್ (೩) ಪೋಸ್ಟ್ ಕ್ಲಾಸ್ (೨) ಪೋಸ್ಟ್‌ಗೆ ಹೆಚ್ಚು ಕಡಿಮೆ ಹತ್ತಿರಹತ್ತಿರದಲ್ಲಿದೆ, ಇದರಲ್ಲಿ ಎಕ್ಸೈಜ್ ಇನ್ಸ್‌ಪೆಕ್ಟರ್, ಕೋ ಆಪರೇಟಿವ್ ಇನ್ಸ್‌ಪೆಕ್ಟರ್ ಪೋಸ್ಟ್ ಇರಬಹುದು ಇಲ್ಲವೇ ಹೈಸ್ಕೂಲ್ ಟೀಚರ್ಸ್ ಪೋಸ್ಟ್ ಇರಬಹುದು, ಈ ಹುದ್ದೆಗಳನ್ನು ತುಂಬತಕ್ಕ ಕಾಲದಲ್ಲಿ ನೀವು ಕೇವಲ ಮೆರಿಟ್ ಆಧಾರದ ಮೇಲೆ ಆ ಸ್ಥಾನಗಳನ್ನು ತುಂಬತಕ್ಕ ವಾತಾವರಣವನ್ನು ನಿರ್ಮಾಣ ಮಾಡುವುದಾದರೆ ಕ್ವಾಲಿಫೈಡ್ ಎಗ್ಜಾಮಿನೇಷನ್‌ಗಳಲ್ಲಿ ಹೆಚ್ಚಿನ ಅಂಕಗಳೆಲ್ಲವನ್ನೂ ಅವರು ಕೊಡೀಕರಿಸುವ ನಿರ್ಣಯವನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಜಿಲ್ಲಾ ಮತ್ತು ಡಿವಿಜನಲ್ ಲೆವಲ್‌ನಲ್ಲಿರತಕ್ಕವರು ಮಾಡಬೇಕಾಗುತ್ತದೆ. ಅದರ ಪರಿಣಾಮವೇನಾಗುತ್ತದೆ ಎನ್ನುವುದಕ್ಕೆ ಸ್ವಾಮಿ ಇವತ್ತು ನಮ್ಮ ಸಮಾಜದಲ್ಲಿರತಕ್ಕ ನ್ಯೂನ್ಯತೆಗಳೇನೆಂಬುದನ್ನು ತಾವು ಸ್ವಲ್ಪ ಅವಲೋಕನ ಮಾಡಿ ನೋಡುವುದಾದರೆ, ಅನೇಕ ಕಡೆ ಪರೀಕ್ಷೆ ನಡೆಯುತಕ್ಕಂಥ ಕಾಲದಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿರತಕ್ಕದ್ದನ್ನು ನೋಡಿದ್ದೇವೆ, ಅದು ಕಾಲೇಜ್ ಹಂತದಲ್ಲಿರಬಹುದು ಇಲ್ಲವೇ ಸೆಕೆಂಡರಿ ಎಜುಕೇಷನ್ ಹಂತದಲ್ಲಿರಬಹುದು, ಯಾವ ಹಂತದಲ್ಲಿಯೇ ಇರಲಿ. ಸ್ವಾಮಿ ಕೆಲವು ಕಡೆ ಯಾರು ಪರೀಕ್ಷೆ ನಡೆಸತಕ್ಕ ಸೂಪರ್‌ವೈಜರಿ ಸ್ಟಾಫ್ ಇದೆಯೋ ಅಂಥವರ ಪ್ರಾಣಕ್ಕೆ ಧಕ್ಕೆ ಬರತಕ್ಕ ವಾತಾವರಣವನ್ನು ವಿದ್ಯಾರ್ಥಿಗಳು ಉಂಟು ಮಾಡಿದಾಗ ಅವರು ತಮ್ಮ ಪ್ರಾಣ ರಕ್ಷಣೆಗೋಸ್ಕರವಾಗಿ ಪುಸ್ತಕಗಳನ್ನು ಕೊಟ್ಟು ಬರೆದು ಕೊಳ್ಳಿ ಎಂದು ಹೇಳಿರತಕ್ಕ ಸನ್ನಿವೇಶಗಳು ಇವೆ. ಅದರ ಪರಿಣಾಮವೇನಾಗಿದೆ ಇವತ್ತು ನೀವು ಭ್ರಷ್ಟಾಚಾರವನ್ನು ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ನೇಮಕಾತಿ ನಿಯಮಗಳನ್ನು ಬದಲಾವಣೆ ಮಾಡಿದ್ದೀರಿ. ಇದರಿಂದ ಹೆಚ್ಚು ಅಂಕಗಳನ್ನು ಹಾಕತಕ್ಕದರ ಬಗ್ಗೆ ಮನೆ ಬಾಗಿಲಿಗೇ ಭ್ರಷ್ಟಾಚಾರ ಕೂಪ ಪಸರಿಸುತ್ತದೆ ಎನ್ನುವುದನ್ನು ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸ್ವಾಮಿ ಇದನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಕಾಲೇಜಿನಲ್ಲಿಯಾಗಲೀ ಎಂ.ಎ.ಎಂ.ಎಸ್.ಸಿ. ಯಲ್ಲಿ ತಮಗೆ ಗೊತ್ತಿದೆ ಪ್ರೊಫೆಸರ್‌ಗಳು ಯಾವ ಜಾತಿಗೆ ಸೇರಿರುತ್ತಾರೋ ಅವರ ಜಾತಿಯವರಿಗೆ ಹೆಚ್ಚಿನ ಅಂಕಗಳನ್ನು ಕೊಡುತ್ತಿರುವುದನ್ನು ನೋಡುತ್ತಿದ್ದೀರಿ. ಇದರ ಬಗ್ಗೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ಸ್ವಾಮಿ, ಇವತ್ತು ಎಸ್.ಎಸ್.ಎಲ್ ಸಿ. ಬಗ್ಗೆ ಹೇಳುವುದಾದರೆ ನಮ್ಮ ಹಾಸನ ಜಿಲ್ಲೆಯಲ್ಲಿ ೧೬ ಪರ್ಸೆಂಟ್ ಮಾತ್ರ ತೇರ್ಗಡೆಯಾಗಿದ್ದಾರೆ. ಅದೇ ಬೀದರ್, ಗುಲ್ಬರ್ಗ ಮತ್ತು ರಾಯಚೂರು ಇಂಥಾ ಹಿಂದುಳಿದ ಭಾಗಗಳನ್ನು ತೆಗೆದುಕೊಂಡರೆ ಅಲ್ಲಿ ತೇರ್ಗಡೆಯಾಗತಕ್ಕದ್ದು ಬಹಳ ಕಡಿಮೆ ಇದೆ. ಅದು ಹಿಂದುಳಿದ ಪ್ರದೇಶವಾಗಿದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ಇಂಥಾದ್ದರಲ್ಲಿ ತಾವು ಅಂಕಗಳ ಆಧಾರದ ಮೇಲೆ ನೀವು ನೇಮಕಾತಿಗಳನ್ನು ಮಾಡಬೇಕು ಎನ್ನುವ ನಿರ್ಣಯವನ್ನು ಮಾಡುತ್ತೀರಿ. ತಾವು ಈ ರಾಜ್ಯದಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡತಕ್ಕದರ ಬಗ್ಗೆ ತಾವು

ಹೇಳಿದ್ದೀರಿ ಮತ್ತು ನಮ್ಮ ರಾಜ್ಯಪಾಲರ ಭಾಷಣದಲ್ಲಿಯೂ ಹೇಳಿಸಿದ್ದೀರಿ. ಅದಕ್ಕೆ ತಾವು ಹೊಣೆಯಾಗುವುದಿಲ್ಲವೇ ಎನ್ನುವ ಬಗ್ಗೆ ಈ ವಿಷಯವನ್ನು ತಮ್ಮ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಸ್ವಾಮಿ ಪಿ.ಎಸ್.ಸಿ. ಯವರಿಂದ ಕ್ಲಾಸ್ (೩) ಅಪಾಯಿಂಟ್‌ಮೆಂಟ್‌ನ್ನು ಹೊರಗಡೆ ತೆಗೆದ ಮೇಲೆ ಅವರಿಗೆ ಉಳಿಯುವ ಕೆಲಸವಾದರೂ ಏನು ಕ್ಲಾಸ್ (೧) ಮತ್ತು (೨) ಮಾತ್ರ ಉಳಿಯುತ್ತದೆ. ಅದಕ್ಕೆ ೭ ಜನ ಸದಸ್ಯರಿದ್ದಾರೆ. ಮತ್ತೆ ತಮ್ಮ ವರದಿಯಲ್ಲಿ ಹೇಳಿದ್ದೀರಿ ಈ ವರ್ಷ ಅಲ್ಲಿಗೆ ಹೆಚ್ಚಿನ ಸಿಬ್ಬಂದಿಯನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆಂದು. ಕೇವಲ ಕ್ಲಾಸ್ (೧) ಮತ್ತು (೨) ಪೋಸ್ಟ್‌ನ್ನು ಫಿಲ್‌ಅಪ್ ಮಾಡುವುದಕ್ಕೆ ಇನ್ನು ಹೆಚ್ಚಿನ ಸಿಬ್ಬಂದಿಯನ್ನು ಕೊಡುವ ಅವಶ್ಯಕತೆಯಾದರೂ ಏನಿತ್ತು. ಸ್ವಾಮಿ ಕೇರಳದಲ್ಲಿ ತಾವು ನೋಡಿದರೆ ಡ್ರೈವರ್ ಹುದ್ದೆಯಿಂದ ಹಿಡಿದು ಕ್ಲಾಸ್ (೩) ಮತ್ತು (೪) ವರೆಗಿನ ಹುದ್ದೆಗಳನ್ನು ಪಿ.ಎಸ್.ಸಿ. ಯವರೇ ನೇಮಕ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಅದು ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದೆ ಎಂದು ಕೇಳಿದ್ದೇನೆ. ಆದರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಪಿ ಎಸ್.ಸಿ. ಯಲ್ಲಿ ಯಾರೋ ಒಬ್ಬಿಬ್ಬರು ತಪ್ಪು ಮಾಡಿದ್ದಾರೆ ಎಂದು ಅದನ್ನು ರದ್ದು ಮಾಡತಕ್ಕದರ ಬಗ್ಗೆ ಸರ್ಕಾರ ನಿರ್ಣಯ ಮಾಡುತ್ತದೆಂದು ಹೇಳುವುದಾದರೆ ಅದು ಸಾಧುವಾದುದಲ್ಲ ಅದರಿಂದ ದುಷ್ಪರಿಣಾಮ ಉಂಟಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಮೊನ್ನೆಯ ಆರ್ಡರ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ ಈಗ ಸರ್ವಿಸ್ ಕಮಿಷನ್ ಮುಂದಿರತಕ್ಕ ಎಲ್ಲಾ ಅರ್ಜಿಗಳನ್ನು ರದ್ದುಪಡಿಸಿದ್ದೇವೆ ಎನ್ನತಕ್ಕ ನಿರ್ಣಯ ಮಾಡಿದ್ದಾರೆ. ಅಂದರೆ ಜೂನ್ ೨೭ ರಂದು ಹೊರಡಿಸಿರತಕ್ಕ ಹುಕುಂನಲ್ಲಿ ಪಿ.ಎಸ್.ಸಿ. ಮುಂದಿರತಕ್ಕ ಎಲ್ಲಾ ಅರ್ಜಿಗಳು ಏನಿವೆ ಯಾವ ಯಾವ ಹುದ್ದೆಗಳಿಗೆ ಇಂಟರ್‌ವ್ಯೂ ಕರೆದು ಸೆಲೆಕ್ಷನ್ ಮಾಡಿದ್ದಾರೆ, ಸೆಲೆಕ್ಟೆಡ್ ಕ್ಯಾಂಡಿಡೇಟ್ಸ್‌ಗೆ ಬಿಟ್ಟು ಬಾಕಿ ಎಲ್ಲಾ ಹುದ್ದೆಗಳಿಗೂ ಬಂದಿರತಕ್ಕ ಅರ್ಜಿಗಳು ಲ್ಯಾಪ್ಸ್ ಆಗಿದೆ ಎಂದು ಹೇಳಿದ್ದಾರೆ.

ಸ್ವಾಮಿ, ನನ್ನ ಬಳಿ ಅನೇಕ ಹುಡುಗರು ಬಂದು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದರು. ಇವೊತ್ತು ಎರಡು ಮೂರು ಲಕ್ಷ ಅರ್ಜಿಗಳನ್ನು ಸ್ವೀಕಾರ ಮಾಡಿದ್ದಾರೆ. ಮುವತ್ತು, ಮುವತ್ತೈದು ಲಕ್ಷ ರೂಪಾಯಿ ಅರ್ಜಿಯನ್ನು ಹಾಕತಕ್ಕ ಕಾಲದಲ್ಲಿ ಅದಕ್ಕೆ ನಿಗಧಿಮಾಡಿರತಕ್ಕ ಫೀಜು ಕೊಟ್ಟಿದ್ದಾರೆ. ಈಗ ಅದನ್ನು ರೀಫಂಡ್ ಮಾಡಬೇಕು. ಪುನಃ ಮತ್ತೆ ನೋಟಿಫೈ ಮಾಡಬೇಕು. ರಾಜ್ಯದಲ್ಲಿ ಹಲವಾರು ಹೈಸ್ಕೂಲುಗಳನ್ನು, ಕಾಲೇಜುಗಳನ್ನು ತೆರೆದಿದ್ದೀರಿ. ಅನೇಕ ಪಂಚಾಯ್ತಿಗಳಲ್ಲಿ ಸೆಕ್ರೆಟರಿಗಳಿಲ್ಲ. ಈ ಒಂದು ನಿರ್ಣಯದಿಂದ ತೊಂದರೆಗೀಡಾಗತಕ್ಕ ಪರಿಸ್ಥಿತಿ ಉಂಟಾಗಿದೆ ಎನ್ನುವುದನ್ನು ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. ಬಹುಶಃ ಸೇವಾ ನಿಯಮಗಳಲ್ಲಿ ಏನು ಮಾರ್ಪಾಡಾಗಿದೆ, ತಮ್ಮ ಆಸೆ ಆಕಾಂಕ್ಷೆ ಏನಿದೆ, ಈ ರಾಜ್ಯದಲ್ಲಿ ಸೇವಾ ನೇಮಕಾತಿಗಳಲ್ಲಿ ನಡೆಯತಕ್ಕ ಭ್ರಷ್ಟಾಚಾರ ತಡೆಗಟ್ಟಬಹುದು ಎಂಬ ಆಕಾಂಕ್ಷೆ ಏನಿದೆ, ಅದು ಅಂತಿಮವಾಗಿ ಆ ಆಕಾಂಕ್ಷೆ ನೆರವೇರುವುದಕ್ಕೆ ಸಾಧ್ಯವಿಲ್ಲ ಎಂದು ನಮ್ಮ ಅನುಭವದಿಂದ ಈ ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಈ ಸದನದಲ್ಲಿ ಸರ್ವೀಸ್ ಕಮಿಷನ್ ರಿಪೋರ್ಟ್ ಚರ್ಚೆ ಮಾಡುತ್ತಿದ್ದುವು ನನಗೆ ಜ್ಞಾಪಕ ಇಲ್ಲ, ಸುಮಾರು ಐದಾರು ವರ್ಷಗಳಿಗಿಂತಲೂ ಹೆಚ್ಚು ಕಾಲದ ಸರ್ವೀಸ್ ಕಮಿಷನ್ ವರದಿಯನ್ನು ಈ ಸದನದ ಮುಂದೆ ಇಡುತ್ತಿದ್ದರು. ಅದು ಸರ್ಕಾರದ ಜವಾಬ್ದಾರಿ. ಆ ಕೆಲಸವನ್ನು ಮಾಡಿದರೆ, ಬಹುಶಃ ಈ ಸಭೆಗೆ ಗೊತ್ತಾಗುತ್ತದೆ ಸರ್ವೀಸ್ ಕಮಿಷನ್‌ಗೂ ಮತ್ತು ಸರ್ಕಾರಕ್ಕೂ ಎಲ್ಲೆಲ್ಲಿ ಭಿನ್ನಾಭಿಪ್ರಾಯ ಇದೆ ಎಂದು. ಸರ್ವೀಸ್ ಕಮಿಷನ್ ನಿರ್ಣಯವನ್ನು ಸರ್ಕಾರ ಎಲ್ಲಿ ಮೊಟಕುಗೊಳಿಸಿದೆ, ಸರ್ವೀಸ್ ಕಮಿಷನ್ ಕೊಟ್ಟಂಥ ಅಡ್ವೈಸ್ ಎಲ್ಲಿ ನಿರಾಕರಣೆ ಮಾಡಿದ್ದಾರೆ ಎಲ್ಲಾ ವಿಷಯಗಳ ಬಗ್ಗೆ ಈ ಸದನದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇದು ಆರೇಳು ವರ್ಷಕ್ಕೆ ಸೀಮಿತವಾಗಿಲ್ಲ. ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದುದರಿಂದ, ಆ ಒಂದು ವರದಿಯನ್ನು ಮುಂದಿನ ವರ್ಷದಿಂದಲಾದರೂ ಈ ಸದನದಲ್ಲಿ ಇಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ತಾವು ದಕ್ಷ ಆಡಳಿತವನ್ನು ಕೊಡಬೇಕೆಂಬ ದೃಷ್ಟಿಯಿಂದ ಕೆಲವು ನಿರ್ಣಯ ಮಾಡಿದ್ದೀರಿ. ತಮ್ಮ ಆಡಳಿತದ ಆದರ್ಶ ಎಲ್ಲಾ ಆಡಳಿತ ಯಂತ್ರದಲ್ಲಿಯೂ ಪ್ರಸರಿಸಬೇಕಾಗುತ್ತದೆ. ತಮ್ಮ ಕಾರ್ಯದರ್ಶಿಗಳಿಗೆ ತಾವು ಆದೇಶ ಕೊಡತಕ್ಕದ್ದು ಸೆಕ್ರೆಟರಿಯೇಟ್ ಮಟ್ಟದಿಂದ. ಜಿಲ್ಲಾ ಮಟ್ಟದಿಂದ, ತಾಲ್ಲೂಕು ಮಟ್ಟದವರೆಗೆ ಪ್ರಸರಿಸಬೇಕು. ತಾವು ವಿಧಾನಸೌಧದಲ್ಲಿ ಬಾಗಿಲು ಹಾಕಿಸಿ ಮೂರು ನಾಲ್ಕು ದಿವಸ ಕಡತ ವಿಲೇವಾರಿ ಮಾಡಿದಿರಿ. ಹಾಗೆ ಪ್ರತಿ ತಿಂಗಳಿಗೆ ಒಂದು ದಿವಸ ಎಲ್ಲಾ ಕಡತಗಳ

ವಿಲೇವಾರಿ ಮಾಡತಕ್ಕ ಪ್ರಯತ್ನವನ್ನು ಮಾಡಿದ್ದೀರಿ. ಮತ್ತೊಂದು ಆದೇಶ ತಮ್ಮ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ಇದೆ. ಯಾವ ವ್ಯಕ್ತಿಯೇ ಅರ್ಜಿ ಕೊಟ್ಟರೂ ಹದಿನೈದು ದಿವಸದೊಳಗೆ ಆತನಿಗೆ ಎಂಡಾರ್ಸ್‌ಮೆಂಟ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೀರಿ. ಅದರ ಫಲ ಅವನಿಗೆ ಸಿಕ್ಕಿದೆಯೇ. ಅವನು ಯಾವ ಉದ್ದೇಶಕ್ಕೆ ಮನವಿ ಮಾಡುತ್ತಾನೆ, ಅದು ಅಂತಿಮ ತೀರ್ಮಾನವಾಗಿ ಅದರ ಫಲ ದೊರೆಯದೆ ಇದ್ದರೆ ಪ್ರಯೋಜನ ಏನು ? ಕ್ಲಿಯರೆನ್ಸ್ ಅಂದರೆ ಕೇವಲ ಒಂದು ಆಫೀಸಿನಿಂದ ಮತ್ತೊಂದು ಆಫೀಸಿಗೆ ಫೈಲುಗಳನ್ನು ರವಾನೆ ಮಾಡತಕ್ಕ ಕೆಲಸವೆ. ಕಡತ ವಿಲೇವಾರಿಯ ಒಂದು ದೃಷ್ಟಿಕೋನ ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ ತಾವು ಮೂರು ದಿವಸ ಜಿಲ್ಲಾಧಿಕಾರಿಗಳನ್ನು ಸಭೆಗೆ ಕರೆಸಿ ಆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದಿರಿ. ತಾವು ಎರಡು ದಿವಸ ಇಲ್ಲಿಯೇ ಕುಳಿತು ಯಾವ ಯಾವ ಇಲಾಖೆಗೆ ಕೋಆರ್ಡಿನೇಷನ್ ಇಲ್ಲವೋ ಅದರ ಬಗ್ಗೆ ಸಮಾಲೋಚನೆ ಮಾಡಿ ಕೆಲವು ಸ್ಪಷ್ಟ ಅಭಿಪ್ರಾಯಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳ, ಡಿವಿಜನಲ್ ಕಮಿಷನರ್ ಅವರ ಸಭೆಯನ್ನು ಉದ್ಘಾಟನೆ ಮಾಡಿ ಹೋಗತಕ್ಕ ಸಂಪ್ರದಾಯ ಇತ್ತು. ತಾವು ಅದನ್ನು ಮುರಿದು ಎರಡು ದಿವಸ ಅಲ್ಲೇ ಮೊಕ್ಕಾಂ ಮಾಡಿ ಅದಕ್ಕೆ ಸಂಬಂಧಪಟ್ಟ ಸರ್ಕಾರದ ಆದೇಶಗಳನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರೆಂದು ಕೇಳಿದ್ದೇನೆ. ತಾವು ಏನೇ ನಿರ್ಣಯವನ್ನು ತೆಗೆದುಕೊಂಡರು, ತಮ್ಮ ನಿರ್ಣಯ ರಾಜ್ಯಮಟ್ಟದಿಂದ ಹಿಡಿದು ತಾಲ್ಲೂಕುಮಟ್ಟದವರೆಗೆ ಹೋಗುವವರೆಗೆ ಎಷ್ಟರಮಟ್ಟಿಗೆ ಚಾಲನೆಯಾಗಿದೆ ಎಂದು ದಯಮಾಡಿ ಪರಿಶೀಲನೆ ಮಾಡಿ ನೋಡಬೇಕಾಗುತ್ತದೆ. ಅದು ದಕ್ಷತೆಯ ಮಾತು. ಇನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ನರಗುಂದ, ನವಲಗುಂದ ಘಟನೆಯಾದ ಮೇಲೆ ಹಲವಾರು ಘೋಷಣೆಗಳನ್ನು ಮಾಡಿದರು. ಆ ಘೋಷಣೆಗಳು ಕಾರ್ಯರೂಪಕ್ಕೆ ಬರಬೇಕಾದರೆ ಬಹಳ ದಿವಸಗಳು ಆದವು. ಸುಮಾರು ಮೂರು ತಿಂಗಳು ಆದಮೇಲೆ ಶ್ರೀಮಾನ್ ಬೊಮ್ಮಾಯಿ ನೇತೃತ್ವದ ಸಮಿತಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಮೇಲೆ ಆಗ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳನ್ನು ಕರೆಸಿ ಇವೊತ್ತು ಸಂಜೆಯೊಳಗೆ ಆರ್ಡರ್‌ನ್ನು ಜಾರಿಗೆ ಕೊಡಬೇಕೆಂದು ಹೇಳಿದ್ದರ ಪರಿಣಾಮ ಮೂರು ತಿಂಗಳು ವಿಳಂಬವಾದ ಮೇಲೆ ಅದನ್ನು ಕೊನೆಗೊಳಿಸಲಿಕ್ಕೆ ಅವಕಾಶವಾಯಿತು. ಇವೊತ್ತು ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳಿಗೆ, ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಏನಿದೆ ಜಿಲ್ಲಾ ಯೂನಿಟ್ ಅಧಿಕಾರಿಗಳು ಏನಿದ್ದಾರೆ ಅವರು ಈ ದಿಸೆಯಲ್ಲಿ ತಮ್ಮ ದಕ್ಷತೆಯನ್ನು ರೂಪಿಸಿಕೊಳ್ಳತಕ್ಕಂತಾದ್ದರಲ್ಲಿ ಎಷ್ಟು ಪ್ರಮಾಣದಲ್ಲಿ ಕೆಲಸ ಮಾಡಿದ್ದಾರೆಂದು ತಾವು ವೀಕ್ಷಿಸಬೇಕಾದ ಸನ್ನಿವೇಶ ಇದೆ ಎಂದು ಹೇಳುತ್ತೇನೆ. ಇನ್ನು ತಾವು ಈ ಟ್ರಾನ್ಸ್‌ಫರ್ ಬಗ್ಗೆ ಬಿಗಿಯಾದ ಕ್ರಮವನ್ನು ತೆಗೆದುಕೊಂಡಿದ್ದೀರಿ. ಆದರೆ ತಾವು ತೆಗೆದುಕೊಂಡಂಥ ಬಿಗಿಯಾದ ನಿಲುವನ್ನು ಎಲ್ಲರೂ ಮೆಚ್ಚಿಕೊಳ್ಳಬೇಕಾಗುತ್ತದೆ. ಆ ಸ್ಥಾನದಲ್ಲಿ ಯಾರೇ ಮುಖ್ಯಮಂತ್ರಿಗಳು ಇದ್ದರೂ ಇಷ್ಟು ಕಠಿಣವಾದ ನಿಲುವು ತೆಗೆದುಕೊಳ್ಳಲಿಕ್ಕೆ ಆಗುತ್ತಿರಲಿಲ್ಲ. ಆ ದಿಸೆಯಲ್ಲಿ ತಾವು ತೆಗೆದುಕೊಂಡಿದ್ದೀರಿ. ಲೋಯರ್ ಲೆವೆಲ್‌ನಲ್ಲಿರತಕ್ಕ ಕೆಲವು ಅಧಿಕಾರಿಗಳನ್ನು ವರ್ಗ ಮಾಡುತ್ತೀರಿ. ಎರಡು ವರ್ಷದ ಮೇಲೆ ಇರತಕ್ಕವರನ್ನು ಮಾಡುತ್ತೀರಿ. ಅವರು ಸರಿಯಾದ ನಿರ್ಣಯ ತೆಗೆದುಕೊಳ್ಳದೇ ಹೋದರೆ ಆಗ ಆ ಒಂದು ವರ್ಗಗಳನ್ನು ಮಾರ್ಪಾಡು ಮಾಡುವುದಕ್ಕೆ ಮುಖ್ಯ ಮಂತ್ರಿಗಳ ಬಳಿಗೆ ಬರಬೇಕು. ಈ ರೀತಿ ಆದರೆ ಅಧಿಕಾರದಲ್ಲಿ ಸಾಕಷ್ಟು ಅತೃಪ್ತಿ ಬರುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ತಾವು ತೆಗೆದುಕೊಂಡಿರತಕ್ಕ ನಿಲುವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕೆಳಗಡೆ ಅಡ್ಮಿನಿಸ್ಟ್ರೇಟಿವ್ ಆಫೀಸರ್ ಏನಿದ್ದಾರೆ ಅವರು ವರ್ಗ ಮಾಡತಕ್ಕ ಕಾಲದಲ್ಲಿ ಒಂದು ಸ್ಪಷ್ಟ ಆದೇಶ ಕೊಟ್ಟಿದ್ದೀರಿ. ಒಂದು ವರ್ಷಕ್ಕೆ ಒಳಪಟ್ಟು ಕಡಿಮೆ ಅವಧಿಯಲ್ಲಿ ಇದ್ದವರನ್ನು ಮಾಡಬಾರದು ಎಂದು ಹೇಳಿದ್ದೀರಿ. ಆದರೆ ಕೆಲವರನ್ನು ವರ್ಗ ಮಾಡತಕ್ಕ ಸನ್ನಿವೇಶ ಬಂದಿದೆ. ಈಗ ತಾವು ತೆಗೆದುಕೊಂಡಿರತಕ್ಕ ನಿರ್ಣಯವನ್ನು ಸರಿಯಾದ ರೀತಿಯಲ್ಲಿ ಪಾಲನೆ ಮಾಡತಕ್ಕ ಹಿರಿಯ ಅಧಿಕಾರಿಗಳು ಏನಿದ್ದಾರೆ ಅವರಿಗೆ ತಾವು ಆದೇಶ ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ನಾವೆಲ್ಲಾ ಜನತಂತ್ರದ ವ್ಯವಸ್ಥೆಯಲ್ಲಿದ್ದೇವೆ. ವರ್ಗದ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದು. ಒಬ್ಬ ವ್ಯಕ್ತಿ, ಒಬ್ಬ ನೌಕರ, ಒಂದು ವರ್ಷಕ್ಕೆ ಒಳಪಟ್ಟು ನಿವೃತ್ತನಾಗುವಂತಾದ್ದು ಇದ್ದರೆ, ಅವನನ್ನು ವರ್ಗ ಮಾಡಿದರೆ ಅದನ್ನು ನಾವು ಹೇಳಬೇಕಾಗುತ್ತದೆ. ಅದಕ್ಕೋಸ್ಕರ ನಾವು ಭಯಪಡಬೇಕಾಗಿಲ್ಲ. ಎಲ್ಲಿ ಅನಾವಶ್ಯಕವಾಗಿ ಆಗಿರುತ್ತದೆ ಅಂತಾದ್ದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ನಾವು ಹಿಂದೆ ಬೀಳಬೇಕಾದ್ದೇನು ಇಲ್ಲ. ಇದು ರೆಪ್ರಸೆಂಟೇಟೀವ್ ಗವರ್ನ್‌ಮೆಂಟ್ ನಾವೆಲ್ಲಾ ರೆಪ್ರಸೆಂಟೇಟೀವ್ ಇದ್ದೇವೆ. ಏನೋ ಡಿಕ್ಟೇಟೋರಿಯಲ್ ಗವರ್ನ್‌ಮೆಂಟ್ ಇದ್ದರೆ ಹೇಳಲಿಕ್ಕೆ ಆಗುವುದಿಲ್ಲ. ನಾವು ಆ ಕಾರ್ಯದಲ್ಲಿ ಹಿಂದೆ ಬೀಳಲಿಕ್ಕೆ ಹೋಗುವುದಿಲ್ಲ.

ಆದರೆ ಈಗ ಈ ವಿಷಯದಲ್ಲಿ ನಾವು ಹಿಂದೆ ಬೀಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ನಾವು ಒಂದು ವಿಷಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದು ಯಾವುದೆಂದರೆ ನಮ್ಮ ವಿಧಾನಸೌಧದ ಮಟ್ಟದಲ್ಲಿ ವರ್ಗಾವಣೆ ಮಾಡುವಾಗ ಅಥವಾ ಪ್ರೊಮೋಷನ್ ಕೊಡುವಾಗ ಹಣದ ಕೈವಾಡ ನಡೆಯುವುದಿಲ್ಲ ಎಂಬುದನ್ನು ನನಗಿರತಕ್ಕ ಅನುಭವದಲ್ಲಿ ಹೇಳುತ್ತಿದ್ದೇನೆ. ಆದರೆ ಕೆಳಗಡೆ ಇರತಕ್ಕ ಅಧಿಕಾರಿಗಳು ಯಾರಿದ್ದಾರೆ ಅವರು ಮಾಡಿಕೊಂಡಿದ್ದರೆ ಅದು ನನಗೆ ಗೊತ್ತಿಲ್ಲ. ಅಂತೂ ನಮ್ಮ ವಿಧಾನಸೌಧದ ಮಟ್ಟದಲ್ಲಿ ಹಣದ ಕೈವಾಡ ನಡೆಯುವುದಿಲ್ಲ. ಈ ಮಾತನ್ನು ನಾನು ನೇರವಾಗಿ ಈ ಸದನದ ಮುಂದೆ ಹೇಳುತ್ತಿದ್ದೇನೆ. ಹಿಂದೆ ಒಂದು ಕಾಲದಲ್ಲಿ ನಡೆಯಿತು. Cases of extensions of appoinments on contract basisನಲ್ಲಿ ೩-೪ ಲಕ್ಷ ರೂ. ಬಟವಾಡೆ ಆಯಿತು. ಅಂಥ ನಿದರ್ಶನಗಳು ಇವತ್ತು ನಮ್ಮ ಕಣ್ಣು ಮುಂದೆ ಕಾಣುತ್ತಿಲ್ಲ. ಈ ಮಾತನ್ನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ನಾನು ಕಣ್ಣಾರೆ ಕಂಡಿದ್ದನ್ನು ಹೇಳುತ್ತಿದ್ದೇನೆ. ಎರಡೂ ದೃಶ್ಯಗಳನ್ನೂ ನೋಡಿದ್ದೇನೆ. ೧೯೫೬ರಲ್ಲಿ ಸ್ಟೇಟ್ ರೀ ಆರ್ಗನೈಸೇಷನ್ ಆದಮೇಲೆ ಪ್ರೊಮೋಷನ್ ಕೊಡುವುದಕ್ಕಾಗಿ ಒಂದು ಸೀನಿಯಾರಿಟಿ ಲಿಸ್ಟ್ ತಯಾರಾಯಿತು. ಅದನ್ನು ಅಂತಿಮವಾಗಿ ನಿರ್ಣಯ ಮಾಡುವುದಕ್ಕೆ ನಮ್ಮ ಜಿ.ಎ.ಡಿ.ಯವರಿಂದ ಇದುವರೆಗೂ ಸಾಧ್ಯವಾಗಿಲ್ಲ. ಇದರ ಪರಿಣಾಮವಾಗಿ ಸರ್ಕಾರಿ ನೌಕರ ವೃಂದದಲ್ಲಿ ಸಾಕಷ್ಟು ಅಶಾಂತಿಗೆ ಅವಕಾಶವನ್ನು ಮಾಡಿಕೊಟ್ಟಿದೆ. ಇವತ್ತೂ ಕೂಡ "Direct recruites and promotees" ಏನಿದೆ ಇದು ಒಂದು ಗುಂಪು ಹೋರಾಟ. ಒಂದು ಗುಂಪು ಭವಾನಿ ಜಡ್ಜ್‌ಮೆಂಟ್ ತೆಗೆದುಕೊಂಡು ಮಾತನಾಡುತ್ತಾರೆ, ಇನ್ನೊಂದು ಗುಂಪು ಪಾಂಡೆ ಜಡ್ಜ್‌ಮೆಂಟ್ ಅಥವಾ ರಜಾಕ್ ಜಡ್ಜ್‌ಮೆಂಟ್ ಎಂದು ಮಾತನಾಡುತ್ತಾರೆ. ಹೀಗೆ ಅವರವರಿಗೆ ಅನುಕೂಲವಾಗುವಂಥ ದೃಷ್ಟಿಯಿಂದ ಅವರವರ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ಅಂತಿಮವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಈ ಸರ್ಕಾರಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಇದರ ಪರಿಣಾಮವಾಗಿ ದಕ್ಷ ಸ್ವಚ್ಛ, ಪ್ರಾಮಾಣಿಕ ಆಡಳಿತವನ್ನು ಜನರಿಗೆ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಯಾರಿಗೆ ನ್ಯಾಯವಾಗಿ ಪ್ರೊಮೋಷನ್ ಸಿಕ್ಕಬೇಕಾಗಿತ್ತೋ ಅವರಿಗೆ ಸಿಕ್ಕದಿದ್ದರೆ ಅವರು ಹೇಗೆ ತಾನೆ ಪ್ರಾಮಾಣಿಕವಾಗಿ, ನಿಷ್ಠೆಯಿಂದ, ಆಸಕ್ತಿಯಿಂದ ಕೆಲಸಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ?. ಸಾಮಾನ್ಯ ಆಡಳಿತದಲ್ಲಿ ಈ ಕೆಲವು ಲೋಪದೋಷಗಳು ಏನಿವೆ ಅವನ್ನು ತಿದ್ದುವುದಕ್ಕೆ ಪ್ರಯತ್ನ ಮಾಡದಿದ್ದರೆ ಬಹುಶಃ ನೀವು ಯಾವ ಒಂದು ಗುರಿಯನ್ನು ಇಟ್ಟುಕೊಂಡು ಶುದ್ಧ ಆಡಳಿತವನ್ನು ಜನರಿಗೆ ಕೊಡುತ್ತೇವೆಂದು ಹೇಳುತ್ತಿದ್ದೀರಿ ಆ ಒಂದು ಗುರಿಯನ್ನು ನೀವು ಖಂಡಿತ ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಮಾತನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಲಿಕ್ಕೆ ಇಚ್ಛಿಸುತ್ತೇನೆ.

MR. SPEAKER. In the Chair.

ಮಾನ್ಯ ಸಭಾಧ್ಯಕ್ಷರೆ, ಒಂದು ಉದಾಹರಣೆ ಹೇಳುವುದಾದರೆ ೧೯೬೨ರಲ್ಲಿ ತೆಗೆದುಕೊಂಡ ಗೆಜೆಟೆಡ್ ಪ್ರೊಬೇಷನರ್ಸ್ ಏನಿದ್ದಾರೆ ಅವರಿಗೆ ಪ್ರೊಮೋಷನ್ ಕೊಡತಕ್ಕ ವಿಚಾರದಲ್ಲಿ ೧೯೭೫ರಲ್ಲಿ ಕರ್ನಾಟಕ ಹೈ ಕೋರ್ಟಿನವರು ಒಂದು ನಿರ್ಣಯವನ್ನು ಮಾಡಿದರೂ ಕೂಡ ಇದುವರೆಗೂ ಅವರಿಗೆ ಪ್ರೊಮೋಷನ್ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅವರ ಕೈ ಕೆಳಗೆ ೩ನೇ ದರ್ಜೆ ನೌಕರರಾಗಿ ಕೆಲಸಮಾಡುತ್ತಿದ್ದವರು ಇವತ್ತು ಜಾಯಿಂಟ್ ಡೈರೆಕ್ಟರ್ ಆಗಿ ಕೆಲಸಮಾಡುತ್ತಿರುವುದನ್ನು ನೀವು ನೋಡಬಹುದು. ಇನ್ನೂ ಎಷ್ಟು ಕಾಲದವರೆಗೆ ಈ ಒಂದು ಗೊಂದಲ ಈ ರಾಜ್ಯದಲ್ಲಿ ಮುಂದುವರಿಯಬೇಕು. ಸಮಾಜಕ್ಕೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಅದರಲ್ಲೂ ತಮ್ಮ ಮೇಲೆ ರಾತ್ರಿ ಏನು ಮಾತನಾಡಿಕೊಳ್ಳುತ್ತಿದ್ದಾರೆಂದರೆ, ಈ ರಾಜ್ಯದಲ್ಲಿ ಬ್ರಾಹ್ಮಣ ಮುಖ್ಯ ಮಂತ್ರಿಯಾಗಿದ್ದಾರೆ, ದೇವೇಗೌಡರು ನಿಷ್ಕ್ರಿಯರಾಗಿ ಕೂತಿದ್ದಾರೆಂದು ಬೀದಿಯಲ್ಲಿ ಚರ್ಚೆ ನಡೆಯುತ್ತಿದೆ. ಒಂದೆರಡು ಪತ್ರಿಕೆಗಳಲ್ಲೂ ಬರೆದಿದ್ದಾರೆ. ಆದರೆ ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರವನ್ನು ನಾನು ಹೇಳುವುದಕ್ಕೆ ಹೋಗುವಂಥ ಪ್ರಮೇಯ ಏನೂ ಇಲ್ಲ. ಚರ್ಚೆ ಮಾಡುವ ಅವಶ್ಯಕತೆಯೂ ಕೂಡ ಇಲ್ಲ. ಒಂದೇ ಒಂದು ಗೌನಮೆಂಟ್ ಆರ್ಡರ್‌ನಲ್ಲಿ ೪ ಪ್ರೊಮೋಷನ್‌ಗಳನ್ನು ೩ನೇ ದರ್ಜೆಯವರಿಗೆ ಮಾಡಿದ್ದಾರೆ. ಸಾಮಾಜಿಕ ನ್ಯಾಯವನ್ನು ತಾವು ಕೊಡಬೇಕು. ನಿಮ್ಮ ವರ್ಗದವರಿಗೆ, ಸಮಾಜದಲ್ಲಿ ಹಿಂದುಳಿದವರಿಗೆ ೩೦ ವರ್ಷದಿಂದ ಆಡಳಿತದ ದೋಷದಿಂದ ಈ ಒಂದು ಅನ್ಯಾಯವಾಗು

ತ್ತಿದೆ. ಇದನ್ನು ತಾವು ಸರಿಪಡಿಸಬೇಕು. ಆದರೆ ಈ ಆರ್ಡರ್ ಪಿಡಿ ೪೦೭ ಡಿಪಿಐ ೭೬, ೧೮ನೇ ಜುಲೈ ೧೯೭೭ರಲ್ಲಿ ಒಂದೇ ದಿನದಲ್ಲಿ ಒಬ್ಬನೇ ಅಧಿಕಾರಿಗೆ ೪ ಪ್ರೊಮೋಷನ್ ಕೊಡಲಾಗಿದೆ. ಇದನ್ನು ನಿಮ್ಮ ಸರ್ಕಾರ ಸಮರ್ಥನೆ ಮಾಡುವುದಾದರೆ ಮಾಡಿ. ಇದರಲ್ಲಿ ಯಾವ ಯಾವ ಸಮಾಜಕ್ಕೆ ಸೇರಿದವರು ಇದ್ದಾರೆಂಬುದನ್ನು ನಾನು ನೋಡಿದ್ದೇನೆ. ಇದರಲ್ಲಿ ನಿಮ್ಮ ಜವಾಬ್ದಾರಿ ಬಹಳ ಇದೆ. ಆ ಸ್ಥಾನದಲ್ಲಿ ಕೂತಿರತಕ್ಕ ಈ ಸನ್ನಿವೇಶದಲ್ಲಿ ತಮ್ಮವರು ಏನೋ ಕ್ಲಿಕ್, ಕ್ಲಿಕ್ ಎಂದು ಹೇಳುತ್ತಿದ್ದರು, ಆದರೆ ತಾವು ಇದರ ಬಗ್ಗೆ ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ, ಸೆಕ್ರೆಟರಿಯವರೇ ಆಗಲಿ, ಅಡಿಷನಲ್ ಸೆಕ್ರೆಟರಿಯವರೇ ಆಗಲಿ, ಅಥವಾ ಬೇರೆ ಯಾವ ಹಿರಿಯ ಅಧಿಕಾರಿಯೇ ಆಗಿರಲಿ ಅವರು ಪ್ರಾಮಾಣಿಕವಾಗಿರಬೇಕು. ಅದು ಬಿಟ್ಟು ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಅವರು ಈ ಕೆಲಸವನ್ನು ಮಾಡುವುದಾದರೆ ಅದಕ್ಕೆ ಸಂಪೂರ್ಣವಾಗಿ ಮಾನ್ಯ ಮುಖ್ಯ ಮಂತ್ರಿಯವರೇ ಹೊಣೆಗಾರರೆಂದು ಹೇಳಬೇಕಾಗುತ್ತದೆ. ಒಬ್ಬೊಬ್ಬ ಅಧಿಕಾರಿಯೂ ಒಂದೊಂದು ಸನ್ನಿವೇಶದಲ್ಲೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ತಮಗೆ ಇಷ್ಟ ಬಂದ ರೀತಿಯಲ್ಲಿ ಮಾರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಯಾವುದೋ ಒಂದು ಹುದ್ದೆಯನ್ನು ಯಾರೋ ತಮಗೆ ಬೇಕಾದವನೊಬ್ಬನಿಗೆ ಕೊಡಬಾರದೆಂದು ಇಚ್ಛೆ ಇದ್ದರೆ ತಕ್ಷಣ ರೂಲ್ಸ್‌ನ್ನು ಬದಲಾವಣೆ ಮಾಡಿ ಬೇರೆ ಎಲ್ಲಿಂದಲೋ ಒಬ್ಬ ಐ.ಎ.ಎಸ್. ಅಧಿಕಾರಿಯನ್ನೋ, ಐ.ಪಿ.ಎಸ್. ಅಧಿಕಾರಿಯನ್ನೋ ತಂದು ಅಲ್ಲಿ ಕೂಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ, ಈ ರೀತಿ ಮಾಡುವುದಾದರೆ ಆಡಳಿತದಲ್ಲಿ ಇನ್ನು ಯಾವ ರೀತಿ ದಕ್ಷತೆ, ಪ್ರಾಮಾಣಿಕತೆ ಉಳಿಯುತ್ತದೆ? ಐ.ಪಿ.ಎಸ್. ಅಧಿಕಾರಿಗಳನ್ನು ತಮ್ಮ ಕಾಲದಲ್ಲಿ ಅನೇಕ ದೊಡ್ಡ ಹುದ್ದೆಗಳಿಗೆ ನೇಮಕ ಮಾಡಿದ್ದೀರಿ. ಆದರೆ, ಈ ಐ.ಪಿ.ಎಸ್. ಅಧಿಕಾರಿಗಳನ್ನು ಯಾವ ರಂಗದಲ್ಲಿ ತರಬೇತಿಯನ್ನು ಕೊಟ್ಟಿದ್ದೀರಿ? ಅಂದರೆ ಇಲ್ಲಿ ಐ.ಪಿ.ಎಸ್. ಅಧಿಕಾರಿಗಳಿಗೆ ಜನರಲ್ ಅಡ್ಮಿನಿಸ್ಟ್ರೇಷನ್‌ನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳುತ್ತಿಲ್ಲ. ಅವರು ಆಡಳಿತವನ್ನು ನಡೆಸುತ್ತಾರೆ. ಐ.ಪಿ.ಎಸ್. ಅಧಿಕಾರಿಗಳನ್ನು ಐ.ಎ.ಎಸ್. ಅಧಿಕಾರಿಗಳ ಜಾಗದಲ್ಲಿ ನೇಮಕ ಮಾಡುವುದಾದರೆ, ಐ.ಎ.ಎಸ್. ಅಧಿಕಾರಿಗಳನ್ನು ಐ.ಪಿ.ಎಸ್. ಅಧಿಕಾರಿಗಳ ಜಾಗದಲ್ಲಿ ಏತಕ್ಕೆ ನೇಮಕ ಮಾಡಬಾರದು ? ಹಿಂದೆ ಮಾನ್ಯ ದೇವರಾಜ ಅರಸ್‌ರವರು ತಪ್ಪನು ಮಾಡಿರಬಹುದು, ಆದರೆ ಅದೇ ತಪ್ಪನ್ನೇ ತಾವೂ ಏತಕ್ಕೆ ಮಾಡಬೇಕು. ನಮ್ಮ ರಾಜ್ಯದಲ್ಲಿರತಕ್ಕ ಅನೇಕ ಹುದ್ದೆಗಳನ್ನು ಅಪ್‌ಗ್ರೇಡ್ ಮಾಡಿ ಸೂಪರ್ ಟೈಂ ಸ್ಕೇಲ್ ಮಾಡುವುದಕ್ಕೆ ಆಗ ಸಾಕಷ್ಟು ಸಮಯ ಆಯಿತು.

MR. SPEAKER.—We took a decision that the hon. Chief Minister will reply in the morning. There are some more friends who want to speak.

ಶ್ರೀ ಹೆಚ್. ಡಿ. ದೇವೇಗೌಡ.—ಆದಷ್ಟೂ ಇದನ್ನು ಕಡಿಮೆ ಮಾಡುತ್ತೀರಾ? ಇನ್ನು ಒಂದೆರಡು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಈ ಐ.ಎ.ಎಸ್. ಸೂಪರ್ ಟೈಂ ಸ್ಕೇಲ್ ಅಧಿಕಾರಿಗಳು ಎಷ್ಟಿರಬೇಕು ಎಂಬುದನ್ನು ನೀವು ನಿರ್ಣಯ ಮಾಡಿಲ್ಲ. ಕೆ.ಎ.ಎಸ್. ನಲ್ಲಿ ೨೫ ಜನರಿಗೆ ಕೊಟ್ಟರೆ ಯು.ಪಿ.ಎಸ್.ಸಿ ನಲ್ಲಿ ಮೂರರನೆ ಒಂದು ಭಾಗ ಅಥವ ಮೂರರನೆ ಎರಡು ಭಾಗ ಆಗಿದೆ.

೬–ಪಿ ಎಂ.

ಸರ್ಕಾರ ಹಿಂದೆ ಶ್ರೀಮಾನ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಕಮಿಟಿ ಎಂದು ಮಾಡಿದ್ದರು. ಅವರು ಸಲ್ಲಿಸಿರುವ ರಿಪೋರ್ಟನ್ನು ಓದಿದ್ದೇನೆ. ಅವರು ತಮ್ಮ ವರದಿಯಲ್ಲಿ ೫೦–೫೦ ಪ್ರಮೋಷನ್ಸ್ ಕೊಡಬೇಕೆಂದು ವರದಿಯಲ್ಲಿ ಕೊಟ್ಟಿದ್ದಾರೆ. ಸ್ವಾಮಿ ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕೆ.ಎ.ಎಸ್. ಅಧಿಕಾರಿಗಳಿಗೆ ಟೈಮ್ ಸ್ಕೇಲ್ ಪ್ರಮೋಷನ್ ಇಲ್ಲ, ಅದೇ ಐ.ಎ.ಎಸ್. ಅಧಿಕಾರಿಗಳಿಗೆ ೫ ವರ್ಷ ಸರ್ವೀಸ್ ಆದರೆ ಸಾಕು ಡಿವಿಷನಲ್ ಕಮಿಷನರ್, ಡೆಪ್ಯುಟಿ ಕಮಿಷನರ್ ಈ ರೀತಿಯಾಗಿ ಸೀನಿಯಾರಿಟಿ ಮೇಲೆ ಕಮಿಷನರ್ ಪ್ರಮೋಷನ್‌ಗಳನ್ನು ಕೊಡುತ್ತಾ ಹೋಗುತ್ತೀರಿ. ಕೆ.ಎ.ಎಸ್. ಅಧಿಕಾರಿಗಳು ೧೦ ವರ್ಷಗಳು ಸರ್ವೀಸ್ ಮಾಡಿದರೂ ಪ್ರಮೋಷನ್ಸ್ ಇರುವುದಿಲ್ಲ'. ಈ ಅಧಿಕಾರಿಗಳನ್ನು ಇಷ್ಟೊಂದು ಅನಾವಶ್ಯಕವಾಗಿ ಕಾಣುವುದೇ ಇವರಲ್ಲೂ ದಕ್ಷ ಅಧಿಕಾರಿಗಳು ಇರುತ್ತಾರೆ, ಏತಕ್ಕೆ ಇವರಿಗೆ ಪ್ರಮೋಷನ್ಸ್ ಕೊಡಬಾರದು, ದಯವಿಟ್ಟು

ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು, ಇವರ ಪ್ರಮೋಷನ್ ರೇಷಿಯೋವನ್ನು ಹೆಚ್ಚು ಮಾಡಬೇಕು, ಇವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವ ಬಗ್ಗೆ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸರ್ಪ್ರೈಸ್ ಚೆಕ್ ಮಾಡಲು ಅನೇಕ ಕಾರ್ಪೊರೇಷನ್‌ಗಳಿಗೆ ಹೋದಿರಿ, ಅನೇಕ ಇಲಾಖೆಗಳಿಗೆ ತಾವೇ ಹೋಗಿ ಸರ್‌ಪ್ರೈಸ್ ವಿಸಿಟ್ ಮಾಡಿದಿರಿ, ತಮ್ಮ ಹಾಗೆಯೇ ತಮ್ಮ ಸಚಿವರು ಎಷ್ಟು ಜನ ಸರ್‌ಪ್ರೈಸ್ ಚೆಕ್ ಮಾಡಿದ್ದಾರೆ, ಸೆಕ್ರೆಟರಿಗಳು ಎಷ್ಟು ಜನ ಸರ್‌ಪ್ರೈಸ್ ವಿಸಿಟ್ ಮಾಡಿದ್ದಾರೆ, ಡಿವಿಜನಲ್ ಕಮಿಷನರ್ ಎಷ್ಟು ಜನ ಸರ್‌ಪ್ರೈಸ್ ಚೆಕ್ ಮಾಡಿದ್ದಾರೆ ಎಂದು ಕೇಳುತ್ತೇನೆ. ಸಾಮಾನ್ಯ ಆಡಳಿತದ ದಕ್ಷತೆಯನ್ನು ಹೆಚ್ಚು ಮಾಡಬೇಕಾದರೆ ಇದೆಲ್ಲ ಬಹಳ ಅವಶ್ಯಕತೆ ಇರುತ್ತದೆ, ನಿಮ್ಮ ಹಾಗೆಯೇ ಬಾಕಿಯವರು ಕೆಲಸ ಮಾಡದಿದ್ದರೆ ಬಹುಶಃ ನೀವು ಏನು ಗುರಿಯನ್ನು ಸಾಧಿಸಬೇಕೆಂದು ಪ್ರಯತ್ನ ಮಾಡಿರುತ್ತೀರಿ ಆ ಗುರಿಯನ್ನು ಸಾಧಿಸಲಿಕ್ಕೆ ಸಾಧ್ಯವೇ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಾನು ಪೋಲಿಸ್ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ೧೪ ಸಾವಿರ ಜನಕ್ಕೆ ಒಬ್ಬ ಕಾನ್‌ಸ್ಟೇಬಲ್ ಇದ್ದಾನೆ ಎಂದು. ಈವತ್ತು ನಮ್ಮ ಸಮಾಜದಲ್ಲಿ ಹಲವಾರು ತರಹ ವಾತಾವರಣ ನಿರ್ಮಾಣವಾಗಿದೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೆಲವು ನಿಮ್ಮ ಕೈಗೆ ಎಟುಕದ ಸಮಸ್ಯೆಗಳು ಉದ್ಭವವಾಗಿರುತ್ತದೆ. ಹಿಂದಿನವರು ಮಾಡಿದ ತಪ್ಪುಗಳನ್ನೇ ಎತ್ತಿ ಮಾತನಾಡುತ್ತಿರುವಿರಿ. ಹಿಂದೆ ಸೀಲಿಂಗ್ ೪೦ ಕೋಟಿ ರೂಪಾಯಿಗಳ ಆಸ್ತಿವರೆಗೆ ಇತ್ತು. ಈಗ ಅದನ್ನು ಒಂದೂಕಾಲ್ ಕೋಟಿಗೆ ಸೀಲಿಂಗ್ ಮಾಡಿದ್ದೀರಿ. ಹಿಂದಿನಿಂದಲೂ ನಡೆದುಕೊಂಡು ಬಂದ ಒಂದು ಹಳೇ ರೋಗವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅಧಿಕಾರಿಗಳಲ್ಲಿಯೇ ಒಂದು ರೀತಿಯಾದ ಅತೃಪ್ತಿ ಉಂಟಾಗಿರುತ್ತದೆ. ಅದು ಪೋಲಿಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳ ಮಟ್ಟದಲ್ಲಿಯೇ ಇರಬಹುದು. ಬೇರೆ ಇನ್ನಾವುದೇ ಹಿರಿಯ ಅಧಿಕಾರಿಗಳ ಮಟ್ಟದಲ್ಲಿಯೇ ಇರಬಹುದು. ತಾವು ಸಿ.ಓ.ಡಿ. ಬಗ್ಗೆ ಒಂದು ಮಾತನ್ನು ಹೇಳಿದಿರಿ. ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ಸಿ.ಓ.ಡಿ. ಬಗ್ಗೆ ಹೇಳುವಾಗ ಅದರಲ್ಲೂ ಬಹಳ ವಿಶೇಷವಾಗಿ ಎಲ್ಲ ಅಧಿಕಾರಿಗಳನ್ನು ಸಿ.ಓ.ಡಿ.ಗೆ ರೆಫರ್ ಮಾಡಬೇಕೆಂದು ಒತ್ತಾಯ ಬರುತ್ತಿದೆ ಎನ್ನುವ ಮಾತನ್ನು ಹೇಳಿರುತ್ತೀರಿ. ನಮ್ಮ ರಾಜ್ಯದಲ್ಲಿ ದಕ್ಷ ಅಧಿಕಾರಿಗಳು ಇದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ದಕ್ಷ ಅಧಿಕಾರಿಗಳು ಎಂದರೆ ಕೇವಲ ಯಾವುದೋ ಒಂದೇ ಒಂದು ಕೆಲಸಕ್ಕೆ ಅವರ ದಕ್ಷತೆಯನ್ನು ಪ್ರಶಂಸೆ ಮಾಡಲಿಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಆರ್ಮುಗಮ್‌ರವರು ಪ್ರಶ್ನೆ ಮಾಡಿದಾಗ ಒಬ್ಬ ಮಂತ್ರಿಯನ್ನು ಒಬ್ಬ ಸಿ.ಓ ಡಿ. ಆಫೀಸರ್ ಪ್ರಾಸಿಕ್ಯೂಟ್ ಮಾಡಬಹುದೇ, ಕಾನ್ಸ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಏತಕ್ಕೆ ಮಾಡಬಾರದು. ಮಂತ್ರಿಯವರನ್ನು ಪ್ರಾಸಿಕ್ಯೂಟ್ ಮಾಡಲು ಆಸಕ್ತಿಯನ್ನು ವಹಿಸಿದಂಥ ಅಧಿಕಾರಿಗಳು ಎಷ್ಟು ಸಿ.ಓ.ಡಿ. ಕೇಸಸ್‌ಗಳನ್ನು ರೆಫರ್ ಮಾಡಿದ್ದಾರೆ. ಒಂದೂಕಾಲು ವರ್ಷದಲ್ಲಿ ಎಂದು ಹೇಳಿದಿರಲ್ಲ. ಈ ಒಂದೂ ಕಾಲ್ ವರ್ಷದಲ್ಲಿ ಏತಕ್ಕೆ ಕ್ರಮ ತೆಗೆದುಕೊಳ್ಳುವುದಕೇ ಪ್ರಯತ್ನ ಮಾಡಲಿಲ್ಲ. ಇದು ಸಂಶಯಕ್ಕೆ ಎಡೆ ಕೊಡುತ್ತದೆ. ಈವತ್ತಿನ ದಿವಸ There are internal bickerings in the administration ಬಿ.ಜೆ.ಪಿ. ಯವರೆಂದು ವರ್ಗ ಮಾಡುವುದಕ್ಕೆ ಹೋಗಲಿಲ್ಲ. There are two rival groups among senior officers. ಮಂತ್ರಿಗಳ ಮೇಲೆ ಚಾರ್ಜ್‌ಷೀಟ್ ಕೊಡುವುದಕ್ಕೆ ಆಸಕ್ತಿ ನಡೆದಿದೆ ಎಂದು ಆ ಸಂದರ್ಭದಲ್ಲಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಅಲ್ಲದೆ ಹಲವಾರು ಅಧಿಕಾರಿಗಳನ್ನೂ ಕೂಡ ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆಂದು ಹೇಳಿದಿರಲ್ಲ ಅವರ ಮೇಲೆ ಚಾರ್ಜ್‌ಷೀಟ್ ಏತಕ್ಕೆ ಹಾಕಲಿಲ್ಲ. ಅದಕ್ಕೆ ದಕ್ಷತೆಯ ಅಭಾವವೆಂದು ಹೇಳಲಿಕ್ಕೆ ತಯಾರಾಗಿದ್ದೇನೆ. ಇದರ ಬಗ್ಗೆಯೂ ಕೂಡ ಸರ್ಕಾರ ಗಮನಿಸಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ಅಧಿಕಾರಿಗಳಲ್ಲಿ ಒಂದು ವಿಶ್ವಾಸವಿದೆ. ಇಡಿ ಇಲಾಖೆಯಲ್ಲಿ ಒಂದು ಪರಿಶುದ್ಧತೆ ಬರುತ್ತಿದೆ ಎನ್ನುವ ಮಾತನ್ನು ಹೇಳುವಾಗ ಈ ಪೋಲಿಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕಾನೂನು ಸರಿಯಾಗಿ ಪಾಲನೆಯಾಗುತ್ತಿದೆಯೇ ಎನ್ನುವುದನ್ನು ಗಮನಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಸಿಬ್ಬಂದಿಯನ್ನು ಹೆಚ್ಚು ಮಾಡುವುದರಿಂದ ಕಾನೂನು ವ್ಯವಸ್ಥೆ ಸರಿಯಾಗಿ ಹೋಗುತ್ತದೆ ಎಂದು ಹೇಳಿರುತ್ತೀರಿ. ಸುಮಾರು ೧೩,೯೦೦ ಜನ ಇದ್ದಾರೆ. ಯಾರೋ ನಾಲ್ಕಾರು ಜನ

ಕಾನೂನು ಪಾಲನೆ ಮಾಡತಕ್ಕಂಥ ಕಾಲದಲ್ಲಿ ಸಮಾಜಘಾತುಕ ಶಕ್ತಿಗಳು ಇದ್ದಾರೆಂದು ಅವರಂಗಳನ್ನು ಎದುರಿಸುವುದಕ್ಕಾಗಿ ವ್ಯವಸ್ಥೆಯಾಗಬೇಕೆಂದು ೧೦೦ಕ್ಕೆ ೯೫ರಷ್ಟು ಕಾನೂನು ಪಾಲನೆ ಇದ್ದು ಅವರು ನೀವು ಸ್ವತಃ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಹೋಗುವುದಾದರೆ ಇಲಾಖೆಯಲ್ಲಿ ಸುಗಮವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಪ್ರಿಸನ್ಸ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಇದರ ಬಗ್ಗೆ ಹಿಂದೆಯೂ ಕೂಡ ನಾನು ಹೇಳಿದ್ದೆ, ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಒಂದೂವರೆ ರೂಪಾಯಿ ಕೂಲಿಯನ್ನು ಕೊಡುತ್ತಿದ್ದೀರಿ. ಇದನ್ನು ಮೂರು ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಯಾರು ಸಂಪೂರ್ಣವಾದ ಶಿಕ್ಷೆಗೆ ಒಳಪಟ್ಟು ಅವರ ಕುಟುಂಬದಲ್ಲಿ ಯಾರು ದುಡಿಯುವವರು ಇಲ್ಲದೆ, ಈ ವ್ಯಕ್ತಿಯನ್ನೇ ಅವಲಂಬಿಸಿರುತ್ತಾರೋ ಮತ್ತು ಆ ಕುಟುಂಬದವರಿಗೆ ಬೇರೆ ವರಮಾನ ಇಲ್ಲದಿದ್ದರೆ ಅಂಥ ಕುಟುಂಬದವರಿಗೆ ನೆರವು ಕೊಡುವ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ

ಇನ್ನು ನಮ್ಮ ರಾಜ್ಯದಲ್ಲಿ ಸುಪ್ರೀಮ್ ಕೋರ್ಟ್ ಡಿಸಿಷನ್ ಆಧಾರದ ಮೇಲೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಈವತ್ತಿನ ದಿವಸ ೧೪ ವರ್ಷಗಳ ಕಾಲ ಜೀವಾವಧಿ ಶಿಕ್ಷೆಯನ್ನು ಕೊಡತಕ್ಕಂಥದ್ದು ಇರುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ೧೦ ವರ್ಷಗಳ ಕಾಲ ಜೀವಾವಧಿ ಶಿಕ್ಷೆಯನ್ನು ಕಡಿಮೆ ಮಾಡುವುದಕ್ಕೆ ನಿರ್ಣಯ ಮಾಡಿದ್ದಾರೆ. ನಮ್ಮಲ್ಲಿ ಇದು ಆಗಿಲ್ಲ. ಇದರ ಬಗ್ಗೆಯೂ ಕೂಡ ಗಮನ ಹರಿಸಬೇಕೆಂದು ಹೇಳುತ್ತೇನೆ. ೯–೧೦ ವರ್ಷಗಳ ಪ್ರಿಸನ್‌ಮೆಂಟ್ ಕೇಸ್‌ಗಳನ್ನು ಬಿಡುಗಡೆ ಮಾಡುವುದಕ್ಕೆ ಬೇರೆ ಬೇರೆ ರೀತಿಯಲ್ಲಿ ಅವಕಾಶವಿರುತ್ತದೆ. ನಮ್ಮಲ್ಲಿಯೂ ಕೂಡ ಈ ಸವಲತ್ತನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ತಾವು ಹೇಳಿದ್ದೀರಿ ಆತ್ಮ ವಿಶ್ವಾಸ ಎಂದು. ಅದರ ಬಗ್ಗೆ ಹೇಳಿಕೊಂಡು ಸಮಾನತಾ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಹೆಚ್ಚು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದಿರಿ. ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ನೈತಿಕ ಭಿನ್ನಾಭಿಪ್ರಾಯಕ್ಕೆ ಎಡೆಕೊಡದೆ ಸಮರ್ಪಣೆ ಮಾಡಿಕೊಳ್ಳಬೇಕು. ಅದರಲ್ಲೂ ಸಾಮಾನ್ಯ ಆಡಳಿತದಲ್ಲಿ ಇಡಿ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುವಂಥ ಸಂದರ್ಭದಲ್ಲಿ ಅತೃಪ್ತಿ ಅಸಮಾಧಾನಗಳಿಗೆ ಎಡೆ ಕೊಡದ ರೀತಿಯಲ್ಲಿ ನಡೆದರೆ ಸಾಧ್ಯವಾಗುತ್ತದೆ. ಅದರಂತೆ ತೆಗೆದುಕೊಂಡ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ಆಡಳಿತ ಯಂತ್ರ ನಿಮ್ಮ ಹಿಂದೆ ನಿಲ್ಲುತ್ತದೆ. ಅದು ಹೋಗತಕ್ಕಂಥ ದಾರಿ ಬೇರೆಯಾದರೆ ನೀವು ಹೋಗತಕ್ಕಂಥ ದಾರಿ ಬೇರೆಯಾಗುತ್ತವೆಂದು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI K. BHASKAR NAIDU (Bellary).—Sir, I would speak on these two demands. I have to cut short because I do not have enough time. I would like to speak on Jail demands. I do not know so far how many Jails the Hon. Minister has visited and what are the things he has seen in Jails ; particularly in Bellary Jail because the Bellary Jail was a very famous jail in the old Madras State. It is one of the biggest jails among jails in the old Madras State. Besides this jail, there were two big jails in Vellore and Bajamundry. I have never heard that a Minister has visited the Bellary Jail. Lot of things have to be done there. If he comes next time, I will take him and show it. Now, I will come to the Horticulture Department, I do not know what all is being done ; it is only on the paper. The whole trouble starts when they give us these records. They do not say how much they have implemented. It is all vague figures.

MR. SPEAKER.—This was given in the last budget...

SRI K. BHASKAR NAIDU.—What has happened in the last budget? They say, distribution of two coconut plants to SCs/STs people, for being planted. What happened to them? The Department must come out with the result. And then, they say fruits are being sold in the Legislators' Home. Last time, I have purchased one K. G. of mangos at a cost of Rs. 6-00. They were just no bigger than an egg. You must also see the fruits that are sold there; awfully bad. Vegetables are very costly. Sri Gatti Chandrashekar used to purchase vegetables daily. I do not know how he pays. The Hon. Minister often advices us to eat more fruits I am just reminded of a cartoon. Mary Antanna, wife of Louis the XIV, King of France, was known for her affairs in the nights because she kept away herself from the pubic. Then, all of a sudden she heard some noise outside. Just out of curiosity she asked the guard, what is happenng outside the Paris. Then, the guard replied, madam, some revolution is going on, people do not have food to eat; they are suffering from hunger. Suddenly, the queen replied, stupid fellows, go and ask them to eat cakes if they do not have food. This has appeared in a cartoon. This is only about Antanna. So, when we cannot purchase rice at Rs. 3 the Minister advices us eat fruits. This is the usual advice of Ministers.

Now, I will come to the Chief Minister's Demands, The whole trouble with our people is that all of a sudden we want to give a Ramarajya. We got independence and everything in this country must be par excellence; drinking should not be there; womenising should not be there; a man should not talk rudely in the street elders must be respected, and all that.

KUM. PRAMILA.—Sir, he is talking about womenising and all that...

SRI K. BHASKAR NAIDU.—Sir, she is not the only women. My mother is also a woman and my sister is also a woman. Sir, she had been to foreign and she has gone to night clubs.

KUM. PRAMILA.—Sir, this is not the way a Member must address. What is this? I request the Hon. Speaker to see that sentence is not entered in the record.

SRI K. BHASKAR NAIDU.—What is this she is telling?

KUM. PRAMILA.—I have not gone to foreign countries for the purpose for which my learned friend had gone.

SRI K. BHASKAR NAIDU.—If she is pleased about it. I will take the credit for it.

MR. SPEAKER.—Please confine to Demands, don't confine to all those things.

SRI K. BHASKAR NAIDU.–I do not know why she has a phobia when I speak. She smiles. and at the same time she laughs; she likes me so much and it is only...

MR. SPEAKER.—The House is not concerned with those things...

SRI K. BHASKAR NAIDU.—So, what is happening. all of a sudden we thought that this Government must be perfect in everything. Sir, we have made our rules very hard. If a man drinks and shouts in the street he must be booked ; if a man whistles in the street he should be booked. The police have got a job to book eve-teasers. Sir, I can understand, that youngsters should not do it. That is the age and naturally they will do it, with all the police. We have got another set and I would call them provocative teasers—mald provocatives and youth provocatives. Have you seen ladies and their style of dress...

KUM. PRAMILA.—Sir, I want to know on what demands he is speaking. He is speaking about ladies' dress and all that.

SRI S. R. BOMMAI.—He is speaking on Home Demands.

SRI K. BHASKAR NAIDU.—I am speaking on Home Demands, I have got every right to speak.

KUM. PRAMILA.—Let him speak in his home and let him not speak in the Assembly.

SRI K BHASKAR NAIDU.—Sir, if you look at their dresses, it is highly impossible for any youngster with a little potentiality not to look that side. He wants to peep-through. Dress itself is see-through. So, what a policeman should do with that? So, a new law has to be enforced now. It requires two people to provocate a thing. For example, SITA suppression of Immoral Traffic Act; finally it is known as SITA. Sita is one of the goddess of our religion. I would not call it as SITA, but they have done it like that. Yesterday, it has appeared in Deccan Herald; they have not put full stops.

MR. SPEAKER.—It is a printing mistake ; why do you talk about it?

SRI K. BHASKAR NAIDU.—Once I was talking with one of my friends. He was not a Hindu. He said, you talk of SITA and look at your Sita here. I just wondered what has become to this SITA. SITA means suppression of Immoral Traffic Act. In English, Suppression means. only trying to stop to a certain degree.

I would say eradication. All those things have come all of a sudden to our mind and we want to be perfect people. Sir, even Vishvamitra could not tolerate. He could not control himself. These things are going on all over the country. Sir, you must go once to Commercial Street, you will often like to go at least to see it.

SMT. S. PRAMILA .— I think, I must also have a time to talk.

SRI K. BHASKAR NAIDU .— Certainly.

MR. SPEAKER .— Your name is not in the list, otherwise, I would have permitted you. The only difficulty is, the Whip has not given your name. Why do you want to give reply ?

SMT. S. PRAMILA .— I am not giving a reply.

SRI S. R. BOMMAI .— Sri Bhaskar Naidu is provocating her. That is the whole trouble.

SRI K. BHASKAR NAIDU .— I always have the inclination, if the people have the time to listen to it. The inclination is mine. What can I do ? How are the police to look at these things ? The hon. Member Sri H. D. Devegowda said, there are enough police. Sir, you go to London, the Constable will be there. Some girl will come out and the boy will just say, Hello Honey. They will go away. The policeman will be least bothered about them. Here, the policeman will have to immediately protest at her or book her. Somebody else does something else, you need a policeman. In this way, the policeman has been harassed to a duty of 24 hours. They are also human beings. There may be some bad people, but the whole department as such is not bad. The police are really doing a very good job. Somebody was talking of Navalgund shooting. Sir, only 5 policeman and a mob of 500 attacked them and killed 3 policeman. Have you shed your tears for them ? You simply say, riots, riots. They are also my brothers. The policeman have to protect the law. "ಸ್ವಾಮಿ ಮಾಡಬೇಡಿ, ದಯಮಾಡಿ ನಿಮ್ಮ ಕಾಲಿಗೆ ಬೀಳುತ್ತೇನೆ." Is that the policeman's duty ? Even if he does it ಹೋಗಲೀ ಎಂದು ದೊಣ್ಣೆ ತೆಗೆದುಕೊಂಡು ತಲೆಯಮೇಲೆ ಹೊಡೆಯುತ್ತಾರೆ.

MR. SPEAKER .— .— Please conclude.

ಶ್ರೀ ಕೆ. ಭಾಸ್ಕರ ನಾಯ್ಡು .—ಅಧ್ಯಕ್ಷರೆ ದಯಮಾಡಿ ಬೆಲ್ ಹೊಡೆಯಬೇಡಿ. ನನಗೆ ಮಾತನಾಡಲಿಕ್ಕೆ ಸಮಯ ಕೊಡಬೇಕು. ನಾವು ಸ್ವಲ್ಪ ಹೇಳಬೇಕು. ಏಕೆಂದರೆ ರಾಜಶೇಖರಮೂರ್ತಿಯವರು ಜಾಸ್ತಿ ಮಾತನಾಡಿದ್ದಾರೆ. This is the mob mentality. He has got a very cod job to do. I can tell you Sir, once it so happened ಒಬ್ಬನನ್ನು ಪೋಲೀಸ್‌ನವರು ಕರೆದುಕೊಂಡು ಹೋಗಿ ಪೋಲೀಸ್ ಸ್ಟೇಶನ್‌ನಲ್ಲಿ ಕೂರಿಸಿಕೊಂಡಿದ್ದರು. ತಕ್ಷಣ ಎಂ.ಎಲ್.ಎ.ಯವರು ಫೋನ್‌ಮಾಡಿ ಯಾಕ್ರಿ ಅವನನ್ನು ಕರೆದುಕೊಂಡು ಹೋಗಿದ್ದೀರಿ ಎಂದು ಕೇಳಿದಾಗ, ಪೋಲೀಸ್‌ನವರು ಸ್ವಾಮಿ ಅವನು ಕಳ್ಳತನ ಮಾಡಿದ್ದಾನೆಂದು ಕಂಪ್ಲೇಂಟ್ ಮಾಡಿದ್ದಾರೆ ಎಂದು ತಿಳಿಸಿದರು. ಇಲ್ಲಾರಿ ಹಾಗೆ ಎಲ್ಲಾ ಮಾಡಬಾರದು ಎಂದಾಗ ಸರಿ ಸ್ವಾಮಿ ಎಂದರು. One MLA in my place, a few years back, some fellow wnet to him and told him ಇದಾದ ಮೇಲೆ ಮುಂದೆ ಏನಾಯಿತು ಅಂದರೆ After a week that MLA's house was robbed. He gave an application alleging a particular man. The Sub-Inspector of Police an intelligent youngster put on his uniform and went to his house. His name was Basanna. ಬಸವಣ್ಣನವರೇ ಬಸವಣ್ಣನವರೇ ಎಂದು ಅವ

ರನ್ನು ಕರೆದರು. ಏನ್ರಿ ದಯವಿಟ್ಟು ಪೋಲೀಸ್ ಸ್ಟೇಷನ್‌ಗೆ ಬರುತ್ತೀರಾ, ಎಂದು ಕೇಳಿದರು. Basanna, the thief according to that MLA came out ಯೋಚನೆ ಮಾಡುತ್ತೇನೆಂದು ಬಸವಣ್ಣನು ಹೇಳಿದನು. because he was a notorious fellow. ಸ್ವಾಮಿ ಅವನು ಬರುತ್ತಿಲ್ಲಾ, ತಾವೇ ಬಂದು ಹೇಳಬೇಕೆಂದು ಎಂ.ಎಲ್.ಎ. ಸಾಹೇಬರಿಗೆ ಸಬ್ ಇನ್ಸ್‌ಪೆಕ್ಟರ್ ಹೇಳಿದರು. The police Sub-Inspector came back to the police station. The MLA was waiting. ಸ್ವಾಮಿ ತಾವು ಹೇಳಿದಂತೆ ನ್ಯಾಯ ನೀತಿಯಿಂದ ಅವನ ಹತ್ತಿರ ಮಾತನಾಡಿದೆ, ಅವನು ಪೋಲೀಸ್ ಸ್ಟೇಷನ್‌ಗೆ ಬರುವುದಿಲ್ಲ. ನಾನು ಏನು ಮಾಡಬೇಕು ಸ್ವಾಮಿ ಎಂದು ಕೇಳಿದ . ಅದಕ್ಕೆ ಎಂ.ಎಲ್.ಎ. ಸಾಹೇಬರು ನಾನು ಎಂ.ಎಲ್.ಎ. ಎಂಬುದು ನಿನಗೆ ಗೊತ್ತಿಲ್ಲವೇ ? ಅವನನ್ನು ತಕ್ಷಣ ಕರೆದುಕೊಂಡು ಬರಬೇಕು '' ಎಂದು ಕೇಳಿದರು. ಆಗ ಸಬ್ ಇನ್ಸ್‌ಪೆಕ್ಟರ್ ತಾವು ಸ್ವಲ್ಪ ಬನ್ನಿ ಸ್ವಾಮಿ ಎಂದು ಜೀಪಿನಲ್ಲಿ ಕೂರಿಸಿಕೊಂಡು ಅವನ ಮನೆಗೆ ಹೋಗಿ ಮತ್ತೆ ಬಸವಣ್ಣನವರೇ ಎಂದು ಕರೆದರು. ಏನು ಸ್ವಾಮಿ ಎಂದು ಬಂದ, ನೀವು ಸ್ವಲ್ಪ ಪೋಲೀಸ್ ಸ್ಟೇಷನ್‌ಗೆ ಬರಬೇಕಾಗುತ್ತದೆ ಎಂದಾಗ ಅವನು ನಾನು ಬರುವುದಿಲ್ಲ ಎಂದ. ಸರಿ ಅವನು ಬರುವುದಿಲ್ಲವೆಂದು ಪುನಃ ಎಂ.ಎಲ್.ಎ. ಯವರಿಗೆ ಇನ್ಸ್‌ಪೆಕ್ಟರ್ ತಿಳಿಸಿದ. ಒಂದೆರಡು ಕಪಾಳಕ್ಕೆ ಕೊಟ್ಟು ಎಳೆದುಕೊಂಡು ಬರುವುದನ್ನು ಬಿಟ್ಟು ಬರುವುದಿಲ್ಲವೆಂದು ಹೇಳುತ್ತಿರಲ್ಲಾ ಏನ್ರಿ ಪೋಲೀಸ್‌ನವರಿಗೆ ಹೇಳಿಕೊಡಬೇಕಾ ಎಂದರು. ಆಗ ಸಬ್ ಇನ್ಸ್‌ಪೆಕ್ಟರ್ ಏನ್ ಸ್ವಾಮಿ ಕಳೆದವಾರ ಥರ್ಡ್ ಡಿಗ್ರಿ ಮೆಥೆಡ್, ಆ ಮೆಥೆಡ್ ಈ ಮೆಥೆಡ್ ಎಂದು ಪೋಲೀಸ್‌ನವರು ಉಪಯೋಗಿಸುತ್ತಾರೆಂದು ಹೇಳಿದ್ದೀರಿ. ಈಗ ಈ ಡಿಗ್ರಿ ಮೆಥೆಡ್ ಹೇಳುತ್ತೀರಿ ಸ್ವಾಮಿ ನನ್ನ ಕೈಯಿಂದ ಆಗುವುದಿಲ್ಲ ಎಂದ. In London people are educated. They understand their responsibility. They know, what is not to trespass. I had been to Singapore 3 months back. I did not see a single constable there. The moment a person throws a sheet of paper on the street, he is fined 500 dollars. The taxi driver cannot smoke in his stand. When you get down the air-port, announcement are mads 'do not smoke, keep the airport clean'. They are not taught to behavee like that The people are maintaining law I asked somebody, is there no police. He said, there are policemen. I was very curious to see policeman. I asked, where are they ? He told me, they are in streets, I asked him, why He told, we do not want to make the people feel that that actions are being guarded. It is up to them to behave as citizens. This is because of their education They have been morally trained to behave as a citizen and love the country. Here what is happening. We become agents of enemy countries. We do so many things. Becuase we do not eat cows, we drive them out to Pakistan. They happily consume it This is how we think. We do not think in terms of country. We think in safe-guarding the cows and bulls. We think in terms of Ahimsa. You are not able to understand the damage you are doing by feeding those people. It is very difficult for someone to understand what he is. He is an Indian first, and an Indian last. Sri Rajashekharan, now I come to your point. You have been very critical. If Shakespeare was alive to-day, he would have taken you in the Julius Caesar as Anthony. On one side you say that Chief Minister is a very good man, but at the same time you are doing the mischief. Why I say this because you are also frustated, your Party is destroyed. People

gave you votes within 2½ hours, but you could not rule. People are bothered about the delivery of their goods. You are so destroyed yourself that you are afraid of speaking vehemently against that party. I think, you are.

MR. SPEAKER .— Please do not address the Member.

ಶ್ರೀ ಎಂ. ವಿ. ರಾಜಶೇಖರನ್ .— ಅವರ ಮುಖ್ಯಮಂತ್ರಿಗಳನ್ನು ಪ್ಲೀಸ್ ಮಾಡಬೇಕು.

SRI K. BHASKAR NAIDU .— This is their usual defence. ನಾನು ಯಾರನ್ನು ಪ್ಲೀಸ್ ಮಾಡಬೇಕಾಗಿದ್ದಿಲ್ಲ. ನಾನು ಪ್ಲೀಸ್ ಮಾಡಬೇಕಾದ್ದು ನನ್ನ ಹೆಂಡತಿಯ ನ್ನು ನಾನು ಆಗಲೇ ನನ್ನ ಹೆಂಡತಿಯನ್ನು ಪ್ಲೀಸ್ ಮಾಡಿಬಿಟ್ಟಿದ್ದೇನೆ. ನಾನು ನನ್ನ ಜೀವನದಲ್ಲಿ ಪ್ಲೀಸ್ ಮಾಡಬೇಕಾದ್ದು ಅವರೊಬ್ಬರನ್ನೆ. ಮಾನ್ಯ ರಾಜಶೇಖರನ್‌ರವರು ಮುಖ್ಯಮಂತ್ರಿಗಳ ಡಿಮ್ಯಾಂಡ್ ಮೇಲೆ ಇಷ್ಟೊಂದು ಮಾತನಾಡಬೇಕಾದರೆ x x x

MR. SPEAKER .— Such remark should not go into the records.

(INTERRUPTIONS)

SRI K. BHASKAR NAIDU .— Sir, we are not second to anybody in giving and placing the Press in the highest position. Press is the most important thing. The only thing the Cheif Minister was telling them, was, do not report false and quote the facts. He is vulnerable to do a mistake. It is their duty to corect him. They should not do on criticising him that he talked like this, he put on his trouser in such a way or he wore his right leg shoe in his left leg and all that. ಅವರು ಮಾತನಾಡುವಾಗ ಹೆಚ್ಚು ಕಾಲವನ್ನು ತೆಗೆದುಕೊಂಡಿದ್ದಾರೆ. ಈ ದೇಶದಲ್ಲಿ ಪ್ರೆಸ್‌ನ್ನು ಯಾರು ಚೆನ್ನಾಗಿ ನೋಡುತ್ತಿರಲಿಲ್ಲ, ಜನತಾ ಪಾರ್ಟಿ ಒಂದೇ ಚೆನ್ನಾಗಿ ನೋಡುತ್ತಿತ್ತು ಎನ್ನುವ ಹಾಗೆ ಹೇಳಿದರು. ನಮಗೆ ಗೊತ್ತು ಸ್ವಾಮಿ, ನಿಮ್ಮ ಪಾರ್ಟಿ ಇರುವಾಗ ವೃತ್ತ ಪತ್ರಿಕೆಗಳಿಗೆ ಎಷ್ಟು ಸ್ವಾತಂತ್ರ್ಯ ಇತ್ತು ಎಂಬುದು ಗೊತ್ತು. ರಾಜಕೀಯದಲ್ಲಿ ಎಲ್ಲರದೂ ಒಂದೇ, ಹೇಳುವುದು ಒಂದು ಮಾಡುವುದು ಒಂದು. ಪ್ರೆಸ್‌ಗಳಿಗೆ ಫ್ರೀಡಮ್ ಕೊಡಲಿಕ್ಕೆ ಯಾರಿಗೂ ಇಷ್ಟವಿಲ್ಲ.

6-30 P.M.

Let us all be fair. When your Government was there, you were also criticising everybody, except criticising the Press. Press is the most important thing for us. They are at liberty to write what they want. Let them write and it is for the people to judge.

I know most of the officers and some of them have served as Police Officers. They are a class by themselves. The Chief Secretary and myself were the club-mates in 1953, when he was posted as the Assistant Commissioner. He was the President of the club. He is a gentleman. Most of our officers are wonderful officers and they are gems, pearls and diamonds. I know the Inspector General of Police and he is a good man.

---

x xx The wrods deleped as ordered by the Chair.

Sir, regarding religion, I have found as a citizen of Madras Provi nce once, that only in this State, every religion is bisected and from morning till evening we hear about communities. Each man is trying to talk about his own community, his own profession, trying to uplift his own man and because of this community feeling, a proper man has always been deprived of his opportunity. For the last 30 years these community feelings are rampant in our country. The Inspector General of Police has not given room for caste feelings and he is a wounderful Police Officer who has done a wounderful service for this State. I know that he has been awarded. People may say that I am for Havanur Commission. But I am not for that Commission. There are poor people not only in the Harijan Commu nity, but also in other communities. I am not a person belonging to backward community. Somebody asked me to call myself as a man belonging to backward community. But I am not backward. God has given me everything. Should I be called a backward man ? I am addressing an Hon'ble Speaker like you. With full knowledge, I say that such community feelings have ruined our State. Let us not build ourselves on community basis. Do not allow these things to go on. The Chief Ministership may be there for you today, but it may not be there tomorrow. It is very important that you should go down in the history by looking all communities in equal way.

Then, I have got to say a few words about the Excise department 90% of our population drink and I have seen that, excepting you and me.

MR. SPEAKER.—There is no case no evidence is required.

SRI K. BHASKAR NAIDU—About the recent liquor tragedy at Bangalore, it is a tragedy that occurs anywhere in the world. It is not as if, the tragedies have not occurred. Even during the Janatha rule, lakhs of people died. Demanding resignation of the Chief Minister of the Government because of this tragedy, is all a political stunt. People died because they consumed very cheap drink, the Polish. They call it in Tamil as some 'Kalkalu' and 'Karvadu Thanni' These liquors were there in thousands of litres during the previous years also and they were being sent to Andhra Pradesh and Tamil Nadu also. Andhra Pradesh has also got enough spirit and even in Tamil Nadu also. From Tamil Nadu, it started coming towards this side. A man who is addicted to drinks will always go for a strong kick. These people who died in the tragedy wanted to have a strong kick. Sir, in Hospet, there is a liquor factory and Molasses will come out of that factory. There are plenty of Monkeys. These Monkeys go and drink and after they drink, you must see the affection they develop towards other Monkeys. It will be a wounderful scence.

And what happens Sir It is just human action.

ಅಧ್ಯಕ್ಷರು.—ಮೊದಲೇ ಮರ್ಕಟ, ಅದರಮೇಲೆ ಮದ್ಯದ ಮದ ಹಿಡಿದಿರಲು ಕೇಳಬೇಕೇ........

SRI K. BHASKAR NAIDU.—Those monkeys become so humans. What beautiful action, Sir So, liquor is a very pleasant thing. As far as I am concerned, I am a Hindu and I believe in re-birth. And my next birth will be only for drinking and all other things. Now I have started reading Bhagvad Geetha. So I will think only of that. One argument is raised that if you raise the rates, people will not drink. What happens is they will go for cheap drinks and as a result of it you are going to kill them. A man who is habituated to drinks will not leave that habit. He will get it at whatever price that he is required to pay. I think you were once a smoker of cigarettes. You used to smoke only a particular brand of cigarette. There are many people who like to smoke only 'Charminar' They are used to it. In foreign countries in these days an abettor gives an injection to narcotics and tells him to go and kill a certain person. He will go and kill him becouse he wants that injection. That is the position. In our Colleges in Delhi, I know most of our ladies have started taking 'prick'. Without that 'prick' they cannot survive. So, Sir, this tragedy that has occured is just a tragedy. It is something like a motor accident or a plane accident. I know once in America 10,000 people died because of eating stale bread. Sir, I would say that our Officers have done their best. There might be some small people here and there who might have erred. This Police Department is a vast Department. It i natural that a few are not up to the mark. If a fellow goes out of mind and takes a machine gun, can you tell me that the Police were lazy? No. So, these things happen Otherwise this is not the 'world' we would have been in Swarga. As a citizen I will once again say that our police officers should not feel about what has been said in this House. They deserve praise. And there are hundreds of people to salute, whose hats are off to them. Thank you, Sir.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ನಾನು ಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂಥ ಒಳಾಡಳಿತ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದು ಇಚ್ಛಿಸುತ್ತೇನೆ. ಈ ಒಳಾಡಳಿತ ಇಲಾಖೆಯ ಬಗ್ಗೆ ಹಿಂದಿನ ಸಾಲಿನ ಒಂದು ವರದಿಯೇನೋ ನಮಗೆ ಬಂದಿದೆ. ಅವರು ಕೊಟ್ಟಿರತಕ್ಕಂಥ ವರದಿಯಲ್ಲಿ ಇಲಾಖೆಯ ಕಾರ್ಯಚಟುವಟಿಕೆಯ ಬಗ್ಗೆ ಹೇಳಿದ್ದಾರೆ. ಅಲ್ಲದೇ ರಾಜ್ಯದಲ್ಲಿ ನಡೆದಿರತಕ್ಕ ಅನೇಕ ಚಳುವಳಿಗಳ ಬಗ್ಗೆ ಸಹ ಅವರು ಹೇಳಿದ್ದಾರೆ. ಈ ವಿಚಾರದಲ್ಲಿ ನವಲಗುಂದ, ನರಗುಂದದಲ್ಲಿ ಆದಂಥ ರೈತರ ಚಳುವಳಿಯಿಂದ ಹಿಡಿದು ಕೇಂದ್ರ ಉದ್ಯಮ ಕಾರ್ಮಿಕರ ಚಳುವಳಿ, ವಿದ್ಯಾರ್ಥಿಗಳ ಚಳುವಳಿಗಳ ಬಗ್ಗೆ ಹೇಳುತ್ತಾ ಹಾಗೆಯೇ ಎಲ್ಲಾ ಚಳುವಳಿಗಳಲ್ಲಿ ಗೋಲಿಬಾರ್‌ನಿಂದ ಆಗಿರುವಂಥ ಒಟ್ಟು ಸಾವುಗಳು ಎಷ್ಟು ಎಂಬುದರ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಅದನ್ನು ಬಿಟ್ಟು ಅವರ ಇಲಾಖೆಯ ಕಾರ್ಯ ಚಟುವಟಿಕೆಯ ಬಗ್ಗೆ ಹೇಳುತ್ತಾ, ಈ ಎಲ್ಲಾ ಚಳುವಳಿಗಳು ರಾಜ್ಯದಲ್ಲಿ ಎಷ್ಟು ದಿವಸ ನಡೆದಿದೆ ಎನ್ನುವುದರ ಬಗ್ಗೆ

ಸೂಚ್ಯವಾಗಿ ಹೇಳಿದ್ದಾರೆಯೇ ಹೊರತಾಗಿ ಈ ಚಳುವಳಿಗಳು ನಡೆದಂಥ ಕಾಲದಲ್ಲಿ ಆದಂಥ ಫಲ, ಇಲಾಖೆಯವರಿಂದ ನಮಗೆ ದೊರಕಿದಂಥ ಫಲ ಏನು ಎಂಬುದನ್ನು ಹೇಳಿಲ್ಲ. ಅದನ್ನೂ ಸಹ ಅದರ ಜೊತೆಯಲ್ಲಿ ಆ ಕಲಮ್‌ನಲ್ಲಿ ಹಾಕಿದ್ದರೆ ಚೆನ್ನಾಗಿತ್ತು. ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಒಂದು ವರ್ಷದಲ್ಲಿ ಯಾವತ್ತೂ ಇಲ್ಲದೇ ಇದ್ದಂತಹ ಒಂದು ಹೆಚ್ಚಿನ ಪ್ರಗತಿಯನ್ನು ಈ ಇಲಾಖೆಗೆ ಸಾಧಿಸಿದೆ ಎಂದು ಹೇಳಿದ್ದಾರೆ. ಅದರಲ್ಲಿ ಜನಸಾಮಾನ್ಯರ ಹಿತರಕ್ಷಣೆಯನ್ನು ಮಾಡತಕ್ಕಂಥ ಎಷ್ಟು ಕೆಲಸಗಳನ್ನು ಆಗಿವೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಈ ಒಳಾಡಳಿತ ಇಲಾಖೆಯ ಬಗ್ಗೆ ಹಿಂದಿನ ವಿಚಾರಕ್ಕೆ ನಾನು ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಈ ಒಳಾಡಳಿತ ಇಲಾಖೆಯಲ್ಲಿರತಕ್ಕಂಥ ಯಾರೇ ಆಗಲೀ ನಿಷ್ಠಾವಂತರಾಗಿ ಅವರ ಕರ್ತವ್ಯವನ್ನು ಪಾಲಿಸುವುದಕ್ಕೆ ಹೋದರು ಎಂದರೆ ಅವರಿಗೆ ಏನೊಂದು ಅಡೆತಡೆಗಳು ಬರುತ್ತವೆ ಮತ್ತು ಅವರಿಗೆ ಏನೊಂದು ಹೊಡೆತ ಬೀಳುತ್ತದೆ ಎಂಬುದರ ಬಗ್ಗೆ ಇದರಲ್ಲಿ ಕಾಣಿಸದೇ ಅವರು ಒಂದು ರೀತಿಯಲ್ಲಿ ಎಲ್ಲರೂ ಮೆಚ್ಚಬೇಕು ಎನತಕ್ಕಂಥ ರೀತಿಯಲ್ಲಿ ವರದಿಯನ್ನು ಕೊಟ್ಟಿದ್ದಾರೆ. ಆದರೆ ಜನ ಮೆಚ್ಚತಕ್ಕಂಥ ರೀತಿಯಲ್ಲಿ ಕಾರ್ಯಗಳು ಆಗಿಲ್ಲ. ಈ ಇಲಾಖೆ ಜನಸಾಮಾನ್ಯರ ಒಂದು ವಿಶ್ವಾಸವನ್ನು ಉಳಿಸಿಕೊಂಡಿದೆಯೋ ಎನ್ನುವುದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಮೊದಲನೆಯದಾಗಿ ಈ ಪತ್ರಿಕಾ ಕಚೇರಿಗಳ ಮೇಲೆ ದಿಗ್ಬಂಧನ ಆಗುವ ಸಂದರ್ಭದಲ್ಲಿ, ಹಾಗೆ ನಡೆದಂಥ ಪ್ರಕರಣದಲ್ಲಿ ಅದೇತಾನೇ ಈ ಇಲಾಖೆಗೆ ಹೊಸದಾಗಿ ವರ್ಗಾಯಿಸಲ್ಪಟ್ಟಿದ್ದಂಥ ಪೋಲೀಸ್ ಡೆಪ್ಯುಟಿ ಕಮೀಷನರ್ ಆಫ್ — ಕ್ರೈಮ್ ಅವರು ತನಿಖೆ ನಡೆಸಿ ಇದರಲ್ಲಿ ಇದ್ದಂತಹ ಸತ್ಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಹೋದಂಥ ಸಮಯದಲ್ಲಿ ಅವರನ್ನು ಆ ಸ್ಥಾನದಿಂದ ವರ್ಗಾವಣೆ ಮಾಡಿದರು. ಇದು ಸರ್ಕಾರದ ನೀತಿಯೇ ? ಈಗಿನ ಸರ್ಕಾರದ ನೀತಿಯಂತೆ ಯಾರೇ ಆಗಲೀ ಒಂದು ಸಾರಿ ಅಲ್ಲಿಗೆ ವರ್ಗವಾದಮೇಲೆ 2 ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಇನ್ನೊಂದು ಕಡೆಗೆ ವರ್ಗಾವಣೆ ಆಗಬಾರದು. ಇಂತಹ ಒಂದು ನಿಯಮ ವಿದ್ದರೂ ಕೂಡ ಅಂತಹ ಒಬ್ಬ ನಿಷ್ಠಾವಂತ ಅಧಿಕಾರಿಯನ್ನು ಕೆಲವೇ ದಿವಸಗಳಲ್ಲಿ ವರ್ಗಾವಣೆ ಮಾಡಿರುವುದಕ್ಕೆ ಕಾರಣವೇನೆಂದರೆ, ಆಡಳಿತ ಪಕ್ಷಕ್ಕೆ ಸೇರಿರತಕ್ಕಂಥ ಕಾರ್ಯಕರ್ತರು ಪ್ರತಿಕಾಲಯಗಳಿಗೆ ದಿಗ್ಬಂಧನ ಹಾಕಿ ಬೆದರಿಕೆ ಹಾಕದಂಥ ಹಿನ್ನೆಲೆಯಲ್ಲಿ ಆ ನಿಷ್ಠಾವಂತ ಅಧಿಕಾರಿ ಸತ್ಯವನ್ನು ಸರ್ಕಾರದ ಗಮನಕ್ಕೆ ತಂದಾಗ ಮಾನ್ಯ ಮುಖ್ಯಮಂತ್ರಿಯವರಿಂದ ಆ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕು ಎನ್ನತಕ್ಕಂಥ ತೀರ್ಮಾನ ಹೋಯಿತು ಎನ್ನುವ ಕಾರಣ ನಮಗೆ ಗೊತ್ತಾಗುತ್ತಿದೆ. ಈ ಕೆಲವಾರು ತಿಂಗಳುಗಳಲ್ಲಿ ಕೆಲವಾರು ಪ್ರಕರಣಗಳು ನಡೆದಿವೆ. ಅದರಲ್ಲೆಲ್ಲಾ ನಿಷ್ಠಾವಂತ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಮಂತ್ರಿ ಮಂಡಲದಲ್ಲಿ ಒಬ್ಬ ಮಾನ್ಯ ಮಂತ್ರಿಯಾಗಿದ್ದಂಥ ಶ್ರೀಮತಿ ರೇಣುಕಾರಾಜೇಂದ್ರನ್‌ರವರ ಮೇಲೆ ನಿಷ್ಠಾವಂತ ಅಧಿಕಾರಿಯೊಬ್ಬರು ಕ್ರಮ ತೆಗೆದುಕೊಂಡಾಗ ಅವರನ್ನು ಕೂಡಲೇ ವರ್ಗಾವಣೆ ಮಾಡಿದರು. ಇನ್ನೊಬ್ಬ ಮಾನ್ಯ ಮಂತ್ರಿಯವರಾದ ಶ್ರೀ ಇಬ್ರಾಹಿಂ ಪ್ರಕರಣದಲ್ಲಿ ಒಬ್ಬ ನಿಷ್ಠಾವಂತ ಪೋಲೀಸ್ ಅಧಿಕಾರಿ ಕ್ರಮ ತೆಗೆದುಕೊಂಡಾಗ ಕೆಲವು ತಿಂಗಳಲ್ಲೇ ಆ ಪ್ರಕರಣ ಹೊರಬರುವುದಕ್ಕೆ ಮುಂಚಿತವಾಗಿ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿದರು. ತಪ್ಪಿತಸ್ತ ಜನಗಳ ಬಗ್ಗೆ ತನಿಖೆ ಮಾಡುವುದಕ್ಕಾಗಿ ಯಾವ ಒಂದು ಇಲಾಖೆ ಇದೆ ಆ ಇಲಾಖೆಗೆ ಸಂಬಂಧಪಟ್ಟಂಥ ನಿಷ್ಠಾವಂತ ಅಧಿಕಾರಿಗಳು ತಪ್ಪಿತಸ್ಥ ಜನಗಳ ಬಗ್ಗೆ ತನಿಖೆ ಮಾಡುವುದಕ್ಕೆ ಹೋದಾಗ ಅವರಿಗೆ ಆ ರೀತಿ ಶಿಕ್ಷೆಯಾಯಿತು. ಮತ್ತು ಆ ಸ್ಥಾನದಿಂದ ಹೊರಗಡೆ ಕಳುಹಿಸುವಂತಹ ಅವಕಾಶವಾಯಿತು.

ಈ ಪೋಲೀಸ್ ಇಲಾಖೆಯಲ್ಲಿ ನಿಷ್ಠಾವಂತರಾಗಿ ಕೆಲಸ ಮಾಡುವಂತಹ ಅಧಿಕಾರಿಯನ್ನು ತಾವು ಬೇರೆ ಕಡೆಗೆ ವರ್ಗಾವಣೆ ಮಾಡಿದರೆ ಆ ಪೋಲೀಸ್ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುವುದಕ್ಕೆ ಮನಸ್ಸು ಹೇಗೆ ಬರುತ್ತದೆ. ಕೆಲವು ದಿನಗಳ ಹಿಂದೆ ನಮ್ಮ ಕೇಂದ್ರ ಸರ್ಕಾರದ ಉದ್ಯೋಗಗಳ ಕಾರ್ಮಿಕರು ಒಂದು ದೊಡ್ಡ ಸಂಪು ನಡೆಯಿತು. ಆ ಸಂಧರ್ಬದಲ್ಲಿ ಪೋಲೀಸ್ ಇಲಾಖೆಯವರು ಯಾವ ರೀತಿ ದಬ್ಬಾಳಿಕೆ ಮಾಡಿದರು. ಜನಸಾಮಾನ್ಯರಲ್ಲಿ ಯಾವ ರೀತಿ ವರ್ತಿಸಿದರು ಎಂಬುದನ್ನು ಈ ಸರ್ಕಾರವೇನಾದರೂ ಗಮನಿಸಿ ಅವರಿಗೆ ರಕ್ಷಣೆ ಏನಾದರೂ ಕೊಟ್ಟರೇ ? ಜನಸಾಮಾನ್ಯರಿಗೆ ರಕ್ಷಣೆಯನ್ನು ಕೊಡಬೇಕೆಂದು ಹೊರಟ ಅಧಿಕಾರಿಗಳಿಗೆ ಉಗ್ರ ಶಿಕ್ಷೆಯಾಗುತ್ತದೆ ಎನ್ನುವ ಭಯವನ್ನು ಹುಟ್ಟಿಸುವುದು. ಕೆಲವು ದಿನಗಳಿಂದಲೂ ಹಿಂದೆ ನಾನು ನೋಡುತ್ತಿದ್ದೇನೆ. ಆಡಳಿತಕ್ಕೆ ವಿರೋಧವಿರುವ ರಾಜಕೀಯ ವ್ಯಕ್ತಿಗಳು ಪತ್ರಗಳನ್ನು [illegible] ನೋಡುವುದು ಮತ್ತು ಅವರ ಪತ್ರವ್ಯವಹಾರಗಳನ್ನು ತಿಳಿದುಕೊಳ್ಳತಕ್ಕಂಥ ಗೂಢಚರ್ಯೆ ಕೆಲಸ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಈ ಒಂದು ಕ್ರಮವನ್ನು ತೆಗೆದು

ಕೊಳ್ಳುವಂತಹ ಅಂಚೆ ಕಛೇರಿಯವರಿಗೆ ತಿಳಿಸಿರುವುದಾಗಿ ನನಗೆ ತಿಳಿದು ಬಂದಿದೆ. ಮತ್ತೆ ವಿರೋಧಿ ರಾಜಕೀಯ ವ್ಯಕ್ತಿಗಳ ಟೆಲಿಫೋನ್ ಅನ್ನು ಟ್ಯಾಪ್ ಮಾಡುವ ಅಧಿಕಾರವನ್ನು ಪೋಲೀಸ್ ನವರಿಗೆ ಕೊಟ್ಟಿರುವುದಾಗಿ ತಿಳಿದುಬಂದಿದೆ. ಇದು ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ ? ಈ ರೀತಿಯಾಗಿ ಎತಕ್ಕೆ ಮಾಡಿದ್ದೀರಿ ಎಂದು ನನಗೆ ಅರ್ಥವಾಗುವುದಿಲ್ಲ, ಆದ್ದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿರುವುದು ಸರಿಯಲ್ಲವೆಂದು ನನಗನಿಸುತ್ತದೆ. ಪೋಲೀಸಿನವರಿಗೆ ಸರಿಯಾದ ಸಲಹೆಗಳನ್ನು ಕೊಟ್ಟು ಈ ರೀತಿಯಾಗಿ ಜನವಿರೋಧಿ ಕೆಲಸಗಳನ್ನು ಮಾಡುವುದು ಸರಿಯಲ್ಲವೆಂದು ಹೇಳಬೇಕು. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳು ಮತ್ತು ಪತ್ರಿಕೆಗಳು ಬಹಳ ಪ್ರಾಮುಖ್ಯವಾಗಿದೆ ಈ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷಗಳು ಯಾವ ಕೆಳ ಮಟ್ಟಕೆ ಇಳಿಸಿದ್ದಾರೆ ? ಪ್ರಜಾಪ್ರಭುತ್ವದಲ್ಲಿ ಒಂದು ಗಾಡಿಗೆ ಎರಡು ಗಾಲಿಗಳಿದ್ದಂತೆ, ಎರಡು ಗಾಲಿಗಳು ಯಾವುವೆಂದರೆ ಒಂದನೆಯದು ವಿರೋಧಪಕ್ಷಗಳು ಎರಡನೆಯದು ಆಡಳಿತ ಪಕ್ಷ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಈ ಗಾಡಿಯಲ್ಲಿ ಯಾವುದಾದರೂ ಒಂದು ಗಾಲಿ ಹೋದರೂ ಸಹ ಆ ಗಾಲಿಗೆ ಬದಲು ಸ್ಟೆಪ್ನಿ ಹಾಕಿಕೊಂಡು ಗಾಲಿಯನ್ನು ಮುಂದಕ್ಕೆ ಹೊಡೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದಾರೆ. ಆದ್ದರಿಂದ ಆ ಸ್ಟೆಪ್ನಿ ಯಾವುದು ? ನನ್ನ ಅಭಿಪ್ರಾಯದಲ್ಲಿ ಆ ಸ್ಟೆಪ್ನಿ ಯಾವುದಿರಬಹುದು ಎಂದರೆ ಕೆಲವಾರು ದಿವಸಗಳಿಂದ ಈ ಮನೆಯಲ್ಲಿ ಇರದೇ ಹೊರಗಡೆ ಇದ್ದ ವಿರೋಧಪಕ್ಷಗಳ ಹೆಸರಿನಲ್ಲಿ ೧-೨ ವಿರೋಧ ಪಕ್ಷಗಳು ಸರ್ಕಾರಕ್ಕೆ ಬೆಂಬಲ ಕೊಡುತ್ತಾ ಒಳಗಡೆ ಇದ್ದುಕೊಂಡು ಕೆಲಸ ಮಾಡುತ್ತಿದ್ದ ಪಕ್ಷಗಳು ಆ ಸ್ಟೆಪ್ನಿ ಇರಬಹುದೇ ? ಎಂಬುದನ್ನು ತಿಳಿಯಬೇಕಾಗಿದೆ ಇಲ್ಲವೆ ಇನ್ನು ಯಾವುದು ಎಂಬುದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ತಿಳಿಸಬೇಕು. ಕೆಲವು ಪಕ್ಷಗಳನ್ನು ಸ್ಟೆಪ್ನಿ ಎಂದು ತಿಳಿದುಕೊಂಡು ಇರುವ ವಿರೋಧಪಕ್ಷಗಳ ಪಾತ್ರವಾದರೂ ಏನು ಎಂಬುದನ್ನು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಆಡಳಿತದಲ್ಲಿರುವಂತಹ ಒಂದೇ ಒಂದು ಮಾರ್ಗ ಎಂದರೆ ಈ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳು ಮತ್ತು ಪತ್ರಿಕೆಗಳು ಏನಾದರೂ ಸರ್ಕಾರವನ್ನು ಟೀಕೆ ಮಾಡಿದರೆ ಅಂತಹ ವಿರೋಧಪಕ್ಷಗಳ ಮೇಲೆ ದಬ್ಬಾಳಿಕೆ ಮತ್ತು ಅಂತಹ ಪತ್ರಿಕೆಗಳ ಮೇಲೆ ಹಲ್ಲೆ ಮಾಡುವುದು. ಈ ಮಧ್ಯೆ ನಮ್ಮ ಕೇಂದ್ರ ಸರ್ಕಾರದ ಮಂತ್ರಿಗಳು ಪತ್ರಿಕೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೊರಟಿರುವ ಸಂದರ್ಭದಲ್ಲಿ ಈ ರೀತಿಯಾದರೆ ಹೇಗೆ ? ನಮ್ಮ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಒಂದು ಅಂಗವಿದ್ದಂತೆ. ಆ ಅಂಗ ನಮ್ಮ ಪ್ರಜಾಪ್ರಭುತ್ವದಲ್ಲಿ ಕುಂಠಿತಗೊಂಡರೆ ಹೇಗೆ ? ನಾವು ರಾಜ್ಯದಲ್ಲಿ ಆಗಲಿ ರಾಷ್ಟ್ರದಲ್ಲಿಯೇ ಆಗಲಿ ಮುಂದೆ ಹೋಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಆಡಳಿತವನ್ನು ನಡೆಸುವ ಪಕ್ಷ ಆ ಆಡಳಿತದ ಬಗ್ಗೆ ಕೇಳುವ ಪಕ್ಷಗಳಿಗೆ ಸೂಕ್ತ ಉತ್ತರ ಕೊಡುವುದು ಆ ಪಕ್ಷದ ಕರ್ತವ್ಯ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಪೋಲೀಸ್ ಇಲಾಖೆಯಲ್ಲಿ ನಾಗರೀಕರ ಹಕ್ಕುಗಳನ್ನು ಕಾಪಾಡಿಕೊಂಡು ಬರುವುದಕ್ಕೆ ಒಂದು ಪ್ರತ್ಯೇಕ ವಿಭಾಗವಿದೆ. ಆದರೆ ನಾವು ಈ ಸಭೆಯಲ್ಲಿ ಮುಖ್ಯವಾಗಿ ಹರಿಜನ ಮತ್ತು ಗಿರಿಜನರ ಮೇಲೆ ದಬ್ಬಾಳಿಕೆ ಮಹಿಳೆಯರ ಮೇಲೆ ದಬ್ಬಾಳಿಕೆ, ಮಹಿಳೆಯರ ಮೇಲೆ ಅತ್ಯಾಚಾರ, ಅನಾಚಾರಗಳ ಬಗ್ಗೆ ನಾವು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. ಆದರೆ ಇವುಗಳನ್ನು ತಡೆಗಟ್ಟುವುದು ಈ ಇಲಾಖೆಯ ವತಿಯಿಂದ ಸಾಧ್ಯವಾಗಿಲ್ಲ. ಈ ವಿಷಯದ ಬಗ್ಗೆ ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ಭಾಸ್ಕರನಾಯ್ಡು ಹೇಳಿದರು. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಆದ್ದರಿಂದ ಆ ವಿಷಯಕ್ಕೆ ಉತ್ತರ ಹೇಳಬೇಕೆಂದು ನಾನು ಕೇಳಬಯಸುತ್ತೇನೆ.

ಇನ್ನು ತಮಿಳುನಾಡಿನಲ್ಲಿ ಈ ಕೆಲವು ದಿವಸಗಳಲ್ಲಿ ಮತಾಂತರ ಮಾಡುವುದು ಸುದ್ದಿ ಇತ್ತು ಅದು ಇತ್ತೀಚೆಗೆ ನಮ್ಮ ರಾಜ್ಯದಲ್ಲಿಯೂ ಕೂಡ ಪ್ರಾರಂಭವಾಗಿದೆ. ಈ ಮತಾಂತರ ಹರಿಜನ ಮತ್ತು ಗಿರಿಜನ ಮತಾಂತರವಾಯಿತು. ನನ್ನ ಭಾಷೆಯಲ್ಲಿ ಈ ಮತಾಂತರದ ಇದು ಮೊದಲನೆಯ ಬಾರಿಗೆ ನಮ್ಮ ರಾಜ್ಯದಲ್ಲಿ ನಡೆದಿದೆ ಎಂದು ನಾನಾದರೂ ತಿಳಿದುಕೊಂಡಿರುತ್ತೇನೆ. ಈ ಮತಾಂತರ ತಮಿಳುನಾಡಿನಲ್ಲಿ ನಡೆದಾಗ ಕೇಂದ್ರ ಸರ್ಕಾರದ ಮಂತ್ರಿಗಳು ಬಂದು ನೋಡಿಕೊಂಡು ಹೋಗಿದ್ದಾರೆ. ರಾಜ್ಯ ಸರ್ಕಾರದ ಮಂತ್ರಿಗಳು ಹೋಗಿ ನೋಡಿಕೊಂಡು ಹೋಗಿದ್ದಾರೆ. ಆದರೆ ಇದರ ಬಗ್ಗೆ ಕೇಂದ್ರ ಸರ್ಕಾರದವರು ಯಾವ ಒಂದು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಆದ್ದರಿಂದ ಬೆಂಗಳೂರು ಮತ್ತು ಕರ್ನಾಟಕದಲ್ಲಿಯೂ ಈ ಮತಾಂತರ ಮಾತು ಪ್ರಾರಂಭವಾಗಿದೆ ಉದಾಹರಣೆಗೆ ಹೇಳುವುದಾದರೆ ಎರಡು ತಿಂಗಳುಗಳ ಹಿಂದೆ ಬೆಂಗಳೂರಿನ ಶ್ರೀ ರಾಮಪುರದಲ್ಲಿ ಪ್ರೈವೇಟ್ ಸ್ಕೂಲ್ ನಡೆಸುತ್ತಿದ್ದ ಒಬ್ಬ

ಮ್ಯಾನೇಜ್‌ಮೆಂಟ್‌ನ ವ್ಯಕ್ತಿ ಒಬ್ಬ ಆಗ ಒಬ್ಬ ಹರಿಜನ ಯುವಕನನ್ನು ಎದುರಿಸಿ ಆತನನ್ನು ಒಡೆದು ಕಂಬಕ್ಕೆ ಕಟ್ಟಿ ಹಾಕಿದರು ಅಲ್ಲಿ ಇದ್ದ ಸುತ ಮುತ್ತ ಹರಿಜನ ಮತ್ತು ಗಿರಿಜನರು ಪೋಲೀಸರಿಗೆ ದೂರಿಕ್ಕರೊ ಯಾರೂ ಆತನನ್ನು ಕೇಳಲಿಲ್ಲ. ಹರಿಜನ ಮತ್ತು ಗಿರಿಜನರ ಮೇಲೆ ಪ್ರತಿಭಟನೆಗೆ ಮಾಡುತಿದ್ದರೂ ಯಾವ ಪೋಲೀಸ್ ಅಧಿಕಾರಿಗಳೂ ಸಹಾ ಆತನಿಗೆ ರಕ್ಷಣೆ ಕೊಟ್ಟು ಕ್ರಮ ತೆಗೆದುಕೊಳ್ಳಲಿಲ್ಲ ಬದಲು ಆತನನ್ನೇ ಚೆನ್ನಾಗಿ ಹೊಡೆದು ಆತನನ್ನು ಜೈಲಿಗೆ ಹಾಕಿರುತ್ತಾರೆ. ಆ ಕ್ಷೇತ್ರದ ಶಾಸಕರಾದ ಶ್ರೀಮಾನ್ ಲಕ್ಷ್ಮಣ್‌ರವರು ಸಹಾ ಹೋಗಿ ನೋಡಿಕೊಂಡು ಬಂದಿದ್ದಾರೆ. ಪೋಲೀಸ್ ಇಲಾಖೆಯ ಅಧಿಕಾರಿಗಳು ಅವರಿಗೆ ಏತಕ್ಕೆ ರಕ್ಷಣೆ ಕೊಡುವುದಕ್ಕಾಗಲಿಲ್ಲ ? ಸಮಾಜದಲ್ಲಿ ಶೋಷಣೆ ಯಾದ ದಲಿತರಿಗೆ ಪೋಲೀಸ್ ಇಲಾಖೆಯ ರಕ್ಷಣೆ ಇಲ್ಲ. ಬಡವರಿಗೆ ಈ ಸರ್ಕಾರದಲ್ಲಿ ರಕ್ಷಣೆ ಸಿಗುವುದಿಲ್ಲ. ಈ ತಿಳಿವಳಿಕೆ ಇಲ್ಲದ ಜನರಿಗೆ ಯಾರು ರಕ್ಷಣೆ ಕೊಡಬೇಕು ? ನಮ್ಮ ಮಾನ್ಯ ಹರಿಜನ ಶಾಸಕ ಸ್ನೇಹಿತರು ಅನೇಕರು ಹರಿಜನ ಮತ್ತು ಗಿರಿಜನರಿಗೆ ಎಲ್ಲಾ ಹುದ್ದೆಗಳಲ್ಲಿಯೂ ೧೮ ಪರ್ಸೆಂಟ್ ಮೀಸಲಾತಿ ಇರಬೇಕೆಂದು ಹೇಳುತ್ತಾರೆ ಆದರೆ ಈ ಪ್ರಸಂಗದ ಮೇಲೆ ಯಾರಾದರೂ ಮಾನ್ಯ ಸದಸ್ಯರು ಮಾತನಾಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಯಾರೂ ಮಾತನಾಡಲಿಲ್ಲ. ಆದ್ದರಿಂದ ಬಡ ಹರಿಜನ ಮತ್ತು ಗಿರಿಜನರು ಹೇಳುತ್ತಾರೆ ನಮಗೆ ಈ ಸಮಾಜದಲ್ಲಿ ಬದುಕಿ ಬಾಳುವುದಕ್ಕೆ ಒಂದು ಸ್ಥಾನಮಾನ ಬೇಕು ಮತ್ತು ರಕ್ಷಣೆ ಇರಬೇಕು, ಆ ರಕ್ಷಣೆ ಇರದಿದ್ದರೆ ನಾವು ಜೀವನ ಮಾಡುವುದು ಹೇಗೆ ? ನಮಗೆ ಬೇಕಾಗಿರುವುದು ಸಮಾಜದಲ್ಲಿ ರಕ್ಷಣೆ ಮತ್ತು ಗೌರವ ಅದು ಒಂದು ಇದ್ದರೆ ನಾವು ಹೇಗಾದರೂ ಜೀವನ ಮಾಡಬಹುದು ನಮಗೆ ರಕ್ಷಣೆ ಇಲ್ಲದೆ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟರೆ ಏನು ಪ್ರಯೋಜನ್ವ ಎಂದು ಅವರು ಕೇಳುತ್ತಾರೆ. ಆದ್ದರಿಂದ ಸರ್ಕಾರದವರು ಈ ಶ್ರೀರಾಮಪುರದ ಪ್ರಸಂಗದ ಬಗ್ಗೆ ತೀವ ಗಮನವನ್ನು ತೆಗೆದುಕೊಂಡು ಇದರ ಬಗ್ಗೆ ಒಂದು ವಿಚಾರಣೆ ನಡೆಸಬೇಕೆಂದು ನಾನು ಸಲಹೆ ಕೊಡುತ್ತೇನೆ. ಸರ್ಕಾರದವರು ಇದರ ಬಗ್ಗೆ ಒಂದು ತೀವ್ರ ಕಾರ್ಯಕ್ರಮ ತೆಗೆದುಕೊಂಡರೆ ರಾಜ್ಯದಲ್ಲಿ ತನ್ನಷ್ಟಕ್ಕೆ ಮತಾಂತರದ ಬೆದರಿಕೆ.

೭ ಪಿ.ಎಂ.

ಅದೇ ಬಡವರನ್ನು ಸರ್ಕಾರದ ಅಧಿಕಾರಿಗಳನ್ನು ಒಳಾಡಳಿತ ಇಲಾಖೆಯವರು ಯಾವ ರೀತಿ ನೋಡಿಕೊಳ್ಳುತ್ತಿದ್ದಾರೆಂದರೆ, ಒಂದು ರೀತಿಯಲ್ಲಿ ನಿಷ್ಠೆಯಿಂದ ಕೆಲಸ ಮಾಡಬೇಕಾದರೆ, ಅಂತಹವರ ಕಾರ್ಯದಲ್ಲಿ ಇವರು ಅಡ್ಡಿ ಹೋಗುವುದು ಒಂದು ಕಡೆಯಾದರೆ ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲ. ಅಂತಹವರಿಗೆ ಶಿಕ್ಷೆ ಕೊಡದೆ ಅವರಿಗೆ ರಕ್ಷಣೆಯನ್ನು ಕೊಡುವುದು ಇನ್ನೊಂದು ಕಡೆ ನಡೆಯುತ್ತಿದೆ. ಈ ಒಳಾಡಳಿತ ಇಲಾಖೆ ಕಳೆದ ೧೮ ತಿಂಗಳುಗಳಿಂದ ಯಾವ ರೀತಿ ನಡೆದುಕೊಂಡು ಹೋಗುತ್ತಿದೆ ಎಂಬುದಕ್ಕೆ ಈ ಮೇಲೆ ಕೆಲವು ಉದಾಹರಣೆಗಳೇ ಸಾಕು.

ಇನ್ನು ಸಿ. ಒ. ಡಿ. ಬಗ್ಗೆ ಹೇಳಬೇಕೆಂದರೆ, ಈ ಮನೆಯಲ್ಲಿ ಯಾವುದೇ ಪ್ರಕರಣ ಬಂದರೂ ಸಹ ನಮಗೆ ಪೋಲೀಸರಲ್ಲಿ ವಿಶ್ವಾಸವಿಲ್ಲ, ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ, ಆದ್ದರಿಂದ ಪ್ರಕರಣವನ್ನು ಸಿ.ಒ.ಡಿ.ಗೆ ವಹಿಸಿ ಎಂದು ನಾವು ಹೇಳುತ್ತೇವೆ. ಮಾನ್ಯ ದೇವೇಗೌಡರು ಹೇಳಿದಂತೆ ಕಳೆದ ಒಂದೂವರೆ ವರ್ಷದಿಂದ ಅನೇಕ ಪ್ರಕರಣಗಳನ್ನು ಆ ಇಲಾಖೆಗೆ ಕಳುಹಿಸಿದ್ದೇವೆ ಮುಖ್ಯವಾಗಿ ಹೇಳಬೇಕೆಂದರೆ, ಉದ್ಯೋಗ ದೃಢೀಕರಣ ಯೋಜನೆಯ ಕೆಳಗೆ ಆನೇಕಲ್, ಶಿಕಾರಿಪುರ ಹಾಗೂ ತುಮಕೂರು ಜಿಲ್ಲೆಯ ಶಿರಾದಲ್ಲಿ ನಡೆದ ಪ್ರಕರಣಗಳನ್ನು ತನಿಖೆ ಮಾಡಲು ಸಿ.ಒ.ಡಿ.ಗೆ ಕಳುಹಿಸಲಾಗಿತ್ತು. ಆದರೆ ಅಲ್ಲಿಂದ ಇನ್ನೂ ವರದಿ ಬಂದಿಲ್ಲ. ಅದೇ ರೀತಿ ಇಬ್ರಾಹಿಂ ಮಾಯಣ ಪ್ರಕರಣವಾದಂಥ ಫ್ಲೋರ್ ಮಿಲ್ಸ್ ಪ್ರಕರಣವನ್ನು ಸಿ.ಬಿ.ಐ.ಗೆ ರೆಫರ್ ಮಾಡಿದ ಮೇಲೆ ಅಲ್ಲಿಂದ ಇನ್ನೂ ವರದಿ ಬಂದಿಲ್ಲ ಸಿ.ಒ.ಡಿ. ಇಲ್ಲವೇ ಸಿ. ಬಿ. ಐ. ಗೆ ಕಳುಹಿಸಿದರೆ ನಮಗೆ ನ್ಯಾಯ ಸಿಗುತ್ತದೆಂದು ಅನೇಕ ಪ್ರಕರಣಗಳನ್ನು ಅವರಿಗೆ ವಹಿಸಲಾಗಿತ್ತು. ಆದರೆ ವರದಿಗಳೇ ಬಂದಿಲ್ಲ. ಬಂದಿದ್ದರೆ ಅವುಗಳನ್ನು ಈ ಸದನದ ಮುಂದಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ೧೯೭೯-೮೦ರಲ್ಲಿ ಈ ಇಲಾಖೆಗೆ ೨೮ ಕೋಟಿ ೫೭ ಲಕ್ಷ ರೂ. ಗಳು ವೆಚ್ಚವಾಗಿದ್ದರೆ ೧೯೮೦-೮೧ರಲ್ಲಿ ೩೮ ಕೋಟಿ ೨೯ ಲಕ್ಷ ರೂ. ಗಳು ವೆಚ್ಚವಾಗಿದೆ. ಅಂದರೆ ೧೦ ಕೋಟಿ ರೂ. ಗಳಷ್ಟು ಹೆಚ್ಚು ಒಂದು ವರ್ಷದಲ್ಲಿ ಖರ್ಚಾಗಿದೆ. ಇದು ಯಾವ ಯಾವ ಬಾಬಿಗೆ ಆಗಿದೆ ಎಂಬುದನ್ನು ಮಾನ್ಯ ಮುಖ್ಯ

ಮಂತ್ರಿಗಳು ತಿಳಿಸಬೇಕಾಗುತ್ತದೆ. ನನಗೆ ತಿಳಿದಂತೆ ಇದು ಜನ ಸಾಮಾನ್ಯರಿಗೆ ರಕ್ಷಣೆ ಕೊಡಲು ಖರ್ಚಾಗಿಲ್ಲ, ಕೆಲವಾರು ತಿಂಗಳುಗಳಿಂದ ವಿಧಾನ ಸೌಧದ ರಕ್ಷಣೆಗೆ ಹಾಗೂ ಮಂತ್ರಿಗಳಿಗೆ ರಕ್ಷಣೆ ಕೊಡಲು ಈ ಹಣ ವ್ಯಯವಾಗಿರಬಹುದು ಇಲ್ಲವೇ ಪತ್ರಿಕೆಗಳ ಹಾಗೂ ವಿರೋಧ ಪಕ್ಷಗಳ ಕಾರ್ಯ ಚಟುವಟಿಕೆಗಳನ್ನು ನೋಡಿಕೊಳ್ಳಲು ಇಂಟಲಿಜೆನ್ಸ್ ಇಲಾಖೆಯನ್ನು ಇಂಪ್ರೂವ್ ಮಾಡಲು ಈ ಹೆಚ್ಚಿನ ಹಣ ಖರ್ಚಾಗಿರಬಹುದು ಇಲ್ಲದಿದ್ದರೆ ಯಾವುದಕ್ಕೆ ಖರ್ಚಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಈ ಇಲಾಖೆಯಲ್ಲಿ ೩೫ ರಿಂದ ೪೯ ಸಾವಿರ ಅಧಿಕಾರಿಗಳು ಇದ್ದಾರೆ. ಇವರುಗಳ ಪೈಕಿ ಪೋಲೀಸ್ ಕಾನ್ಸ್‌ಟೇಬಲ್‌ಗಳೇ ೨೯ ಸಾವಿರ ಮಂದಿ ಇದ್ದಾರೆ. ಜನರ ಕಣ್ಣಿಗೆ ಬೀಳುವವರು ಇವರೇ. ಮೇಲಿನ ಅಧಿಕಾರಿಗಳು ಜನರ ಕಣ್ಣಿಗೆ ಬೀಳುವುದಿಲ್ಲ. ಏನಿದ್ದರೂ ಪೋಲೀಸ್ ಸಬ್–ಇನ್ಸ್‌ಪೆಕ್ಟರ್ ಕೆಳಗಿರುವವರೇ ಜನರ ಮಧ್ಯ ಸಂಪರ್ಕ ಇಟ್ಟುಕೊಂಡಿರುವುದು. ಕಾನ್ಸ್‌ಟೇಬಲ್ಸ್ ಹಾಗೂ ಹೆಡ್‌ಕಾನ್ಸ್‌ಟೇಬಲ್ಸ್ ಏನಿದ್ದಾರೆ, ಇವರುಗಳೇ ಜನರ ಮಧ್ಯ ಹೆಚ್ಚಿನ ಸಂಪರ್ಕ ಇಟ್ಟುಕೊಂಡಿರುತ್ತಾರೆ ಆದ್ದರಿಂದ ಇವರುಗಳ ವೇತನ ಹೆಚ್ಚು ಮಾಡಲು ಹಾಗೂ ಇತರೇ ಅನುಕೂಲಗಳನ್ನು ಕಲ್ಪಿಸಿಕೊಡಲು ಈ ಹತ್ತು ಕೋಟಿ ರೂ. ಗಳಲ್ಲಿ ಎಷ್ಟು ಖರ್ಚು ಮಾಡಲಾಗಿದೆಯೋ ಹೇಗೆ ಎಂಬುದನ್ನು ತಿಳಿಸಬೇಕು.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಜನಸಾಮಾನ್ಯರು ಸರ್ಕಾರಕ್ಕೆ ಕಳುಹಿಸಿಕೊಡುವಂತಹ ಅರ್ಜಿಗಳು ೧೫ ದಿವಸ ಇಲ್ಲವೇ ಒಂದು ತಿಂಗಳಲ್ಲಿ ವಿಲೇವಾರಿಯಾಗಬೇಕೆಂದು ಹಾಗೂ ಆ ಬಗ್ಗೆ ಸಂಬಂಧಪಟ್ಟವರಿಗೆ ತೆಗೆದುಕೊಂಡ ತೀರ್ಮಾನದ ಬಗ್ಗೆ ತಿಳಿಸಬೇಕೆಂದು ಮುಖ್ಯ ಮಂತ್ರಿಗಳು ಎಲ್ಲ ಇಲಾಖೆಗಳಿಗೂ ತಿಳಿಸಿದ್ದಾರೆ. ಆದರೆ ಈಗ ನಾವೇನಾದರು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದರೆ ಅಕ್ನಾಲೆಡ್ಜ್‌ಮೆಂಟ್ ಬರುತ್ತದೆ, ಆದರೆ ಬೇರೆ ಇಲಾಖೆಗಳಿಗೆ ಪತ್ರ ಬರೆದರೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಅಲ್ಲಿಂದ ಉತ್ತರವೇ ಬರುತ್ತಿಲ್ಲ. ಮುಖ್ಯ ಮಂತ್ರಿಗಳು ಒಂದು ತಿಂಗಳಲ್ಲಿ ಉತ್ತರ ಕಳುಹಿಸಬೇಕೆಂದು ಹೇಳಿದರೂ ಸಹ ಅವರು ಉತ್ತರ ಕೊಡುತ್ತಿಲ್ಲ.

ಇನ್ನು ಫೈಲ್‌ಗಳ ವಿಲೇವಾರಿ ಕೆಲಸ ನೋಡಿಕೊಳ್ಳಲು ಅಡಿಷನಲ್ ಚೀಫ್–ಸೆಕ್ರೆಟರಿ ಒಬ್ಬರು ಇದ್ದಾರೆ. ಜೊತೆಗೆ ಅವರ ಕೈ ಕೆಳಗೆ ಪ್ರತ್ಯೇಕವಾದಂಥ ಸ್ಟ್ಯಾಫ್ ಇದೆ. ಇವರು ತಾಲ್ಲೂಕ್ ಮಟ್ಟದವರೆಗೆ ಹೋಗಿ ಫೈಲ್ ವಿಲೇವಾರಿ ಬಗ್ಗೆ ಸೂಪರ್‌ವೈಜ್ ಮಾಡಬೇಕಾದರೆ ಮತ್ತು ಅವುಗಳನ್ನು ವಿಲೇವಾರಿ ಮಾಡಬೇಕಾದರೆ ತಾಲ್ಲೂಕ್ ಮಟ್ಟದವರೆಗೂ ಅವರ ಅಧೀನದಲ್ಲಿ ಅಧಿಕಾರಿಗಳು ಇರಬೇಕಾಗುತ್ತದೆ. ಅಂದರೆ ಜನರಲ್ ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳುತ್ತಿರುವ ಚೀಫ್ ಸೆಕ್ರೆಟರಿ ಅವರಿಗೆ ಪ್ಯಾರಲಲ್ ಆಗಿ ಪ್ರತ್ಯೇಕವಾದಂಥ ಒಂದು ಇಲಾಖೆ ಇರಬೇಕಾಗುತ್ತದೆ. ಇಲ್ಲಿಯವರೆಗೆ ಸಾವಿರಾರು ಫೈಲ್‌ಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಇನ್ನೂ ಬಾಕಿ ಇರುವ ಫೈಲುಗಳನ್ನು ವಿಲೇವಾರಿ ಮಾಡಲು ಒಂದು ಕೊನೆಯ ತಾರೀಖನ್ನು ನಿಗದಿ ಮಾಡಿ ಅಲ್ಲಿಂದ ಮುಂದಕ್ಕೆ ಬರುವಂತಹ ಫೈಲ್‌ಗಳನ್ನು ಆಯಾ ದಿವಸವೇ ಬಾಕಿ ಇಡದಂತೆ ವಿಲೇವಾರಿ ಮಾಡಬೇಕೆಂದು ತಾವು ತಿಳಿಸಿದ್ದೀ ಆದರೆ ಇದಕ್ಕಾಗಿಯೇ ಒಂದು ಪ್ರತ್ಯೇಕ ಇಲಾಖೆ ಬೇಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಕೊನೆಯ ತಾರೀಖು ಯಾವುದೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು.

ಇನ್ನು ೩–೪ ವರ್ಷಗಳ ಮಧ್ಯೆ ನೌಕರರನ್ನು ಸ್ಥಳದಿಂದ ಸ್ಥಳಕ್ಕೆ ವರ್ಗ ಮಾಡಬಾರದೆಂದು ಮುಖ್ಯ ಮಂತ್ರಿಗಳು ತೆಗೆದುಕೊಂಡಿರುವ ತೀರ್ಮಾನ ಒಳ್ಳೆಯದೇ ಆಗಿದೆ. ಆದರೆ ಮೇಲಿನ ಅಧಿಕಾರಿಗಳು ತಮ್ಮ ಅಧೀನದಲ್ಲಿರುವ ನೌಕರರನ್ನು ತಮ್ಮ ಒಂದು ಹಠ ಸಾಧನೆಗಾಗಿ ನೌಕರರು ಕಷ್ಟ ಗೊತ್ತಿದ್ದರೂ ಸಹ ಬೇರೆ ಕಡೆಗೆ ವರ್ಗ ಮಾಡುವುದು ನಡೆಯುತ್ತಿದೆ. ಒಂದು ಸಲ ವರ್ಗ ಮಾಡಿದ ಮೇಲೆ, ಅದನ್ನು ಏನಾದರು ರದ್ದು ಮಾಡಬೇಕಾದರೆ, ಅದು ಮುಖ್ಯ ಮಂತ್ರಿಗಳ ಮಟ್ಟಕ್ಕೆ ಹೋಗಲೇ ಬೇಕು. ಎರಡನೇ ದರ್ಜೆ ಗುಮಾಸ್ತರಿಗೆ ಸಂಬಂಧಪಟ್ಟ ವಿಚಾರಗಳೂ ಸಹ ಅವರ ಮಟ್ಟದಲ್ಲಿಯೇ ತೀರ್ಮಾನವಾಗಬೇಕಾಗಿದೆ, ಇದರಿಂದ ವಿಷಯ ತ್ವರಿತವಾಗಿ ತೀರ್ಮಾನವಾಗಲು ಹಾಗೂ ನ್ಯಾಯ ಸಿಗುವುದು ಕಷ್ಟವಾಗುತ್ತದೆ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ರೆವಿನ್ಯೂ ಇಲಾಖೆಗೆ ಸೇರಿದ ಎರಡನೇ ದರ್ಜೆ ಗುಮಾಸ್ತರೊಬ್ಬರು ಕೋಲಾರದ ಹೌಸಿಂಗ್ ಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಇನ್ನು ಒಂದು ಇಲ್ಲವೇ ಒಂದೂವರೆ ವರ್ಷದಲ್ಲಿ ನಿವೃತ್ತರಾಗಬೇಕಾಗಿದೆ. ಅವರಿಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ. ಅಂತಹವರನ್ನು ರೆವಿನ್ಯೂ ಇಲಾಖೆಗೆ ವಾಪಸ್ ಕರೆಸಿಕೊಂಡು ಈಗ ಗೌರಿಬಿದನೂರಿಗೆ ವರ್ಗ ಮಾಡಿದ್ದಾರೆ. ಅನಂತರ ಅವರು ತಮ್ಮ ಕಷ್ಟವನ್ನು ಡಿವಿಜನಲ್ ಕಮೀಷನರ್ ಹತ್ತಿರ ಹೇಳಿಕೊಂಡರು. ಆದರೆ ಅವರ ವರ್ಗ ರದ್ದಾಗಲಿಲ್ಲ. ನಂತರ ರೆವಿನ್ಯೂ ಕಮೀಷನರ್ ಹತ್ತಿರ ಹೇಳಿ

ಕೊಂಡರು. ಆಗಲೂ ವರ್ಗ ರದ್ದಾಗಲಿಲ್ಲ. ಅವರು ಈಗ ೩-೪ ತಿಂಗಳುಗಳಿಂದ ರಜಾದ ಮೇಲಿದ್ದಾರೆ. ಈಗ ಅವರು ಕೊನೆಯದಾಗಿ ವರ್ಗವನ್ನು ರದ್ದು ಮಾಡಲು ಸಾಧ್ಯವಾಗದಿದ್ದರೆ ವಾಲಂಟರಿ ರಿಟೈರ್‌ಮೆಂಟ್‌ಗೆ ಅವಕಾಶ ಮಾಡಿಕೊಡಿ ಎಂದು ಕೊನೆಯದಾಗಿ ಮನವಿ ಮಾಡಿಕೊಂಡಿದ್ದಾರೆ. ಇದು ಮುಖ್ಯ ಮಂತ್ರಿಗಳ ಮಟ್ಟಕ್ಕೆ ಏನಾದರು ಹೋದರೆ ಅವರು ಖಂಡಿತವಾಗಿಯೂ ವರ್ಗವನ್ನು ರದ್ದು ಮಾಡುತ್ತಾರೆ. ಆದರೆ ಅವರ ಮಟ್ಟಕ್ಕೆ ಅವರ ಫೈಲನ್ನು ಕಳುಹಿಸಿಕೊಡುತ್ತಿಲ್ಲ. ಈಗಿನ ಒಂದು ನೀತಿಗೆ ಬದಲು ಎರಡನೇ ದರ್ಜೆ ಗುಮಾಸ್ತರ ವರ್ಗವನ್ನು ರದ್ದು ಮಾಡುವಂತಹ ಒಂದು ಅಧಿಕಾರವನ್ನು ಮುಖ್ಯ ಮಂತ್ರಿಗಳು ಆ ಇಲಾಖೆಯ ಮೇಲ್ಪಟ್ಟ ಅಧಿಕಾರಿಗೆ ಅಥವಾ ಇಲಾಖಾ ಮಂತ್ರಿಗೆ ಕೊಟ್ಟರೆ ನ್ಯಾಯ ಬೇಗ ದೊರಕುತ್ತದೆಂದು ಹೇಳುತ್ತೇನೆ. ಇಂಥಾದ್ದೆಲ್ಲಾ ಮುಖ್ಯ ಮಂತ್ರಿಗಳ ಮಟ್ಟಕ್ಕೆ ಹೋಗ ಬೇಕು ಎಂಬುದು ಸರಿಯಾದ ಕ್ರಮವಲ್ಲ. ಕೊನೆಯದಾಗಿ ಎರಡು ವಿಷಯಗಳಿಗೆ ಸೀಮಿತ ಮಾಡುತ್ತೇನೆ. ಮಂತ್ರಿಗಳಿಗೆ ರಕ್ಷಣಾ ಸಿಬ್ಬಂದಿ ಹೊಸದಾಗಿ ಒದಗಿಸಲಾಗಿದೆ ಯಾವ ಒಂದು ಪ್ರಜಾ ಪ್ರಭುತ್ವ ರಾಷ್ಟ್ರದಲ್ಲಿ ಇದು ಇರಲಿಕ್ಕಿಲ್ಲ. ಮಿಡ್ಲ್ ಈಸ್ಟ್ ಕಂಟ್ರೀಸ್, ಸೌತ್ ಅಮೇರಿಕನ್ ಕಂಟ್ರೀಸ್‌ನಲ್ಲಿ ಏನಾದರೂ ಇರಬಹುದೇನೋ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಪ್ರತಿಯೊಬ್ಬ ಮಂತ್ರಿಯ ಕಾರಿನ ಹಿಂದೆ ರಕ್ಷಣಾ ದಳ ಹೋಗುತ್ತಿದೆ. ಸ್ಟೇಟ್ ಮಿನಿಸ್ಟರ್‌ಗಳಿಗೆ ೧೨ ಕಾರುಗಳನ್ನು ಕೊಂಡುಕೊಂಡಿದ್ದೇವೆಂದು ಹೇಳಿದ್ದಾರೆ. ಇರತಕ್ಕಂಥ ೩೦ ಮಂತ್ರಿಗಳಿಗೆ ಅಷ್ಟು ಕಾರುಗಳಿವೆ, ಪ್ರತಿಯೊಂದು ಕಾರಿನಲ್ಲೂ ೫ ಜನ ರಕ್ಷಣಾಕಾರರು ಇದ್ದಾರೆ, ಇವರಿಗೆಲ್ಲಾ ಎಷ್ಟು ವೆಚ್ಚವಾಗುತ್ತಾ ಇದೆ, ಈ ವೆಚ್ಚವಾಗುವುದು ಸಾಧುವೇ, ಇದು ಬೇಕಾಗಿದೆಯೇ. ಜನಗಳನ್ನು ಸಂಪರ್ಕ ಮಾಡಿ ಅವರ ಕಷ್ಟ ಸುಖಗಳನ್ನು ಅರಿತುಕೊಂಡು ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕುವಂಥ ಮಂತ್ರಿಗಳು ಪ್ರಜಾ ಪ್ರಭುತ್ವದಲ್ಲಿ ಇವರಿಗೆ ಪೋಲೀಸ್ ರಕ್ಷಣೆ ಕೊಟ್ಟರೆ ಇವರ ಹತ್ತಿರ ಜನಗಳು ಹೇಗೆ ಹೋಗುತ್ತಾರೆ. ರೈಫಲ್‌ಗಳನ್ನು ಹಿಂದೆ ಇಟ್ಟುಕೊಂಡು ಮಂತ್ರಿಗಳು ಹೋದಾಗ, ಅವರ ಕಷ್ಟಸುಖಗಳನ್ನು ಹೇಳಬೇಕಾದರೆ, ಅಥವಾ ಯಾವುದೇ ಅಧಿಕಾರಿ ಮೇಲೆ ದೂರು ಹೇಳಬೇಕಾದರೆ ಮಂತ್ರಿಗಳ ಹತ್ತಿರ ಸಾಮಾನ್ಯ ಪ್ರಜೆಗಳು ಯಾರು ತಾನೆ ಧೈರ್ಯದಿಂದ ಬರುತ್ತಾರೆ, ಇದರ ಬಗ್ಗೆ ನಾನು ತೀವ್ರವಾಗಿ ಹೇಳುತ್ತಾ ಇದ್ದೇನೆ. ದಯವಿಟ್ಟು ಈ ಪದ್ಧತಿಯನ್ನು ರದ್ದು ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳಿಗೆ ಮೊದಲಿಂದಲೂ ರಕ್ಷಣೆ ಕೊಡುವ ಈ ಪದ್ಧತಿ ಇದೆ ಅದು ಹಿಂದಿನಿಂದ ಬಂದಿದೆ. ಅದು ಪ್ರಜಾ ಪ್ರಭುತ್ವದಲ್ಲಿ ಇರಬಾರದು, ಹಿಂದಿನಿಂದ ಬಂದಿದೆ, ಅದು ಒಂದು ತರಹ. ಆದರೆ ಬೇರೆ ಮಂತ್ರಿಗಳಿಗೆ ಏನು ರಕ್ಷಣಾ ಸಿಬ್ಬಂದಿ ಇದೆ, ಅವರ ಹಿಂದೆ ಕಾರುಗಳು ಹೋಗುವುದು. ಅದನ್ನು ಈಗಲೇ ರದ್ದು ಮಾಡಬೇಕು ಎಂದು ಒತ್ತಾಯ ಮಾಡುತ್ತಾ ಇದ್ದೇನೆ. ಮತ್ತೆ ಜಾಗೃತ ಆಯೋಗದವರು ಕೆಲವಾರು ಕೇಸುಗಳನ್ನು ಹಿಡಿದು ರೈಡ್ ಮಾಡಿದ್ದಾರೆ, ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇದ್ದಾರೆ. ಆದರೆ ಇವರು ಕೇವಲ ಒಂದೇ ಒಂದು ಇಲಾಖೆ ಮೇಲೆ ರೈಡ್ ಮಾಡುವುದಕ್ಕೆ ಏನು ಕಾರಣ, ಪಿ.ಡಬ್ಲ್ಯು.ಡಿ ಒಂದರಲ್ಲೇ ಏನು ಭ್ರಷ್ಟಾಚಾರವಿರುವುದು ಮೆಡಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಭ್ರಷ್ಟಾಚಾರವಿಲ್ಲವೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಭ್ರಷ್ಟಾಚಾರವಿಲ್ಲವೆ, ಯಾವುದರಲ್ಲಿ ಭ್ರಷ್ಟಾಚಾರವಿಲ್ಲ, ಎಲ್ಲಾ ಇಲಾಖೆ ಮೇಲೂ ರೈಡ್ ಮಾಡಿ ಹೊರಗೆ ಎಳೆಯಲಿ. ಎಲ್ಲಾ ಇಲಾಖೆಗಳ ಮೇಲೆ ರೈಡ್ ಮಾಡಿದರೆ ಸರ್ಕಾರದ ಪ್ರತಿಯೊಂದು ಅಂಗದಮೇಲೂ ಮಾಡಿದ್ದಾರೆಂದು ತೋರ್ಪಡಿಸುವುದಕ್ಕೋಸ್ಕರವಾದರೂ ಮಾಡಬೇಕು, ಈ ಕೆಲಸ ಮಾಡದೇ ಹೋದರೆ ಇವು ಯಾವುದೋ ಒಂದು ಉದ್ದೇಶವಿಟ್ಟುಕೊಂಡು ಮಾಡುತ್ತಿದ್ದಾರೆಂದು ಜನಗಳಲ್ಲಿ ಸಂಶಯ ಬರಲಿಕ್ಕೆ ಆಸ್ಪದವಾಗುತ್ತದೆ. ಆ ಭಾವನೆ ಬರದಹಾಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಭ್ರಷ್ಟರನ್ನು ರಕ್ಷಣೆ ಮಾಡುವುದಕ್ಕೆ ಯಾರಿಗೂ ಇಷ್ಟವಿಲ್ಲ, ಆದರೆ ಇದನ್ನು ಕೇವಲ ಒಬ್ಬರಿಗೇ ಸೀಮಿತ ಮಾಡದೆ. ವ್ಯಾಪಕವಾಗಿ ಮಾಡಿ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾ, ಇನ್ನೂ ಕೆಲವಾರು ವಿಷಯಗಳು ಮಾತನಾಡುವುದಕ್ಕೆ ಇದ್ದರೂ ಕಾಲ ಇಲ್ಲದೇ ಇರುವುದರಿಂದ, ತಾವು ನನಗೆ ಅಪ್ಪಣೆ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—Discussion on Demands is concluded today. The Chief Minister will reply tomorrow, morning. There will not be question hour in the morning. Now the House stands adjourned to meet tomorrow at 9.00 A.M.

The House adjourned at Three Minutes Past Seven of the Clock to meet again at Nine of the Clock on Wednesday, the 29th July 1981.

W .D. 4662